epaper - karnatakamalla.com

# ಕರ್ನಾಟಕ ಮಲ್ಲ

TEL: 24715208, Fax:24715237 | ಮುಂಬಯಿಯಿಂದ ಪ್ರಕಟಿತ ಏಕೈಕ ಸಮಗ್ರ ಕನ್ನಡ ದೈನಿಕ | KARNATAKA MALLA, MUMBAI

ಸಂಪುಟ : 35 ಸಂಚಿಕೆ : 33 ಶನಿವಾರ 07-03-2026 ಬೆಲೆ : ₹ 6 ಪುಟಗಳು - 12 ಸಂಪಾದಕ: ಚಂದ್ರಶೇಖರ ಪಾಲೆತ್ತಾಡಿ



# ಸಸಿಹಿತ್ಲು ಶ್ರೀ ಭಗವತೀ ದೇವಸ್ಥಾನ

## SASIHITHLU SHREE BHAGAVATHI DEVASTHANA

Post: Haleangadi, Mangaluru Taluk - 574 146, D.K. Ph: 0824-2478070, Mob: 9741130690




ಬ್ರಹ್ಮಕಲಶೋತ್ಸವ
ಮಾರ್ಚ್ 7 ಮತ್ತು 8

### ದಿನಾಂಕ : 07-03-2026, ಶನಿವಾರ ವೈದಿಕ ಕಾರ್ಯಕ್ರಮ

ಬೆಳಿಗ್ಗೆ ಗಂಟೆ 7.00 ರಿಂದ : : ಪ್ರಾಯಶ್ಚಿತ್ತ ಹೋಮ, ತತ್ವಹೋಮ, ತತ್ವಕಲಶ, ಗಣಯಾಗ । ಮಧ್ಯಾಹ್ನ ಗಂಟೆ 12.30ರಿಂದ : ಮಹಾ ಅನ್ನಸಂತರ್ಪಣೆ

ಸಂಜೆ ಗಂಟೆ 4.30 ರಿಂದ : ಬ್ರಹ್ಮಕಲಶ ಮಂಡಲ ರಚನೆ, ಕಲಶಾಧಿವಾಸ, ಅಧಿವಾಸ ಹೋಮ

ನಡಾವಳಿ ಮಹೋತ್ಸವ
ಎಪ್ರಿಲ್ 10.2026



### ಧಾರ್ಮಿಕ ಸಭಾ ಕಾರ್ಯಕ್ರಮ ಸಂಜೆ ಗಂಟೆ 5.00ರಿಂದ



ಭರಣಿ ಮಹೋತ್ಸವ
ಎಪ್ರಿಲ್ 11 ಮತ್ತು 16

ದೀಪ ಪ್ರಜ್ವಲನೆ : ಶ್ರೀ ಕ್ಯಾಪ್ಟನ್ ಬ್ರಿಜೇಶ್ ಚೌಟ, ಸಂಸದರು, ದಕ್ಷಿಣಕನ್ನಡ ಲೋಕಸಭಾ ಕ್ಷೇತ್ರ ಅಧ್ಯಕ್ಷತೆ : ಶ್ರೀ ವೇದಪ್ರಕಾಶ್ ಎಂ. ಶ್ರೀಯಾನ್, ಅಧ್ಯಕ್ಷರು, ಶ್ರೀ ಭಗವತಿ ದೇವಸ್ಥಾನ ಸಸಿಹಿತ್ಲು ಬ್ರಹ್ಮಕಲಶೋತ್ಸವ ಸಮಿತಿ, ಮುಂಬೈ

ಆಶೀರ್ವಚನ : ಶ್ರೀ ರಾಜಶೇಖರಾನಂದ ಸ್ವಾಮೀಜಿ, ವಜ್ರದೇಹಿ ಮಠ, ಗುರುಪುರ ಶ್ರೀ ಶ್ರೀನಿವಾಸ ಯಾನೆ ಅಪ್ಪು ಪೂಜಾರಿ, ಅನುವಂಶಿಕ ಮೊಕ್ತೇಸರರು ಮತ್ತು ಪ್ರಧಾನ ಅರ್ಚಕರು, ಶ್ರೀ ಭಗವತಿ ದೇವಸ್ಥಾನ ಸಸಿಹಿತ್ಲು

ಮುಖ್ಯ ಅತಿಥಿಗಳು :

- ಶ್ರೀ ಐವನ್ ಡಿ'ಸೋಜ, ವಿಧಾನ ಪರಿಷತ್ ಸದಸ್ಯರು, ಕರ್ನಾಟಕ ಸರಕಾರ
- ಡಾ. ಸದಾಶಿವ ಕೆ. ಶೆಟ್ಟಿ ಕನ್ಯಾನ, ಆಡಳಿತ ನಿರ್ದೇಶಕರು, ಹೇರಂಭ ಇಂಡಸ್ಟ್ರೀಸ್, ಮುಂಬೈ
- ಶ್ರೀ ಪ್ರವೀಣ್ ಭೋಜ ಶೆಟ್ಟಿ, ಅಧ್ಯಕ್ಷರು ಬಂಟರ ಸಂಘ, ಮುಂಬೈ
- ಶ್ರೀ ಸುರೇಶ್ ಕಾಂಚನ್, ಎಮ್.ಡಿ. ಕ್ಲಾಸಿಕ್ ಗ್ರೂಪ್ ಆಫ್ ಹೊಟೇಲ್ಸ್, ಮುಂಬೈ
- ಶ್ರೀ ಸಂತೋಷ್ ಪುತ್ರನ್, ಅಧ್ಯಕ್ಷರು, ಮೊಗವೀರ ಮಹಾಜನ ಸೇವಾ ಸಂಘ, ಮುಂಬೈ
- ಶ್ರೀ ಧರ್ಮಪಾಲ ದೇವಾಡಿಗ, ಅಧ್ಯಕ್ಷರು, ದೇವಾಡಿಗ ಮಹಾಮಂಡಲ
- ಶ್ರೀ ಕರುಣಾಕರ ಶೆಟ್ಟಿ ಎರ್ಮಾಳ್, ಉದ್ಯಮಿ, ಪೆನಿನ್ಸುಲಾ ಸಮೂಹ ಸಂಸ್ಥೆ, ಮುಂಬೈ
- ಶ್ರೀ ರಾಜಶೇಖರ ಆರ್. ಕೋಟ್ಯಾನ್, ನಿಕಟಪೂರ್ವ ಅಧ್ಯಕ್ಷರು, ಬಿಲ್ಲವರ ಮಹಾಮಂಡಲ
- ಶ್ರೀ ಸುನೀಲ್ ಪಾಯಸ್, ಉದ್ಯಮಿ, ಮುಂಬೈ
- ಶ್ರೀ ಎಲ್. ವಿ. ಅಮೀನ್, ಗೌರವಾಧ್ಯಕ್ಷರು, ಬಿಲ್ಲವರ ಅಸೋಸಿಯೇಶನ್, ಮುಂಬೈ
- ಶ್ರೀ ಅಮೃತ್ ಕುಂದರ್, ಮುಂಬೈ, ಸಸಿಹಿತ್ಲು
- ಶ್ರೀ ದಿನೇಶ್ ಕಿರೋಡಿಯನ್, ಉದ್ಯಮಿ, ಮುಂಬೈ
- ಶ್ರೀ ಯೋಗೀಶ್ ಅಂಚನ್, ಕುಳಾಯಿ
- ಶ್ರೀ ಭಾಸ್ಕರ್‌ಸಾಲ್ಯಾನ್, ನಿರ್ದೇಶಕರು ಭಾರತ್ ಕೋ-ಆಪರೇಟಿವ್ ಬ್ಯಾಂಕ್ (ಮುಂಬೈ) ಲಿಮಿಟೆಡ್
- ಡಾ. ಜಿ. ಶಂಕರ್, ಪ್ರವರ್ತಕರು, ಜಿ. ಶಂಕರ್ ಫ್ಯಾಮಿಲಿ ಟ್ರಸ್ಟ್ (ರಿ.), ಉಡುಪಿ
- ಡಾ. ಎಸ್.ವಿ. ಅಂಚನ್ , Chiarman, Safe Sea Group, USA
- ಶ್ರೀ ಗಣೇಶ್ ಕಾಂಚನ್, ಅಧ್ಯಕ್ಷರು, ಮೊಗವೀರ ವ್ಯವಸ್ಥಾಪಕ ಮಂಡಳಿ ಮುಂಬೈ
- ಶ್ರೀ ಹರೀಶ್ ಅಮೀನ್, ಅಧ್ಯಕ್ಷರು, ಬಿಲ್ಲವರ ಅಸೋಸಿಯೇಶನ್, ಮುಂಬೈ
- ಶ್ರೀ ಸಿ. ಬಿ. ಕರ್ಕೇರ, ಉದ್ಯಮಿ, ಮುಂಬೈ
- ಶ್ರೀ ಜಯ ಸಿ. ಕೋಟ್ಯಾನ್, ಅಧ್ಯಕ್ಷರು, ದ.ಕ. ಮೊಗವೀರ ಮಹಾಜನ ಸಂಘ, ಉಚ್ಚಿಲ
- ಶ್ರೀ ಸೂರ್ಯಕಾಂತ್ ಜಯ ಸುವರ್ಣ, ಚೇರ್‌ಮೆನ್, ಭಾರತ್ ಕೋ-ಆಪರೇಟಿವ್ ಬ್ಯಾಂಕ್ (ಮುಂಬೈ) ಲಿಮಿಟೆಡ್
- ಶ್ರೀ ಸುರೇಶ್ ಭಂಡಾರಿ ಕಡಂದಲೆ, ಉದ್ಯಮಿ, ಮುಂಬೈ
- ಶ್ರೀ ಚಂದ್ರಹಾಸ್ ಪಾಲನ್, ಅಧ್ಯಕ್ಷರು, ಸಸಿಹಿತ್ಲು ಶ್ರೀ ಭಗವತೀ ತೀಯಾ ಸಂಘ, ಮುಂಬೈ
- ಶ್ರೀ ಧನಂಜಯ ಶೆಟ್ಟಿ, ಉದ್ಯಮಿ, ಮುಂಬೈ
- ಶ್ರೀ ಕೆ. ಡಿ. ಶೆಟ್ಟಿ, C.M.D., ಭವಾನಿ ಶಿಪ್ಪಿಂಗ್, ಮುಂಬೈ
- ಶ್ರೀ ಗೋಪಾಲ್ ಪುತ್ರನ್, ಎಮ್.ಡಿ. ಇಕ್ವಿಟಿ ಹೊಟೇಲ್ಸ್ ಪ್ರೈ. ಲಿ.. ಮುಂಬೈ
- ಶ್ರೀ ಜಯ ಸಾಲ್ಯಾನ್, ಉದ್ಯಮಿ, ಮುಂಬೈ
- ಶ್ರೀ ಅಜಿತ್ ಸುವರ್ಣ, ಮಾಜಿ ಅಧ್ಯಕ್ಷರು, ಮೊಗವೀರ ವ್ಯವಸ್ಥಾಪಕ ಮಂಡಳಿ, ಮುಂಬೈ

ಮಾರ್ಚ್ 8 ರಂದು ಬ್ರಹ್ಮಕಲಶೋತ್ಸವ

ವಿಶೇಷ ಗೌರವಾರ್ಪಣೆ : ಶ್ರೀಮತಿ ಗುಲಾಬಿ ನೀಲಯ್ಯ ಕೋಟ್ಯಾನ್, ಸಸಿಹಿತ್ಲು

ಗೌರವಾರ್ಪಣೆ : ಶ್ರೀ ಸಂದೀಪ್, ಸಸಿಹಿತ್ಲು

### ಸಾಂಸ್ಕೃತಿಕ ಕಾರ್ಯಕ್ರಮ

ಸಂಜೆ ಗಂಟೆ 3.30 ರಿಂದ ಪದ್ಮನಾಭ ಸಸಿಹಿತ್ಲು ಮುಂಬೈ ಬಳಗದವರಿಂದ ''ಗಾನಸುಧೆ'' । ಸಂಜೆ ಗಂಟೆ 5.00 ರಿಂದ ಧಾರ್ಮಿಕ ಸಭಾ ಕಾರ್ಯಕ್ರಮ

ಸಂಜೆ 7.00 ರಿಂದ 8.30 ವಿದುಷಿ ಚಿತ್ರಾಕ್ಷೀ ಅಜಿತ್ ಕುಮಾರ್ ಬಳಗದವರಿಂದ ನೃತ್ಯ ರೂಪಕ ''ಶಕ್ತಿ ಪೀಠ'' । ರಾತ್ರಿ ಗಂಟೆ 8.30 ರಿಂದ ತ್ರಿನೇತ್ರ ಕಲಾವಿದರು ಮಂಗಳೂರು ಇವರಿಂದ ಅದ್ದೂರಿ ನಾಟಕ 'ಅಕ್ಕಸದ ರಕ್ಕಸೆ'

ಕಥೆ-ಸಂಭಾಷಣೆ-ಸಾಹಿತ್ಯ-ಪರಿಕಲ್ಪನೆ-ನಿರ್ದೇಶನ : ಶ್ರೀ ನರೇಶ್ ಕುಮಾರ್ ಸಸಿಹಿತ್ಲು

### ದಿನಾಂಕ 08-03-2026, ಆದಿತ್ಯವಾರ- ವೈದಿಕ ಕಾರ್ಯಕ್ರಮ

ಬೆಳಿಗ್ಗೆ ಗಂಟೆ 7:00 ರಿಂದ : ಚಂಡಿಕಾ ಯಾಗ । ಬೆಳಿಗ್ಗೆ 11:15 ರ ವೃಷಭ ಲಗ್ನ ಮುಹೂರ್ತದಲ್ಲಿ ಬ್ರಹ್ಮಕಲಶಾಭಿಷೇಕ ಮಹಾ ಪೂಜೆ, ಪಲ್ಲ ಪೂಜೆ ಮಧ್ಯಾಹ್ನ ಗಂಟೆ 12.30ರಿಂದ : ಮಹಾ ಅನ್ನಸಂತರ್ಪಣೆ । ಸಂಜೆ ಗಂಟೆ 6.00 ರಿಂದ : ದೀಪಾರಾಧನೆ, ಭಂಡಾರ ನಿರ್ಗಮನ

### ಧಾರ್ಮಿಕ ಸಭಾ ಕಾರ್ಯಕ್ರಮ - ಸಂಜೆ ಗಂಟೆ 4.00 ರಿಂದ

ದೀಪ ಪ್ರಜ್ವಲನೆ: ಪದ್ಮಶ್ರೀ ಡಾ. ವೀರೇಂದ್ರ ಹೆಗ್ಗಡೆ, ಧರ್ಮಾಧಿಕಾರಿಗಳು, ಶ್ರೀಕ್ಷೇತ್ರ ಧರ್ಮಸ್ಥಳ । ಅಧ್ಯಕ್ಷತೆ: ಶ್ರೀ ನಳಿನ್ ಕುಮಾರ್ ಕಟೀಲು, ಅಧ್ಯಕ್ಷರು, ಬ್ರಹ್ಮಕಲಶೋತ್ಸವ ಸಮಿತಿ, ಶ್ರೀ ಭಗವತೀ ದೇವಸ್ಥಾನ ಸಸಿಹಿತ್ಲು

ಆಶೀರ್ವಚನ: ಪರಮಪೂಜ್ಯ ಶ್ರೀ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ, ಶ್ರೀ ಪೇಜಾವರ ಅಧೋಕ್ಷಜ ಮಠ, ಜಗದ್ಗುರು ಶ್ರೀ ಮಧ್ವಾಚಾರ್ಯ ಮಹಾಸಂಸ್ಥಾನ, ಉಡುಪಿ

ಶ್ರೀ ಶ್ರೀನಿವಾಸ ಯಾನೆ ಅಪ್ಪು ಪೂಜಾರಿ, ಅನುವಂಶಿಕ ಮೊಕ್ತೇಸರರು ಮತ್ತು ಪ್ರಧಾನ ಅರ್ಚಕರು, ಶ್ರೀ ಭಗವತಿ ದೇವಸ್ಥಾನ ಸಸಿಹಿತ್ಲು

ಮುಖ್ಯ ಅತಿಥಿಗಳು:

- ಡಾ. ಯು. ಟಿ. ಖಾದರ್, ಸಭಾಧ್ಯಕ್ಷರು, ಕರ್ನಾಟಕ ವಿಧಾನಸಭೆ
- ಶ್ರೀ ಡಿ. ವೇದವ್ಯಾಸ್ ಕಾಮತ್, ಶಾಸಕರು, ಮಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ
- ಕು. ಭಾಗೀರಥಿ ಮುರುಳ್ಯ, ಶಾಸಕರು, ಸುಳ್ಯ, ವಿಧಾನಸಭಾ ಕ್ಷೇತ್ರ
- ಶ್ರೀ ಸುಧೀರ್ ಕುಮಾರ್ ರೆಡ್ಡಿ, ಪೊಲೀಸ್ ಆಯುಕ್ತರು, ದ.ಕ.
- ಶ್ರೀ ರಾಘವೇಂದ್ರ ಎಸ್. ಭಟ್ ಎಮ್. ಡಿ. ಕರ್ನಾಟಕ ಬ್ಯಾಂಕ್, ಮಂಗಳೂರು
- ಶ್ರೀ ಕೋಟ ಶ್ರೀನಿವಾಸ ಪೂಜಾರಿ, ಸಂಸದರು, ಉಡುಪಿ - ಚಿಕ್ಕಮಗಳೂರು ಲೋಕಸಭಾ ಕ್ಷೇತ್ರ
- ಡಾ. ಭರತ್ ಶೆಟ್ಟಿ ವೈ, ಶಾಸಕರು, ಮಂಗಳೂರು ಉತ್ತರ ವಿಧಾನಸಭಾ ಕ್ಷೇತ್ರ
- ಶ್ರೀ ದರ್ಶನ್ ಎಚ್. ವಿ. ಜಿಲ್ಲಾಧಿಕಾರಿಗಳು, ದ.ಕ.
- ಶ್ರೀ ಚಕ್ರವರ್ತಿ ಸೂಲಿಬೆಲೆ, ಸ್ಥಾಪಕಾಧ್ಯಕ್ಷರು, ಯುವ ಬ್ರಿಗೇಡ್ ಹಾಗೂ ಸೋದರಿ ನಿವೇದಿತಾ ಪ್ರತಿಷ್ಠಾನ
- ಡಾ. ಎಮ್. ಎನ್. ರಾಜೇಂದ್ರ ಕುಮಾರ್, ಅಧ್ಯಕ್ಷರು, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿ.,ಬೆಂಗಳೂರು

ಘನ ಉಪಸ್ಥಿತಿ :

- ವಿದ್ವಾನ್ ವೇದಮೂರ್ತಿ ಶ್ರೀ ಕೃಷ್ಣಮೂರ್ತಿ ಭಟ್, ಹೊಗೆಗುಡ್ಡೆ
- ವೇದಮೂರ್ತಿ ಶ್ರೀ ವೆಂಕಟೇಶ ತಂತ್ರಿ, ಎಡಪದವು
- ಶ್ರೀ ಐಕಳಬಾವ ದೇವಿಪ್ರಸಾದ್ ಶೆಟ್ಟಿ, ನಿರ್ದೇಶಕರು, ದ.ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್
- ಡಾ. ಕೆ. ಪ್ರಕಾಶ್ ಶೆಟ್ಟಿ ಆಡಳಿತ ನಿರ್ದೇಶಕರು, ಎಮ್.ಆರ್.ಜಿ ಗ್ರೂಪ್ ಆಫ್ ಕಂಪೆನಿ, ಬೆಂಗಳೂರು
- ಶ್ರೀ ಶಶಿಧರ್‌ಶೆಟ್ಟಿ ಬರೋಡಾ, ಉದ್ಯಮಿ, ಗುಜರಾತ್
- ಶ್ರೀ ಏಕನಾಥ್ ಎಸ್. ಅಮೀನ್, ಉದ್ಯಮಿ, ಕೋಮಲ್ ಗ್ರೂಪ್ ಮುಂಬೈ
- ಶ್ರೀ ಧೀರಜ್ ಬಂಗೇರ, ಮುಂಬೈ
- ಶ್ರೀ ಚಂದ್ರಹಾಸ್ ಉಳ್ಳಾಲ್, ನಿಕಟಪೂರ್ವ ಅಧ್ಯಕ್ಷರು, ಶ್ರೀ ಚೀರುಂಭ ಭಗವತೀ ಕ್ಷೇತ್ರ, ಉಳ್ಳಾಲ
- ಶ್ರೀ ಶ್ರೀಪತಿ ಭಟ್, ಹೊಗೆಗುಡ್ಡೆ
- ಶ್ರೀ ತೋನ್ಸೆ ಜಯಕೃಷ್ಣ ಶೆಟ್ಟಿ ಅಧ್ಯಕ್ಷರು, ಜಯ ಶ್ರೀ ಕೃಷ್ಣ ಪರಿಸರ ಪ್ರೇಮಿ ಸಮಿತಿ, ಮುಂಬೈ
- ಶ್ರೀಮತಿ ಶೋಭಾ ದೇವರಾಜ್, ಉದ್ಯಮಿ, ಮುಂಬೈ
- ಶ್ರೀ ಕುಮಾರ್ ಬಂಗೇರ, ಕುಮಾರ್ಸ್ ಇಂಟರ್ ನ್ಯಾಶನಲ್ ಗ್ರೂಪ್, ಮುಂಬೈ
- ಡಾ. ಎ. ಶ್ರೀನಿವಾಸ ರಾವ್, ಉಪಕುಲಪತಿ, ಶ್ರೀನಿವಾಸ ವಿಶ್ವವಿದ್ಯಾನಿಲಯ ಮಂಗಳೂರು
- ಶ್ರೀ ಸೂರಜ್ ಬಂಗೇರ, ಉದ್ಯಮಿ, ಮುಂಬೈ, ಸಸಿಹಿತ್ಲು
- ಶ್ರೀ ಕುಮಾರಸ್ವಾಮಿ, ಆಡಳಿತ ಮೊಕ್ತೇಸರರು, ಶ್ರೀ ಭಗವತೀ ದೇವಸ್ಥಾನ,ಕಲೀನ, ಮುಂಬೈ
- ಶ್ರೀ ಸುಕುಮಾರ್ ಉಪ್ಪಳ, ಅಧ್ಯಕ್ಷರು, ಶ್ರೀ ಭಗವತೀ ದೇವಸ್ಥಾನ, ಉಪ್ಪಳ



### ಸಾಂಸ್ಕೃತಿಕ ಕಾರ್ಯಕ್ರಮ

ಮಧ್ಯಾಹ್ನ ಗಂಟೆ 2.30 ರಿಂದ 3.30 ಶಿವಪ್ರಣಾಮ್ (ರಿ.). ಮುಲ್ಕಿ. ಸ್ಕೂಲ್ ಆಫ್ ಡ್ಯಾನ್ಸ್ ಪ್ರಸ್ತುತ ಪಡಿಸುವ ''ನೃತ್ಯ ವೈಭವ'' । ನಿರ್ದೇಶನ : ಅನ್ನಪೂರ್ಣ ರಿತೇಶ್

ಸಂಜೆ ಗಂಟೆ 4.00 ರಿಂದ 6.30 ಧಾರ್ಮಿಕ ಸಭಾ ಕಾರ್ಯಕ್ರಮ **ಸಮುದ್ರ ತೀರದಲ್ಲಿ** ಸಂಜೆ ಗಂಟೆ 6.30 ರಿಂದ 7.30 ''ಗಂಗೆಗೆ ನುಡಿ ನಮನ''- ಶ್ರೀ ಚಕ್ರವರ್ತಿ ಸೂಲಿಬೆಲೆ ಇವರಿಂದ

ರಾತ್ರಿ ಗಂಟೆ 7.30 ರಿಂದ 8.15 ''ಅದ್ದೂರಿ ವೈಭವದ ಗಂಗಾರತಿ'' ರಾತ್ರಿ ಗಂಟೆ 8.15 ರಿಂದ 10.15. ''ಗಂಗಾ ಗಾಯನ'' - ಕಲಾಸಿರಿ ಬಳಗ ಮಂಗಳೂರು, ಖ್ಯಾತ ಗಾಯಕರಿಂದ ''ಭಕ್ತಿ ಭಾವ ಗಾನ''



### ಶುಭ ಕಾರ್ಯಕ್ರಮಗಳಲ್ಲಿ ತಾವೆಲ್ಲರೂ ಭಾಗವಹಿಸಿ ಶ್ರೀಭಗವತಿ ಮಾತೆಯ ಪುಣ್ಯಪ್ರಸಾದವನ್ನು ಸ್ವೀಕರಿಸಿ, ಶ್ರೀದೇವಿಯ ಅನುಗ್ರಹಕ್ಕೆ ಪಾತ್ರರಾಗುವಂತೆ ವಿನಂತಿಸುವ,

ಶ್ರೀ ರೋಹಿದಾಸ್ ಬಂಗೇರ ಮುಂಬೈ, ಗೌರವಾಧ್ಯಕ್ಷರು । ಶ್ರೀ ನಳಿನ್ ಕುಮಾರ್ ಕಟೀಲು ಅಧ್ಯಕ್ಷರು, ಬ್ರಹ್ಮಕಲಶೋತ್ಸವ ಸಮಿತಿ । ಶ್ರೀ ಶ್ರೀನಿವಾಸ ಯಾನೆ ಅಪ್ಪು ಪೂಜಾರಿ ಅನುವಂಶಿಕ ಮೊಕ್ತೇಸರರು, ಪ್ರಧಾನ ಅರ್ಚಕರು ಮತ್ತು ಕೋಶಾಧಿಕಾರಿ

ಶ್ರೀ ಚಂದ್ರಶೇಖರ್ ಬೆಳ್ಚಡ ಗಂಪಮನೆ ಕಟೀಲು, ಆಡಳಿತ ಮೊಕ್ತೇಸರರು । ಶ್ರೀ ವಾಮನ ಇಡ್ಯಾ ಕಾರ್ಯಾಧ್ಯಕ್ಷರು, ಬ್ರಹ್ಮಕಲಶೋತ್ಸವ ಸಮಿತಿ । ಶ್ರೀ ವೇದಪ್ರಕಾಶ್ ಎಂ. ಶ್ರೀಯಾನ್ ಅಧ್ಯಕ್ಷರು, ಬ್ರಹ್ಮಕಲಶೋತ್ಸವ ಸಮಿತಿ, ಮುಂಬಯಿ

ಶ್ರೀ ವಿಶ್ವನಾಥ ಬೆಳ್ಚಡ ಪಂದುಬೆಟ್ಟು, ಆದಿಉಡುಪಿ, ಉಪಾಧ್ಯಕ್ಷರು, ಆಡಳಿತ ಸಮಿತಿ । ಶ್ರೀ ರಮೇಶ್ ಬಂಗೇರ ಕರಿತೋಟ ಪ್ರಧಾನ ಕಾರ್ಯದರ್ಶಿ ಆಡಳಿತ ಸಮಿತಿ ಮತ್ತು ಬ್ರಹ್ಮಕಲಶೋತ್ಸವ ಸಮಿತಿ

ಶ್ರೀ ರಾಜೇಂದ್ರಪ್ರಸಾದ್ ಎಕ್ಕಾರು, ಶ್ರೀ ಶಿವಣ್ಣ ಅಂಚನ್, ಕಾಪು ಜತೆ ಕಾರ್ಯದರ್ಶಿಗಳು, ಆಡಳಿತ ಸಮಿತಿ । ಶ್ರೀ ಸುರೇಶ್ ಕೆ. ಬಂಗೇರ, ತೋಕೂರು ಕೋಶಾಧಿಕಾರಿ ಬ್ರಹ್ಮಕಲಶೋತ್ಸವ ಸಮಿತಿ

ಅಧ್ಯಕ್ಷರು ಮತ್ತು ಸರ್ವ ಸದಸ್ಯರು ಆಡಳಿತ ಸಮಿತಿ ಮತ್ತು ಅಭಿವೃದ್ಧಿ ಸಮಿತಿ । ಅಧ್ಯಕ್ಷರು, ಪದಾಧಿಕಾರಿಗಳು ಮತ್ತು ಸರ್ವ ಸದಸ್ಯರು ಬ್ರಹ್ಮಕಲಶ ಮತ್ತು ಜೀರ್ಣೋದ್ಧಾರ ಸಮಿತಿ ।

ಅಧ್ಯಕ್ಷರು ಮತ್ತು ಸರ್ವ ಸದಸ್ಯರು ಬ್ರಹ್ಮಕಲಶೋತ್ಸವ ಸಮಿತಿ, ಮುಂಬಯಿ । ಆಚಾರ ಪಟ್ಟವರು, ಏಳೂರ ಗುರಿಕಾರರು ಹಾಗೂ ಸಸಿಹಿತ್ಲು ಗ್ರಾಮಸ್ಥರು, ಸಸಿಹಿತ್ಲು ಶ್ರೀ ಭಗವತೀ ದೇವಸ್ಥಾನ

### ಬ್ರಹ್ಮಕಲಶೋತ್ಸವ ಸಮಿತಿ ಮುಂಬೈ

ಗೌರವಾಧ್ಯಕ್ಷರು : ಡಾ. ಸದಾಶಿವ್ ಕೆ. ಶೆಟ್ಟಿ, ಕನ್ಯಾನ ▸ ಶ್ರೀ ಕೃಷ್ಣ ಎನ್ ಉಚ್ಚಿಲ್ ಅಧ್ಯಕ್ಷರು: ಶ್ರೀ ವೇದಪ್ರಕಾಶ್ ಎಂ. ಶ್ರೀಯಾನ್ ಕಾರ್ಯಾಧ್ಯಕ್ಷರು: ಶ್ರೀ ಚಂದ್ರಶೇಖರ ಬೆಳ್ಚಡ, ಗಂಪ ಮನೆ ಕಟೀಲು

ಗೌರವ ಸಲಹೆಗಾರರು- ▸ ಶ್ರೀ ಸುನಿಲ್ ಪಾಯಸ್, ಚೆಂಬೂರ್ ▸ ಶ್ರೀ ಎಲ್. ವಿ. ಅಮೀನ್ ▸ ಶ್ರೀ ತೋನ್ಸೆ ಜಯಕೃಷ್ಣ ಶೆಟ್ಟಿ. ▸ ಶ್ರೀ ವಿರಾರ್ ಶಂಕರ ಶೆಟ್ಟಿ ▸ ಶ್ರೀ ಕಳತ್ತೂರು ವಿಶ್ವನಾಥ ಶೆಟ್ಟಿ ▸ ಶ್ರೀ ಐಕಳ ಹರೀಶ್ ಶೆಟ್ಟಿ ▸ ಶ್ರೀ ಪ್ರವೀಣ್ ಭೋಜ ಶೆಟ್ಟಿ ▸ ಶ್ರೀ ಗಣೇಶ್ ಕಾಂಚನ್ ▸ ಶ್ರೀ ರೋಹಿದಾಸ್ ಬಂಗೇರ ▸ ಶ್ರೀ ಜಯ ಸಿ. ಸಾಲಿಯಾನ್ ▸ ಶ್ರೀ ಕೆ. ಡಿ. ಶೆಟ್ಟಿ ▸ ಶ್ರೀ ಧನಂಜಯ ಶೆಟ್ಟಿ ▸ ಶ್ರೀ ಸೂರ್ಯಕಾಂತ ಜೆ. ಸುವರ್ಣ ▸ ಶ್ರೀ ಹರೀಶ್ ಅಮೀನ್ ▸ ಶ್ರೀ ಸಿ. ಬಿ. ಕರ್ಕೇರ ▸ ಶ್ರೀ ದಿನೇಶ್ ಕಿರೋಡಿಯನ್ ▸ ಶ್ರೀ ಭಾಸ್ಕರ್ ಎಂ. ಸಾಲಿಯಾನ್ ▸ ಶ್ರೀ ಧರ್ಮಪಾಲ್ ದೇವಾಡಿಗ ▸ ಶ್ರೀ ಸುರೇಶ್ ಕಾಂಚನ್ ▸ ಶ್ರೀ ಗೋಪಾಲ ಪುತ್ರನ್ ▸ ಶ್ರೀ ಕುಮಾರ್ ಬಂಗೇರ ▸ ಶ್ರೀ ಕುಮಾರ ಸ್ವಾಮಿ ▸ ಶ್ರೀ ಲಕ್ಷ್ಮಣ ಪೂಜಾರಿ ▸ ಶ್ರೀ ಮನೋಜ್ ನಾಗ್ವಾಲ್ ▸ ಶ್ರೀ ಅಜಿತ್ ಸುವರ್ಣ

ಉಪಾಧ್ಯಕ್ಷರು ▸ ಶ್ರೀ ದೇವರಾಜ್ ಹಳೆಯಂಗಡಿ ▸ ಶ್ರೀ ಚಂದ್ರಹಾಸ ಪಾಲನ್ ▸ ಶ್ರೀ ರವಿ ಎಲ್ ಕರ್ಕೇರ ▸ ಶ್ರೀ ಚಂದ್ರಕಾಂತ ಪುತ್ರನ್ ▸ ಶ್ರೀ ಲಾಜರ್‌ಟ ಎಂ. ಕೋಟ್ಯಾನ್ ▸ ಶ್ರೀ ಪದ್ಮನಾಭ್ ಅಮೀನ್ ▸ ಶ್ರೀ ಪ್ರಶಾಂತ್ ಅಮೀನ್, ಕೋಟೆ ▸ ಶ್ರೀ ಅಶೋಕ್ ಪುತ್ರನ್ ▸ ಶ್ರೀ ದೇವರಾಜ್ ಹೆಚ್ ಕುಂದರ್ ▸ ಶ್ರೀ ಏಕನಾಥ್ ಅಮೀನ್ ▸ ಶ್ರೀ ವಿಜಯ್ ಪಿ. ಸನಿಲ್ ▸ ಶ್ರೀ ಪುರುಷೋತ್ತಮ ಕೋಟಂಕರ್ ▸ ಶ್ರೀ ಸತೀಶ್ ಕೋಟ್ಯಾನ್ ▸ ಶ್ರೀ ಆನಂದ ಬಂಗೇರ, ಥಾಣೆ ▸ ಶ್ರೀ ದೇವದಾಸ್ ಪುತ್ರನ್ ▸ ಶ್ರೀ ಹರೀಶ್ ಶ್ರೀಯಾನ್ ▸ ಶ್ರೀ ಜಯಂತ್ ಶ್ರೀಯಾನ್ ▸ ಶ್ರೀ ಉಮೇಶ್ ಸಾಲಿಯಾನ್ ▸ ಶ್ರೀ ಲಕ್ಷ್ಮಣ್ ಪಿ. ಸನಿಲ್ ▸ ಶ್ರೀ ಭಾಸ್ಕರ್ ಎಲ್. ಕಾಂಚನ್ ▸ ಶ್ರೀ ಧೀರಜ್ ಎಸ್. ಶ್ರೀಯಾನ್ ▸ ಶ್ರೀ ಮೋಹನ್ ಆರ್. ಕೋಟ್ಯಾನ್

ಕಾರ್ಯದರ್ಶಿಗಳು: ಶ್ರೀಮತಿ ಪ್ರಭಾವತಿ ಅಮೀನ್ ▸ ಶ್ರೀ ಸುಧಾಕರ ಬೆಳ್ಚಡ ▸ ಶ್ರೀ ವಿಶ್ವನಾಥ ಬಂಗೇರ ಸಂಘಟನಾ ಕಾರ್ಯದರ್ಶಿಗಳು: ▸ ಶ್ರೀ ಅಶೋಕ್ ಸಸಿಹಿತ್ಲು ▸ ಶ್ರೀ ಸುರೇಂದ್ರ ಬಂಗೇರ ▸ ಶ್ರೀ ಪದ್ಮನಾಭ್ ಸಸಿಹಿತ್ಲು ▸ ಶ್ರೀ ಶ್ರೀಧರ್‌ಸುವರ್ಣ

ಖಜಾಂಚಿಗಳು: ▸ ಶ್ರೀಮತಿ ಕಲಾವತಿ ಕೋಟ್ಯಾನ್ ▸ ಶ್ರೀ ರಮೇಶ್ ಬಿ. ಸಾಲ್ಯಾನ್ ▸ ಶ್ರೀ ಸುನಿಲ್ ಎನ್. ಪುತ್ರನ್

ಮುಂಬಯಿ ಭಕ್ತರು

epaper - karnatakamalla.com

# ಕರ್ನಾಟಕ ಮಲ್ಲ

TEL: 24715208, Fax:24715237

ಮುಂಬಯಿಯಿಂದ ಪ್ರಕಟಿತ ಏಕೈಕ ಸಮಗ್ರ ಕನ್ನಡ ದೈನಿಕ

KARNATAKA MALLA, MUMBAI

ಸಂಪುಟ : 35 ಸಂಚಿಕೆ : 33 ಶನಿವಾರ 07-03-2026 ಬೆಲೆ : ₹ 6 ಪುಟಗಳು - 12

ಸಂಪಾದಕ: ಚಂದ್ರಶೇಖರ ಪಾಲೆತ್ತಾಡಿ


ಶ್ರೀ ಮಹಾಲಕ್ಷ್ಮೀ ಜ್ಯೋತಿಷಾಲಯ
ಕಲ್ಯಾಣ್‌ನಲ್ಲಿ ಖಾಯಂ ಆಗಿ ಇದ್ದಾರೆ
ಗುರೂಜಿ : ಪಂಡಿತ ವಾಸುದೇವ ಗುರೂಜೀ
ಒಮ್ಮೆ ಭೇಟಿ ಕೊಡಿ, ಇದು ನಿಮ್ಮ ಕೊನೆಯ ಪ್ರಯತ್ನ
ನೌಕರಿ, ಮದುವೆ, ಸಂತಾನ, ಹೋಟೆಲ್, ಅಂಗಡಿಯಲ್ಲಿ ಅಡಚಣೆ, ಸಾಲಾಭಾದೆ, ಗಂಡ ಹೆಂಡತಿ ಜಗಳ, ಆರೋಗ್ಯ ಸಮಸ್ಯೆ, ಡೈವೋರ್ಸ್ ಪ್ರಾಬ್ಲಮ್, ಪ್ರೀತಿಯಲ್ಲಿ ಮೋಸ ಸ್ತ್ರೀ ಪುರುಷ ವಶೀಕರಣ
ಇನ್ನೂ ಯಾವುದೇ ಕಠಿಣ ಸಮಸ್ಯೆಗಳಿಗೆ 9 ದಿನದಲ್ಲಿ ಪರಿಹಾರ
ಸಂಪರ್ಕ - 9922771788
ವಿಳಾಸ - ಅಂಗಡಿ ನಂ. 9, ಚಂದ್ರಭೂಷಣ ಪ್ಲಾಜಾ, ಬಾಟಾ ಶೋರೂಮ್ ಹಿಂದೆ ಸದಾನಂದ ಚೌಕ, ಕಲ್ಯಾಣ್ (ಪ)
ಸಮಯ - ಬೆಳಿಗ್ಗೆ 10.30ರಿಂದ ಸಂಜೆ 7.00



ಗರ್ವ ಮತ್ತು ಅಹಂ ಇವೆರಡು ಸತ್ಯವನ್ನು ಎಂದೂ ಸ್ವೀಕರಿಸುವುದಿಲ್ಲ.

3 ದೇಶದ ಹಲವು ರಾಜ್ಯಗಳಿಗೆ ರಾಜ್ಯಪಾಲರ ನೇಮಕ; ಜಿಷ್ಣು ದೇವ್ ವರ್ಮ ಮಹಾರಾಷ್ಟ್ರದ ನೂತನ ರಾಜ್ಯಪಾಲ



ಯುಪಿಎಸ್‌ಸಿ ಪರೀಕ್ಷಾ ಅಂತಿಮ ಫಲಿತಾಂಶ ಪ್ರಕಟ; ಅನುಜ್, ರಾಜೇಶ್ವರಿ, ಆಕಾಂಶ್‌ಗೆ ಮೊದಲ ಮೂರು ಸ್ಥಾನಗಳು 5

ಈ ಜಗತ್ತಿನಲ್ಲಿ ಆಶೀರ್ವಾದಿಂದ ಬದುಕುಳಿದವರು ಹಾಗೂ ಶಾಪದಿಂದ ಸತ್ತವರು ಯಾರೂ ಇಲ್ಲ.

# 7.69 ಲಕ್ಷ ಕೋಟಿ ರೂ.ಮಹಾ ಬಜೆಟ್ : 'ವಿಕಸಿತ ಮಹಾರಾಷ್ಟ್ರ'ದತ್ತ ದಿಟ್ಟ ಹೆಜ್ಜೆ

## ರೈತರ ಸಾಲ ಮನ್ನಾ, ಮಹಿಳಾ ಸಬಲೀಕರಣಕ್ಕೆ ಉತ್ತೇಜನ, ಮೆಟ್ರೋ, ಬುಲೆಟ್ ರೈಲು, ಕೈಗಾರಿಕಾ ಹೂಡಿಕೆಗೆ ಭಾರೀ ಪ್ರೋತ್ಸಾಹ




ಮುಂಬಯಿ, ಮಾ.6- ರಾಜ್ಯದ ಸಮಗ್ರ ಅಭಿವೃದ್ಧಿ ಹಾಗೂ ಆರ್ಥಿಕ ಬಲವರ್ಧನೆ ಗುರಿಯೊಂದಿಗೆ 2026-27ನೇ ಸಾಲಿನ ಮಹಾರಾಷ್ಟ್ರ ರಾಜ್ಯ ಬಜೆಟ್ ಮಂಡಿಸಲಾಗಿದೆ. ಪ್ರಗತಿಶೀಲ, ಶಾಶ್ವತ, ಸಮಾವೇಶಕ ಮತ್ತು ಸುಶಾಸನ ಎಂಬ ನಾಲ್ಕು ಪ್ರಮುಖ ಸ್ತಂಭಗಳ ಆಧಾರದ ಮೇಲೆ ರೂಪುಗೊಂಡ ಈ ಬಜೆಟ್‌ಗೆ ಒಟ್ಟು 7,69,467 ಕೋಟಿ ರೂ.ಗಳ ಅಂದಾಜು ಮಾಡಲಾಗಿದೆ. ರಾಜ್ಯದ ಆರ್ಥಿಕತೆಯನ್ನು 2047ರೊಳಗೆ 5 ಟ್ರಿಲಿಯನ್ ಡಾಲರ್ ಮಟ್ಟಕ್ಕೆ ಏರಿಸುವ ಗುರಿಯನ್ನು ಸರ್ಕಾರ ಘೋಷಿಸಿದೆ.

ಕೃಷಿ, ಮಹಿಳಾ ಸಬಲೀಕರಣ, ಕೈಗಾರಿಕಾ ವೃದ್ಧಿ, ಯುವಕರ ಉದ್ಯೋಗ ಹಾಗೂ ಮೂಲಸೌಕರ್ಯ ಅಭಿವೃದ್ಧಿಗೆ ಈ ಬಜೆಟ್‌ನಲ್ಲಿ ಹೆಚ್ಚಿನ ಆದ್ಯತೆ ನೀಡಲಾಗಿದೆ. ರಾಜ್ಯದ ಆರ್ಥಿಕ ಚಟುವಟಿಕೆಗಳಿಗೆ ವೇಗ ನೀಡುವ ಹಲವಾರು ಮಹತ್ವಾಕಾಂಕ್ಷಿ ಯೋಜನೆಗಳನ್ನು ಸರ್ಕಾರ ಪ್ರಕಟಿಸಿದೆ. ರೈತರ ಆರ್ಥಿಕ ಸಂಕಷ್ಟ ನಿವಾರಣೆಗಾಗಿ 'ಪುಣ್ಯ ಶ್ಲೋಕ ಅಹಿಲ್ಯಾದೇವಿ ಹೊಳ್ಕರ್ ರೈತ ಸಾಲಮನ್ನಾ ಯೋಜನೆ' ಘೋಷಿಸಲಾಗಿದೆ. 2025ರ ಸೆಪ್ಟೆಂಬರ್ 30ರೊಳಗೆ ಬಾಕಿ ಇರುವ ಬೆಳೆ ಸಾಲಗಳಿಗೆ ಅರ್ಹ ರೈತರಿಗೆ ರೂ. 2 ಲಕ್ಷದವರೆಗೆ ಸಾಲಮನ್ನಾ ಮಾಡಲಾಗುತ್ತದೆ. ನಿಯಮಿತವಾಗಿ ಸಾಲ ತೀರಿಸುವ ರೈತರಿಗೆ 50 ಸಾವಿರ ರೂ. ಪ್ರೋತ್ಸಾಹಧನ ನೀಡಲಾಗುತ್ತದೆ. ಕೃಷಿಯಲ್ಲಿ ಕೃತಕ ಬುದ್ಧಿಮತ್ತೆ ಹಾಗೂ ಡಿಜಿಟಲ್ ತಂತ್ರಜ್ಞಾನ ಬಳಕೆಯನ್ನು ಹೆಚ್ಚಿಸಿ ಉತ್ಪಾದಕತೆ ಹೆಚ್ಚಿಸಲು ಸರ್ಕಾರ ಯೋಜನೆ ರೂಪಿಸಿದೆ.

ಮಹಿಳಾ ಸಬಲೀಕರಣಕ್ಕೆ 'ಮುಖ್ಯಮಂತ್ರಿ ಮಾಝಿ ಲಾಡ್ಕಿ ಬಹೀನ್' ಯೋಜನೆಗೆ ಹೆಚ್ಚಿನ ಅನುದಾನ ನೀಡಲಾಗಿದೆ. ಮಹಿಳಾ ಸ್ವಸಹಾಯ ಗುಂಪುಗಳ ಉತ್ಪನ್ನಗಳಿಗೆ ಮಾರುಕಟ್ಟೆ ಕಲ್ಪಿಸಲು 13 ಜಿಲ್ಲೆಗಳಲ್ಲಿ 'ಉಮೇದ್ ಮಾಲ್' ಸ್ಥಾಪನೆ ಮಾಡಲಾಗುತ್ತದೆ. ಈಗಾಗಲೇ ರಾಜ್ಯದಲ್ಲಿ 27 ಲಕ್ಷ 'ಲಖ್‌ಪತಿ ದೀದಿ'ಗಳಿದ್ದು, ಮುಂದಿನ ವರ್ಷದಲ್ಲಿ ಇನ್ನೂ 25 ಲಕ್ಷ ಮಹಿಳೆಯರನ್ನು ಸ್ವಾವಲಂಬಿಗಳನ್ನಾಗಿಸುವ ಗುರಿ ಹೊಂದಲಾಗಿದೆ.

ಮುಂಬಯಿ ಮಹಾನಗರ ಪ್ರದೇಶದಲ್ಲಿ ಮೆಟ್ರೋ ಜಾಲ ವಿಸ್ತರಣೆ, ಬುಲೆಟ್ ರೈಲು ಯೋಜನೆ ಹಾಗೂ ಹೊಸ ಕೈಗಾರಿಕಾ ಕೇಂದ್ರಗಳ ಸ್ಥಾಪನೆ ಮೂಲಕ ರಾಜ್ಯದ ಆರ್ಥಿಕ ಬೆಳವಣಿಗೆಗೆ ವೇಗ ನೀಡುವ ಉದ್ದೇಶ ಸರ್ಕಾರ ಹೊಂದಿದೆ. ಜೊತೆಗೆ ಅಟಲ್ ಸೇತುವೆ ಸಂಪರ್ಕ ಪ್ರದೇಶದಲ್ಲಿ 'ಮೂರನೇ ಮುಂಬೈ' ಅಭಿವೃದ್ಧಿ ಯೋಜನೆಯನ್ನು ಘೋಷಿಸಲಾಗಿದೆ.

ಸಮಾವೇಶಕ ಮತ್ತು ಶಾಶ್ವತ ಅಭಿವೃದ್ಧಿಯ ಮೂಲಕ ಮಹಾರಾಷ್ಟ್ರವನ್ನು 'ವಿಕಸಿತ ರಾಜ್ಯ'ವನ್ನಾಗಿ ರೂಪಿಸುವುದು ಈ ಬಜೆಟ್‌ನ ಪ್ರಮುಖ ಉದ್ದೇಶವಾಗಿದೆ. ಒಟ್ಟಾರೆ ಕೃಷಿ, ಕೈಗಾರಿಕೆ, ಮೂಲಸೌಕರ್ಯ ಮತ್ತು ಸಾಮಾಜಿಕ ಕಲ್ಯಾಣ ಕ್ಷೇತ್ರಗಳಿಗೆ ಸಮಗ್ರ ಒತ್ತು ನೀಡುವ ಮೂಲಕ ರಾಜ್ಯದ ಆರ್ಥಿಕ ಬೆಳವಣಿಗೆಗೆ ದಿಕ್ಕು ತೋರಿಸುವ ಬಜೆಟ್ ಇದಾಗಿದೆ ಎಂದು ಸರ್ಕಾರ ತಿಳಿಸಿದೆ.

**ಕೃಷಿ ಮತ್ತು ನೀರಾವರಿಗೆ ಹೆಚ್ಚಿನ ಆದ್ಯತೆ :** ರಾಜ್ಯದ ಕೃಷಿ ಕ್ಷೇತ್ರದ ಅಭಿವೃದ್ಧಿಗೆ ಸರ್ಕಾರ ಹಲವು ಕ್ರಮಗಳನ್ನು ಘೋಷಿಸಿದೆ. ನದಿ ಜೋಡಣೆ ಯೋಜನೆಗಳು, ನೀರಾವರಿ ವ್ಯವಸ್ಥೆಯ ವಿಸ್ತರಣೆ ಮತ್ತು ಪ್ರಕೃತಿ ಕೃಷಿಗೆ ಉತ್ತೇಜನ ನೀಡುವ ಯೋಜನೆಗಳನ್ನು ಜಾರಿಗೆ ತರಲಾಗುತ್ತಿದೆ. ರೈತರ ಆದಾಯವನ್ನು ಹೆಚ್ಚಿಸುವ ದಿಸೆಯಲ್ಲಿ ತಂತ್ರಜ್ಞಾನ ಆಧಾರಿತ ಕೃಷಿಗೆ ಉತ್ತೇಜನ ನೀಡಲಾಗುತ್ತಿದೆ.

**ಮಹಿಳಾ ಸಬಲೀಕರಣಕ್ಕೆ ವಿಶೇಷ ಯೋಜನೆಗಳು :**

ಮಹಿಳಾ ಸ್ವಸಹಾಯ ಗುಂಪುಗಳ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸಲು 'ಉಮೇದ್ ಮಾಲ್' ಸ್ಥಾಪನೆ ಮಾಡಲಾಗುತ್ತದೆ. 'ಲಾಡ್ಕಿ ಬಹೀನ್' ಯೋಜನೆಯ ಮೂಲಕ ಮಹಿಳೆಯರಿಗೆ ಆರ್ಥಿಕ ನೆರವು ನೀಡುವ ಮೂಲಕ ಅವರ ಸ್ವಾವಲಂಬನೆಯನ್ನು ಹೆಚ್ಚಿಸುವ ಗುರಿ ಸರ್ಕಾರ ಹೊಂದಿದೆ. **5ನೇ ಪುಟಕ್ಕೆ**

**ಬಜೆಟ್ ಮುಖ್ಯಾಂಶಗಳು :**
ಒಟ್ಟು ಬಜೆಟ್ ಗಾತ್ರ: 7,69,467 ಕೋಟಿ ರೂ.
ರೈತರಿಗೆ 2 ಲಕ್ಷ ರೂ.ವರೆಗೆ ಸಾಲಮನ್ನಾ.
ನಿಯಮಿತ ಸಾಲ ತೀರಿಸುವವರಿಗೆ 50 ಸಾವಿರ ಪ್ರೋತ್ಸಾಹಧನ.
ಇನ್ನೂ 25 ಲಕ್ಷ 'ಲಖ್‌ಪತಿ ದೀದಿ' ಮಹಿಳೆಯರನ್ನು ಹೊಂದುವ ಗುರಿ.
ನವೀ ಮುಂಬೈಯಲ್ಲಿ ಅಂತಾರಾಷ್ಟ್ರೀಯ ಎಜುಕೇಶನ್ ಸಿಟಿ
18 ಕೈಗಾರಿಕಾ ಕೇಂದ್ರಗಳ ಸ್ಥಾಪನೆ.
50 ಲಕ್ಷ ಉದ್ಯೋಗ ಸೃಷ್ಟಿ ಗುರಿ.
ಮುಂಬಯಿ ಮೆಟ್ರೋ ಮತ್ತು ಬುಲೆಟ್ ರೈಲು ಯೋಜನೆಗಳಿಗೆ ವೇಗ.
2035ರೊಳಗೆ ಶೇ.65ರಷ್ಟು ಹಸಿರು ಶಕ್ತಿ ಉತ್ಪಾದನೆ ಗುರಿ.

# ಬಜೆಟ್ ಮೂಲಸೌಕರ್ಯಕ್ಕೆ ಒತ್ತು; ವಡಾಲದಲ್ಲಿ ವಿಶ್ವ ದರ್ಜೆಯ ಸ್ಟಾರ್ಟ್‌ಅಪ್ ಹಬ್, '3ನೇ ಮುಂಬಯಿ' ರಚನೆ

## 20 ಲಕ್ಷ ಗುಡಿಸಲುಗಳ ಪುನರಾಭಿವೃದ್ಧಿ, 10 ಲಕ್ಷ ಕೈಗೆಟುಕುವ ಮನೆಗಳ ನಿರ್ಮಾಣ

ಮುಂಬಯಿ, ಮಾ.6- ಮುಂಬಯಿ ಮಹಾನಗರ ಪ್ರದೇಶದ ಮುಖವನ್ನು ಬದಲಾಯಿಸಲು ರಾಜ್ಯ ಸರ್ಕಾರ ಬಜೆಟ್‌ನಲ್ಲಿ ಮೂಲಸೌಕರ್ಯ ಅಭಿಯಾನವನ್ನು ಪ್ರಾರಂಭಿಸಿದೆ. ಮುಂಬಯಿ ಮತ್ತು ಮಹಾನಗರದಲ್ಲಿನ 20 ಲಕ್ಷ ಕೊಳೆಗೇರಿಗಳನ್ನು ಪುನರಾಭಿವೃದ್ಧಿ ಮಾಡುವ ಮತ್ತು 10 ಲಕ್ಷ ಕೈಗೆಟುಕುವ ಮನೆಗಳನ್ನು ನಿರ್ಮಿಸುವ ಮಹತ್ವಾಕಾಂಕ್ಷೆಯ ನಿರ್ಧಾರವನ್ನು ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಘೋಷಿಸಿದ್ದಾರೆ. ಇದರೊಂದಿಗೆ, ವಡಾಲದಲ್ಲಿ ವಿಶ್ವ ದರ್ಜೆಯ 'ಸ್ಟಾರ್ಟ್‌ಅಪ್ ಮತ್ತು ಇನ್ನೋವೇಶನ್ ಹಬ್' ಅನ್ನು ಸ್ಥಾಪಿಸಲಾಗುವುದು ಮತ್ತು 'ಹೊಸ ಕೊಳೆಗೇರಿ ಚೌಕಟ್ಟು ಇಲ್ಲ' ಮೂಲಕ ನಗರದಲ್ಲಿ ಯಾವುದೇ ಹೊಸ ಕೊಳೆಗೇರಿಗಳು ಸೃಷ್ಟಿಯಾಗದಂತೆ ನೋಡಿಕೊಳ್ಳಲಾಗುವುದು.

ಮುಂಬೈನ ಸಾರಿಗೆಗಾಗಿ ಮೆಟ್ರೋ ಯೋಜನೆಗಳಿಗೆ ಭಾರಿ ಹಣವನ್ನು ನೀಡಲಾಗುವುದು. ಇದರಲ್ಲಿ, ವಡಾಲದಿಂದ ಗೇಟ್‌ವೇ ಆಫ್ ಇಂಡಿಯಾ (ಮೆಟ್ರೋ 11) ವರೆಗಿನ ಸಂಪೂರ್ಣ ಭೂಗತ ಯೋಜನೆಯನ್ನು ಧಾರಾವಿ ಮತ್ತು ಬಾಂದ್ರಾಕ್ಕೆ ವಿಸ್ತರಿಸಲಾಗುವುದು. ಅಲ್ಲದೆ, ಮುಂಬೈ ವಿಮಾನ ನಿಲ್ದಾಣದಿಂದ ನವಿ ಮುಂಬೈ ವಿಮಾನ ನಿಲ್ದಾಣ (ಮೆಟ್ರೋ 8) ಮತ್ತು ತಲೋಜಾದಿಂದ ಖಂಡೇಶ್ವರಕ್ಕೆ ಹೊಸ ಮಾರ್ಗಗಳನ್ನು ಪ್ರಸ್ತಾಪಿಸಲಾಗಿದೆ. ನಗರದಲ್ಲಿ ಆಂತರಿಕ ಪ್ರಯಾಣವನ್ನು ವೇಗಗೊಳಿಸಲು 'ಆರೆಂಜ್ ಗೇಟ್ ಟು ಮರೀನ್ ಡ್ರೈವ್', 'ಗೋರೆಗಾಂವ್-ಮುಲುಂಡ್' ಮತ್ತು 'ಥಾಣೆ ಟು ಬೋರಿವಲಿ' ನಂತಹ ಪ್ರಮುಖ ಭೂಗತ ಮಾರ್ಗಗಳನ್ನು (ಸುರಂಗಗಳು) ನಿರ್ಮಿಸಲಾಗುವುದು.

ಅಟಲ್ ಸೇತುವನ್ನು ಸಂಪರ್ಕಿಸುವ ಮೂಲಕ 200 ಚದರ ಕಿ.ಮೀ ಪ್ರದೇಶದಲ್ಲಿ 'ಮೂರನೇ ಮುಂಬೈ' ಅಭಿವೃದ್ಧಿ ಪಡಿಸುವುದಾಗಿ ಘೋಷಿಸಲಾಗಿದೆ. ಇದರಲ್ಲಿ ಕರ್ನಾಲಾ, ಸಾಯಿ, ಚಿರ್ನರ್ ಮತ್ತು ನವಿ ಮುಂಬೈ ವಿಮಾನ ನಿಲ್ದಾಣ ಪ್ರದೇಶದ ಗ್ರೀನ್‌ಫೀಲ್ಡ್ ಪಟ್ಟಣಗಳು ಸೇರಿವೆ. ಮುಂಬೈ-ಅಹಮದಾಬಾದ್ ಬುಲೆಟ್ ರೈಲು ಫೆಬ್ರುವರಿ 2027 ರ ವೇಳೆಗೆ ಥಾಣೆ ಮತ್ತು ತಲಸಾರಿ ನಡುವೆ ಮೂರು ನಿಲ್ದಾಣಗಳನ್ನು ಪೂರ್ಣಗೊಳಿಸುವ ಗುರಿಯನ್ನು ಹೊಂದಿದೆ.

**ಪುಣೆ ಮತ್ತು ಮಹಾರಾಷ್ಟ್ರದ ಉಳಿದ ಭಾಗಗಳಿಗೆ ಅವಕಾಶ :**

ಪುಣೆ ಮೆಟ್ರೋದ ಎರಡನೇ ಹಂತ, ಖಿಡಕ್ವಾಸ್ಲಾ-ಸ್ವರ್ಗೇಟ್-ಹಡಪ್ಸರ್-ಲೋನಿ ಕಲ್ಭೋರ್ ಮಾರ್ಗ ಮತ್ತು ಪುಣೆಯಿಂದ ಶಿರೂರಿಗೆ 53 ಕಿ.ಮೀ ಎತ್ತರದ ಮಾರ್ಗ. **5ನೇ ಪುಟಕ್ಕೆ**








# ಕರ್ನಾಟಕ ಬಜೆಟ್ - 2026




## 2026-27 ನೇ ಸಾಲಿನ ಬಜೆಟ್ ಮಂಡಿಸಿದ ಸಿಎಂ ಸಿದ್ದರಾಮಯ್ಯ

- ಆದ್ಯತಾ ಕ್ಷೇತ್ರಗಳಿಗೆ ಒತ್ತು
- ಪಂಚ ಗ್ಯಾರಂಟಿ ಯೋಜನೆಗಳಿಗೆ 1.21 ಕೋ. ರೂ.
- 1.32 ಕೋ. ರೂ.ಗಳ ಸಾಲಕ್ಕೆ ತೀರ್ಮಾನ
- 2.2 ಲಕ್ಷ ಕೋ. ರೂ.ಗಳ ಸ್ವಂತ ತೆರಿಗೆ ಸಂಗ್ರಹದ ಗುರಿ

ಬೆಂಗಳೂರು, ಮಾ. 6 - ಮಹಿಳೆಯರು, ರೈತರ ಸಬಲೀಕರಣಕ್ಕೆ ವಿಶೇಷ ಯೋಜನೆಗಳ ಜತೆಗೆ ದುರ್ಬಲ ವರ್ಗದವರು, ಶ್ರಮಿಕರು, ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು, ಯುವಜನರ ಕಲ್ಯಾಣಕ್ಕೆ ಹತ್ತು ಹಲವು ಕಾರ್ಯಕ್ರಮಗಳನ್ನು ಬಜೆಟ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಕಟಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಧಾನ ಸಭೆಯಲ್ಲಿ ಶುಕ್ರವಾರ 26-27 ನೇ ಸಾಲಿನ ಬಜೆಟ್‌ನ್ನು ಮಂಡಿಸಿದ್ದು, ಈ ಬಜೆಟ್‌ನಲ್ಲಿ ಆದ್ಯತಾ ಕ್ಷೇತ್ರಗಳಾದ ಕೃಷಿ, ಶಿಕ್ಷಣ, ಆರೋಗ್ಯ, ಮೂಲ ಸೌಕರ್ಯ, ಅಭಿವೃದ್ಧಿಗೆ ಒತ್ತು ನೀಡಲಾಗಿದ್ದು, ಉದ್ಯೋಗ ಸೃಷ್ಟಿಗೂ ಆದ್ಯತೆ ನೀಡಿ ಈ ವರ್ಷ 56,432 ಹುದ್ದೆಗಳ ಭರ್ತಿ ಮಾಡುವ ಪ್ರಕ್ರಿಯೆಗೆ ಚಾಲನೆ ನೀಡುವ ಘೋಷಣೆಯನ್ನೂ ಮಾಡಿದ್ದಾರೆ.

ಈ ಸಾಲಿನ ಬಜೆಟ್‌ನಲ್ಲಿ ರಾಜ್ಯದ ಪಂಚ ಗ್ಯಾರಂಟಿ ಯೋಜನೆಗಳಿಗೆ 1 ಕೋಟಿ 21 ಸಾವಿರದ 598 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

ಈ ಸಾಲಿನ ಬಜೆಟ್ ಗಾತ್ರ 4 ಲಕ್ಷದ 48 ಸಾವಿರದ 004 ಕೋಟಿ ರೂ.ಗಳಾಗಿದ್ದು, ಪ್ರಸಕ್ತ ಆರ್ಥಿಕ ವರ್ಷದಲ್ಲಿ 1 ಲಕ್ಷ 32 ಸಾವಿರದ 190 ಕೋಟಿ ರೂ.ಗಳ ಸಾಲ ಪಡೆಯಲು ತೀರ್ಮಾನಿಸಲಾಗಿದೆ.

ಈ ಆಯವ್ಯಯವು ವಿತ್ತೀಯಕೊರತೆಯ ಆಯವ್ಯಯವಾಗಿದ್ದು, 22,952 ಕೋಟಿ ರೂ.ಗಳ ವಿತ್ತೀಯ ಕೊರತೆಯನ್ನು ಹೊಂದಿದ್ದು, ಇದನ್ನು ಸರಿದೂಗಿಸಲು ಅಭಿವೃದ್ಧಿ ಕಾಮಗಾರಿಗಳಿಗಾಗಿ 1,22,340 ಕೋಟಿ ರೂ.ಗಳ ಸಾಲ ಪಡೆಯಲು ತೀರ್ಮಾನಿಸಲಾಗಿದೆ.

ರಾಜ್ಯದ ಆರ್ಥಿಕತೆಯನ್ನು ಬಲಪಡಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಬಾರಿ 2.2 ಲಕ್ಷಕೋಟಿ ರೂ.ಗಳ ಸ್ವಂತ ತೆರಿಗೆ ಸಂಗ್ರಹದ ಗುರಿ ಹೊಂದಿದ್ದು, ಗ್ಯಾರಂಟಿ ಯೋಜನೆಗಳಿಗೆ ಅಧಿಕ ಹಣ ವ್ಯಯಿಸುತ್ತಿದ್ದರೂ ಬಂಡವಾಳ ವೆಚ್ಚಗಳಿಗೆ ದಕ್ಕೆ ಬಾರದಂತೆ ನೋಡಿಕೊಳ್ಳಲು ಸಾಲದ ಮೊರೆ ಹೋಗಲಾಗಿದೆ.

ಅಂಕಿ ಅಂಶಗಳ ಪ್ರಕಾರ ಈ ಆರ್ಥಿಕ ವರ್ಷದ ಅಂತ್ಯಕ್ಕೆ ಕರ್ನಾಟಕ ಒಟ್ಟು ಸಾಲವು 8,27,398ಕೋಟಿ ರೂ. ತಲುಪಲಿದೆ ಎಂದು ಅಂದಾಜಿಸಲಾಗಿದೆ. ಇದು ಒಟ್ಟು ಆಂತರಿಕ (ಜಿಎಸ್‌ಡಿಪಿ ) ಶೇ. 24.94 ರಷ್ಟಾಗಲಿದ್ದು, ಆರ್ಥಿಕ ಸ್ಥಿತಿ ಮಿತಿಯಲ್ಲೇ ಇದೆ ಎಂದು ಸಿದ್ದರಾಮಯ್ಯ ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ.

ಕಲ್ಯಾಣ ಯೋಜನೆಗಳ ಜತೆಗೆ ಹೆಚ್ಚಿನ ಬಂಡವಾಳ ಹೂಡಿಕೆ, ಮೂಲ ಸೌಕರ್ಯ ಅಭಿವೃದ್ಧಿ ಮತ್ತು ದೀರ್ಘಕಾಲಿನ ಆರ್ಥಿಕ ಪರಿವರ್ತನೆಗಳತ್ತಲೂ ಗಮನ ಹರಿಸಿ ಜಲಕನ್ಯಾ ಯೋಜನೆಗೆ ಹೆಚ್ಚಿನ ಹೂಡಿಕೆ ಮಾಡಲಾಗಿದೆ ಎಂದರು.

ಕರ್ನಾಟಕದ ಅಭಿವೃದ್ಧಿ ಮಾದರಿಯ ಮಂತ್ರವನ್ನು ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ. ಈ ಬಜೆಟ್‌ನಲ್ಲಿ 56,432 ಉದ್ಯೋಗಗಳನ್ನು ಭರ್ತಿ ಮಾಡುವುದರ ಜತೆಗೆ ರಸ್ತೆ, ಸೇತುವೆ, ಕಟ್ಟೆಗಳ ನಿರ್ಮಾಣಕ್ಕೂ ಆದ್ಯತೆ ನೀಡಿ, ಸುಮಾರು 8600ಕೋಟಿ ರೂ.ಗಳ ವೆಚ್ಚದಲ್ಲಿ ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮವನ್ನು ಜಾರಿಗೊಳಿಸಲಾಗುತ್ತಿದೆ.

ಗ್ರಾಮೀಣ ರೈತರಿಗೆ ಸ್ಥಿರ ಮತ್ತು ಹೆಚ್ಚುವರಿ ಆದಾಯ ಮೂಲಗಳನ್ನು ಸೃಜಿಸುವ ಉದ್ದೇಶದಿಂದ ಮುಖ್ಯಮಂತ್ರಿ ಕೃಷಿ ವಿಸ್ತಾರ ಯೋಜನೆಯನ್ನು 100 ಕೋಟಿ ರೂ. ವೆಚ್ಚದಲ್ಲಿ ಅನುಷ್ಠಾನಗೊಳಿಸುವ ಯೋಜನೆಯನ್ನು ಸಿದ್ದರಾಮಯ್ಯ ಬಜೆಟ್‌ನಲ್ಲಿ ಪ್ರಕಟಿಸಿದ್ದಾರೆ.

ಈ ಬಜೆಟ್‌ನಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಆದ್ಯತೆ ನೀಡಲಾಗಿದ್ದು, ರಾಜ್ಯದ 184 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳನ್ನು ಪ್ರೌಢಶಾಲೆಗಳನ್ನಾಗಿ, 50 ಪ್ರೌಢಶಾಲೆಗಳನ್ನು ಪದವಿ ಪೂರ್ವ ಕಾಲೇಜುಗಳನ್ನಾಗಿ ಉನ್ನತೀಕರಿಸುವ ಘೋಷಣೆಯನ್ನು ಮಾಡಿ, ಖಾಸಗಿ ಶಾಲೆಗಳ ಮಾನ್ಯತೆ ಪಡೆಯುವ ಹಾಗೂ ನವೀಕರಿಸುವ ಪ್ರಕ್ರಿಯೆಯನ್ನು ಆನ್‌ಲೈನ್ ಮೂಲಕ ಮಾಡುವ ಘೋಷಣೆಯನ್ನು ಮಾಡಲಾಗಿದೆ.

ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ದ್ವಿಭಾಷಾ ತರಗತಿಗಳನ್ನು ಜಾರಿಗೊಳಿಸಲು ಪ್ರಾಥಮಿಕ ಶಾಲಾ ಶಿಕ್ಷಕರ ಇಂಗ್ಲೀಷ್ ಭಾಷಾ ತರಬೇತಿ ಕಾರ್ಯಕ್ರಮವನ್ನು 20 ಕೋಟಿ ರೂ.ಗಳಲ್ಲಿ ಹಮ್ಮಿಕೊಳ್ಳುವ ಘೋಷಣೆಯನ್ನು ಮಾಡಲಾಗಿದೆ.

ಉನ್ನತ ಶಿಕ್ಷಣಕ್ಕೂ ಬಜೆಟ್‌ನಲ್ಲಿ ಆದ್ಯತೆ ನೀಡಲಾಗಿದ್ದು, 2500ಕೋಟಿ ರೂ. ವೆಚ್ಚದಲ್ಲಿ ಕರ್ನಾಟಕ ಉನ್ನತ ಶಿಕ್ಷಣ ಪರಿವರ್ತನೆ ಯೋಜನೆಯನ್ನೂ ಅನುಷ್ಠಾನಗೊಳಿಸುವ ಘೋಷಣೆ ಮಾಡಲಾಗಿದೆ.

ಈ ಬಜೆಟ್‌ನಲ್ಲಿ ಆರೋಗ್ಯ ಕ್ಷೇತ್ರಕ್ಕೂ ಹೆಚ್ಚಿನ ಒತ್ತು ನೀಡಲಾಗಿದ್ದು, ಮಧುಮೇಹದಿಂದ ಬಳಲುತ್ತಿರುವ 18 ವರ್ಷ ವಯಸ್ಸಿನ ಮಕ್ಕಳಿಗೆ ಉಚಿತ ಇನ್ಸುಲಿನ್ ಪೆನ್‌ಗಳನ್ನು ನೀಡುವ ಘೋಷಣೆಯನ್ನು ಮಾಡಲಾಗಿದೆ.

ಅಯುಷ್ಮಾನ್ ಭಾರತ್ ಆರೋಗ್ಯ ಚಿಕಿತ್ಸೆ ಯೋಜನೆಯ ಪ್ಯಾಕೇಜ್ ದರಗಳನ್ನು ಪರಿಷ್ಕರಿಸಿ ಬಡ ರೋಗಿಗಳ ಉತ್ತಮ ಆರೋಗ್ಯಕ್ಕೆ 400 ಕೋಟಿ ರೂ.ಗಳನ್ನು ಹೆಚ್ಚುವರಿಯಾಗಿ ಒದಗಿಸುವ ಘೋಷಣೆಯನ್ನು ಮಾಡಲಾಗಿದೆ.

ಮಹಿಳೆಯರ ಸಬಲೀಕರಣಕ್ಕೂ ಹೆಚ್ಚಿನ ಒತ್ತು ನೀಡಲಾಗಿದ್ದು, ಮಹಿಳಾ ಉದ್ದೇಶದ ಕಾರ್ಯಕ್ರಮಗಳಿಗೆ ಸುಮಾರು 94 ಸಾವಿರ ಕೋಟಿ ರೂ.ಗಳನ್ನು ಈ ಬಜೆಟ್‌ನಲ್ಲಿ ಒದಗಿಸಲಾಗಿದೆ.

ಪರಿಶಿಷ್ಟ ಜಾತಿ, ವರ್ಗಗಳ ಕಲ್ಯಾಣಕ್ಕೂ ಬಜೆಟ್‌ನಲ್ಲಿ ಹೆಚ್ಚಿನ ಅನುದಾನ ಒದಗಿಸಲಾಗಿದೆ.

ಸಮಾಜ ಕಲ್ಯಾಣ ಇಲಾಖೆಯಡಿ ಬೌದ್ಧ ಅಭಿವೃದ್ಧಿ ನಿಗಮವನ್ನು ಸ್ಥಾಪಿಸುವ ಘೋಷಣೆಯನ್ನು ಬಜೆಟ್‌ನಲ್ಲಿ ಮಾಡಲಾಗಿದ್ದು, ಪರಿಶಿಷ್ಟ ಪಂಗಡಗಳ ಇಲಾಖೆ ಮತ್ತು ನಿರ್ದೇಶನಾಲಯದಲ್ಲಿ ಬರುವ ನಿಗಮ ಮತ್ತು ಇತರೆ ಕಚೇರಿಗಳಿಗೆ ಬೆಂಗಳೂರಿನಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಆಡಳಿತ ಸೌಧ ಸಂಕೀರ್ಣವನ್ನು ನಿರ್ಮಿಸುವ ಘೋಷಣೆ ಮಾಡಲಾಗಿದೆ.

ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ರಾಜ್ಯದ ವಿವಿಧೆಡೆ 150 ಸಂಖ್ಯಾಬಲದ 50 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ಆರಂಭಿಸುವ ಘೋಷಣೆಯನ್ನು ಮಾಡಲಾಗಿದೆ.

ಹಾಗೆಯೇ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗಾಗಿ 25 ಹೊಸ ಮೆಟ್ರಿಕ್ ನಂತರದ ಶಾಲೆಗಳನ್ನು ಆರಂಭಿಸುವ ಘೋಷಣೆಯನ್ನು ಮಾಡಲಾಗಿದೆ.

ವಸತಿ ಯೋಜನೆಗಳಿಗೂ ಬಜೆಟ್‌ನಲ್ಲಿ ಆದ್ಯತೆ ನೀಡಲಾಗಿದ್ದು, ಪ್ರಸಕ್ತ ವರ್ಷ 3 ಲಕ್ಷ ಮನೆಗಳನ್ನು ಪೂರ್ಣಗೊಳಿಸುವ ಗುರಿಯನ್ನು ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ.

ಬೆಂಗಳೂರು ಅಭಿವೃದ್ಧಿಗೂ ಬಜೆಟ್‌ನಲ್ಲಿ ಹೆಚ್ಚಿನ ಒತ್ತು ನೀಡಲಾಗಿದ್ದು, ಬೆಂಗಳೂರಿನ ವಿವಿಧೆಡೆ ವಾರ್ಡ್ ರಸ್ತೆ ಮತ್ತು ಮೂಲ ಸೌಕರ್ಯ ಅಭಿವೃದ್ಧಿಗೆ 1250 ಕೋಟಿ ರೂ. ಒದಗಿಸಲಾಗಿದೆ.

## ಕುಕ್ಕೆ ಸುಬ್ರಹ್ಮಣ್ಯ ಮತ್ತು ಕೊಲ್ಲೂರು ಮೂಕಾಂಬಿಕಾ ದೇವಾಲಯಗಳ ಅಭಿವೃದ್ಧಿಗೆ ಪ್ರಾಧಿಕಾರ ರಚನೆ


ಬಜೆಟ್‌ನಲ್ಲಿ ರಾಜ್ಯದ ಪ್ರಮುಖ ಪುಣ್ಯಕ್ಷೇತ್ರಗಳ ಅಭಿವೃದ್ಧಿ ಹಾಗೂ ಭಕ್ತಾದಿಗಳ ಅನುಕೂಲಕ್ಕಾಗಿ ಹಲವು ಮಹತ್ವದ ಘೋಷಣೆಗಳನ್ನು ಮಾಡಿದ್ದಾರೆ. ವಿಶೇಷವಾಗಿ ಕರಾವಳಿಯ ಪ್ರಸಿದ್ಧ ಕ್ಷೇತ್ರಗಳಾದ ಕುಕ್ಕೆ ಸುಬ್ರಹ್ಮಣ್ಯ ಮತ್ತು ಕೊಲ್ಲೂರು ಮೂಕಾಂಬಿಕಾ ದೇವಾಲಯಗಳ ಅಭಿವೃದ್ಧಿಗೆ ಹೊಸ ವೇಗ ನೀಡಲು ಸರ್ಕಾರ ನಿರ್ಧರಿಸಿದೆ. ಈ ದೇವಾಲಯಗಳ ಅಭಿವೃದ್ಧಿಗೆ ಪ್ರಾಧಿಕಾರ ರಚನೆ ಮಾಡಲು ಸರ್ಕಾರ ಉದ್ದೇಶ ಹೊಂದಿದೆ ಎಂದು ತಿಳಿಸಿದ್ದಾರೆ.

ರಾಜ್ಯದ ಅತಿ ಹೆಚ್ಚು ಆದಾಯ ತರುವ ಹಾಗೂ ಲಕ್ಷಾಂತರ ಭಕ್ತರು ಭೇಟಿ ನೀಡುವ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಾಲಯ ಮತ್ತು ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಾಲಯಗಳ ಮೂಲಭೂತ ಸೌಲಭ್ಯ ಹಾಗೂ ಕ್ಷೇತ್ರದ ಸಮಗ್ರ ಅಭಿವೃದ್ಧಿಯನ್ನು ದೃಷ್ಟಿಯಲ್ಲಿಟ್ಟುಕೊಂಡು, ಈ ಎರಡೂ ಕ್ಷೇತ್ರಗಳಿಗೆ ಪ್ರತ್ಯೇಕ ಅಭಿವೃದ್ಧಿ ಪ್ರಾಧಿಕಾರಗಳನ್ನು ರಚಿಸಲು ಸರ್ಕಾರ ಉದ್ದೇಶಿಸಿದೆ. ಇದರಿಂದ ಈ ಕ್ಷೇತ್ರಗಳಲ್ಲಿ ಮೂಲಸೌಕರ್ಯ ಕಾಮಗಾರಿಗಳು ಹೆಚ್ಚು ವ್ಯವಸ್ಥಿತವಾಗಿ ನಡೆಯಲಿವೆ.

**ಶ್ರೀ ಮಾತಾ ವೈಷ್ಣೋದೇವಿ ಯಾತ್ರೆಗೆ ಸಹಾಯಧನ**

ಕರ್ನಾಟಕದಿಂದ ಜಮ್ಮು-ಕಾಶ್ಮೀರದ ಪವಿತ್ರ ಶ್ರೀ ಮಾತಾ ವೈಷ್ಣೋದೇವಿ ದೇವಾಲಯಕ್ಕೆ ಯಾತ್ರೆ ಕೈಗೊಳ್ಳುವ ಯಾತ್ರಾರ್ಥಿಗಳಿಗೆ ಸರ್ಕಾರ ಭರ್ಜರಿ ಸಿಹಿ ಸುದ್ದಿ ನೀಡಿದೆ. ಯಾತ್ರಾರ್ಥಿಗಳಿಗೆ ತಲಾ 5,000 ರೂ.ಗಳ ಸಹಾಯಧನವನ್ನು ಡಿ.ಬಿ.ಟಿ ಮೂಲಕ ವಿತರಿಸಲು ಐದು ಕೋಟಿ ರೂ. ಅನುದಾನ ಮೀಸಲಿರಿಸಲಾಗಿದೆ.

**ಛತ್ರಗಳ ನವೀಕರಣ ಮತ್ತು ಯಾತ್ರಿನಿವಾಸ ನಿರ್ಮಾಣ**




ಹೊರ ರಾಜ್ಯದ ಪುಣ್ಯಕ್ಷೇತ್ರಗಳಿಗೆ ಭೇಟಿ ನೀಡುವ ಕನ್ನಡಿಗರಿಗಾಗಿ ಕರ್ನಾಟಕ ರಾಜ್ಯ ಛತ್ರಗಳನ್ನು ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗಿದೆ. ವಾರಣಾಸಿಯಲ್ಲಿ ಶಿಥಿಲಗೊಂಡಿರುವ ಹಳೆಯ ಛತ್ರದ ಬದಲಿಗೆ ಹೊಸ ರಾಜ್ಯ ಛತ್ರ ನಿರ್ಮಾಣವಾಗಲಿದೆ. ಮಂತ್ರಾಲಯದಲ್ಲಿ ಶ್ರೀ ರಾಘವೇಂದ್ರ ಸ್ವಾಮಿ ಮಠದ ಆವರಣದಲ್ಲಿರುವ ರಾಜ್ಯ ಛತ್ರದ ನವೀಕರಣ ಮಾಡಲಾಗುತ್ತದೆ. ಶ್ರೀಶೈಲಂನಲ್ಲಿ ಹೊಸದಾಗಿ ಸುಸಜ್ಜಿತ ಯಾತ್ರಿನಿವಾಸ ನಿರ್ಮಾಣ ಆಗಲಿದೆ. ತುಳಜಾಪುರದಲ್ಲಿ ಪ್ರಸ್ತುತ ಇರುವ ಛತ್ರದ ಪುನರ್‌ನಿರ್ಮಾಣ ಮಾಡಲಾಗುತ್ತದೆ.

ಇತರೆ ಪ್ರಮುಖ ಘೋಷಣೆಗಳು:

ಜಲ ನಿಧಿ ಕಲ್ಯಾಣಿಗಳ ಪುನಃಶ್ಚೇತನ: ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿರುವ 259 ಕಲ್ಯಾಣಿಗಳನ್ನು ಮುಂದಿನ ಮೂರು ವರ್ಷಗಳಲ್ಲಿ ಪುನರುಜ್ಜೀವನಗೊಳಿಸಲು ಈ ಯೋಜನೆ ಜಾರಿಗೆ ತರಲಾಗುತ್ತಿದೆ. ಇದಕ್ಕೆ ಮೊದಲ ಹಂತದಲ್ಲಿ 5 ಕೋಟಿ ರೂ. ಒದಗಿಸಲಾಗಿದೆ.

ಬೆಂಗಳೂರಿನಲ್ಲಿ ವಿದ್ಯಾರ್ಥಿ ನಿಲಯ: ಕೆಂಪೇಗೌಡ ವೃತ್ತದ ಬಳಿ ಇರುವ ಬಂಡಿಶೇಷಮ್ಮ ಛತ್ರದ ಜಾಗದಲ್ಲಿ ವಿದ್ಯಾರ್ಥಿಗಳಿಗೆ ಉಚಿತ ವಸತಿ ಸೌಲಭ್ಯ ಕಲ್ಪಿಸಲು ವಿದ್ಯಾರ್ಥಿ ನಿಲಯ ಹಾಗೂ ವಾಣಿಜ್ಯ ಸಂಕೀರ್ಣವನ್ನು ಪಿಪಿಪಿ ಮಾದರಿಯಲ್ಲಿ ನಿರ್ಮಿಸಲಾಗುವುದು.



## 4.48 ಲಕ್ಷ ಕೋಟಿ ರೂ. ಗಾತ್ರದ ಆದಾಯ ಕೊರತೆಯ ಬಜೆಟ್

ಬೆಂಗಳೂರು, ಮಾ. 6 - ಸಿಎಂ ಸಿದ್ದರಾಮಯ್ಯ ಅವರು 4.48 ಲಕ್ಷ ಕೋಟಿ ರೂ. ಗಾತ್ರದ ಆದಾಯ ಕೊರತೆಯ ಬಜೆಟ್ ಮಂಡನೆ ಮಾಡಿದ್ದಾರೆ. 2026-27 ಸಾಲಿನಲ್ಲಿ 1.32 ಲಕ್ಷ ಕೋಟಿ ರೂ. ಸಾಲದ ಮೊರೆ ಹೋಗಲು ಸಹಾ ಬಜೆಟ್‌ನಲ್ಲಿ ಯೋಜಿಸಲಾಗಿದೆ.

ಸಿದ್ದರಾಮಯ್ಯ ಸತತ ಮೂರನೇ ವರ್ಷವೂ ಆದಾಯ ಕೊರತೆಯ ಮತ್ತು ಕಳೆದ ವರ್ಷಕ್ಕಿಂತ ಹೆಚ್ಚಿನ ಆದಾಯ ಕೊರತೆಯ ಬಜೆಟ್ ಮಂಡಿಸಿದ್ದಾರೆ. 22,957 ಕೋಟಿ ರೂ. ಆದಾಯ ಕೊರತೆಯ ಬಜೆಟ್ ಇದಾಗಿದೆ. ಕಳೆದ ವರ್ಷ ಸುಮಾರು 19,000 ಕೋಟಿ ರೂ. ಆದಾಯ ಕೊರತೆ ತೋರಿಸಲಾಗಿತ್ತು.

**1.32 ಲಕ್ಷ ಕೋಟಿ ಸಾಲದ ಮೊರೆ:** 2026-27 ಸಾಲಿನಲ್ಲಿ ಒಟ್ಟು 1,32,000 ಕೋಟಿ ರೂ. ಸಾಲದ ಮೊರೆ ಹೋಗಲು ಯೋಜಿಸಲಾಗಿದೆ. ಕಳೆದ ಬಜೆಟ್‌ನಲ್ಲಿ 1,16,000 ಕೋಟಿ ರೂ. ಸಾಲದ ಎತ್ತುವಳಿಯ ಅಂದಾಜು ಮಾಡಲಾಗಿತ್ತು. ಈ ಬಾರಿ ಇನ್ನೂ ಹೆಚ್ಚಿನ ಸಾಲದ ಮೊರೆ ಹೋಗಲಾಗಿದೆ.

2026-27ನೇ ಸಾಲಿನ ಸಾಲದ ಪೈಕಿ 6,810 ಕೋಟಿ ರೂ. ಕೇಂದ್ರದಿಂದ ಸಾಲ ಪಡೆಯಲಾಗುವುದು. ಬಹಿರಂಗ ಮಾರುಕಟ್ಟೆಯಿಂದ 1,22,340 ಕೋಟಿ ರೂ. ಸಾಲ ಪಡೆಯಲಿದ್ದಾರೆ. ಉಳಿದಂತೆ ಎಸ್‌ಐಸಿ, ಎನ್ ಎಸ್‌ಎಸ್‌ಎಫ್, ಆರ್‌ಐಡಿಎಫ‌ದ ಗಳಿಂದ 2850 ಕೋಟಿ ಸಾಲ ಪಡೆಯಲು ಅಂದಾಜಿಸಲಾಗಿದೆ.

2026-27ರ ಅಗತ್ಯಕ್ಕೆ ರಾಜ್ಯದ ಒಟ್ಟು ಹೊಣೆಗಾರಿಕೆಗಳು 8,24,389 ಕೋಟಿ ರೂ. ಎಂದು ಅಂದಾಜಿಸಲಾಗಿದೆ. ಇದು ಜಿಎಸ್‌ಡಿಪಿಯ ಶೇ.24.94 ರಷ್ಟಿದೆ. ಆ ಮೂಲಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ ಮಾನದಂಡ ಪಾಲನೆ ಮಾಡಲಾಗಿದೆ.

## ಅಬಕಾರಿ ಇಲಾಖೆ ಆಧುನೀಕರಣ

2026-27ನೇ ಸಾಲಿನ ಬಜೆಟ್‌ನಲ್ಲಿ ಅಬಕಾರಿ ಇಲಾಖೆಯನ್ನು ಸಂಪೂರ್ಣವಾಗಿ ಆಧುನೀಕರಣಗೊಳಿಸುವ ಮತ್ತು ತೆರಿಗೆ ಪದ್ಧತಿಯನ್ನು ವಿಶ್ವದರ್ಜೆಗೆ ಏರಿಸುವ ಮಹತ್ವದ ನಿರ್ಧಾರಗಳನ್ನು ಕೈಗೊಳ್ಳಲಾಗಿದೆ.

60 ವರ್ಷ ಹಳೆಯದಾದ ಅಬಕಾರಿ ಕಾಯ್ದೆಗೆ ಮೇಜರ್ ಸರ್ಜರಿ ಮಾಡಲಾಗಿದ್ದು, ಮದ್ಯ ಪ್ರಿಯರಿಗೆ ಬೆಲೆ ಏರಿಕೆಯ ಬಿಸಿ ತಟ್ಟದಂತೆ ಹೊಸ ಸುಧಾರಣೆಗಳನ್ನು ತರಲು ಪ್ರಸ್ತಾಪ ಮಾಡಲಾಗಿದೆ.



**45,000 ಕೋಟಿ ರೂಪಾಯಿ ಗುರಿ ಮತ್ತು ತೆರಿಗೆ ಸುಧಾರಣೆ**

ಕಳೆದ ಸಾಲಿನಲ್ಲಿ ಅಬಕಾರಿ ಇಲಾಖೆಯಿಂದ ಶೇ.12.7 ರಷ್ಟು ಬೆಳವಣಿಗೆಯೊಂದಿಗೆ 36,492 ಕೋಟಿ ರೂ. ರಾಜಸ್ವ ಸಂಗ್ರಹವಾಗಿದ್ದು, ಮುಂಬರುವ 2026-27ನೇ ಸಾಲಿಗೆ 45,000 ಕೋಟಿ ರೂ.ಗಳ ಬೃಹತ್ ಸಂಗ್ರಹಣಾ ಗುರಿಯನ್ನು ನೀಡಲಾಗಿದೆ. ಈ ಗುರಿ ತಲುಪಲು ಸರ್ಕಾರವು ಮದ್ಯದ ಮೇಲಿನ ತೆರಿಗೆ ಪದ್ಧತಿಯನ್ನೇ ಬದಲಿಸಿದೆ.

ಇದುವರೆಗೆ ಮದ್ಯದ ಮಾರಾಟ ಬೆಲೆಯ ಮೇಲೆ ತೆರಿಗೆ ವಿಧಿಸಲಾಗುತ್ತಿತ್ತು. ಆದರೆ, ಏಪ್ರಿಲ್ 2026 ರಿಂದ ಜಾಗತಿಕ ಮಟ್ಟದ ಗೋಲ್ಡ್ ಸ್ಟ್ಯಾಂಡರ್ಡ್ ಎನಿಸಿಕೊಂಡಿರುವ 'ಮದ್ಯದ ಅಂಶ ಆಧಾರಿತ ತೆರಿಗೆ' ಪದ್ಧತಿಯನ್ನು ಜಾರಿಗೆ ತರಲಾಗುವುದು. ಅಂದರೆ ಪಾನೀಯದಲ್ಲಿರುವ ಆಲ್ಕೋಹಾಲ್ ಪ್ರಮಾಣಕ್ಕೆ ಅನುಗುಣವಾಗಿ ತೆರಿಗೆ ವಿಧಿಸಲಾಗುತ್ತದೆ. ಇದರಿಂದ ಮದ್ಯದ ಬೆಲೆಗಳಲ್ಲಿ ತೀವ್ರ ವ್ಯತ್ಯಾಸವಾಗದಂತೆ ಸಮತೋಲನ ಕಾಯ್ದುಕೊಳ್ಳಲು ಸಾಧ್ಯವಾಗುತ್ತದೆ.

**ಬೆಲೆ ನಿರ್ಧಾರ ಉತ್ಪಾದಕರಿಗೆ ಮುಕ್ತ ;** ಸರ್ಕಾರವು ಮದ್ಯದ ಬೆಲೆ ನಿರ್ಧಾರದ ಪ್ರಕ್ರಿಯೆಯಿಂದ ಹಿಂದೆ ಸರಿದಿದ್ದು, ಮಾರುಕಟ್ಟೆಯ ಆಧಾರದ ಮೇಲೆ ಬೆಲೆ ನಿಗದಿಪಡಿಸುವ ಅಧಿಕಾರವನ್ನು ಸಂಪೂರ್ಣವಾಗಿ ಮದ್ಯ ಉತ್ಪಾದಕರಿಗೇ ನೀಡಿದೆ. ಅಲ್ಲದೆ, ಪ್ರಸ್ತುತ ಇರುವ 16 ತೆರಿಗೆ ಸ್ಲ್ಯಾಬ್‌ಗಳನ್ನು ಕೇವಲ 8 ಸ್ಲ್ಯಾಬ್‌ಗಳಿಗೆ ಇಳಿಸುವ ಮೂಲಕ ವ್ಯವಸ್ಥೆಯನ್ನು ಸರಳೀಕರಿಸಲಾಗಿದೆ.

**ತಂತ್ರಜ್ಞಾನದ ಬಳಕೆ: ಬ್ಲಾಕ್‌ಚೈನ್ ಮತ್ತು ಜಿಯೋ-ಫೆನ್ಸ್‌ಡ್ ಲಾಕ್**

ತೆರಿಗೆ ಸೋರಿಕೆಯನ್ನು ತಡೆಯಲು ಸರ್ಕಾರ ಹೈಟೆಕ್ ಮೊರೆ ಹೋಗಿದೆ. ಬ್ಲಾಕ್‌ಚೈನ್ ಡಿಜಿಟಲ್ ಟ್ರ್ಯಾಕಿಂಗ್ ವ್ಯವಸ್ಥೆಯ ಮೂಲಕ ಮದ್ಯದ ಚಲನವಲನದ ಮೇಲೆ ನಿಗಾ ಇಡಲಾಗುವುದು. ಮದ್ಯ ರವಾನೆಯ ವೇಳೆ ಹಳೆಯ ಕಾಲದ ಬೆಂಗಾವಲು ವ್ಯವಸ್ಥೆಯ ಬದಲಿಗೆ ಜಿಯೋ-ಫೆನ್ಸ್‌ಡ್ ಇ-ಲಾಕ್ ವ್ಯವಸ್ಥೆ ಅಳವಡಿಸಲಾಗುವುದು. ಇದರಿಂದ ಮದ್ಯದ ಅಕ್ರಮ ಸಾಗಾಟಕ್ಕೆ ಬ್ರೇಕ್ ಬೀಳಲಿದೆ.

**ಉದ್ಯಮಿಗಳಿಗೆ ಸಿಹಿ ಸುದ್ದಿ**

5 ವರ್ಷಗಳ ಸನ್ನದು: ಮದ್ಯದ ಸನ್ನದುಗಳ ಮಾನ್ಯತೆಯನ್ನು 1 ವರ್ಷದಿಂದ 5 ವರ್ಷಗಳಿಗೆ ಏರಿಸಲಾಗಿದೆ.

ಆನ್‌ಲೈನ್ ಅನುಮೋದನೆ: ಅನುಮೋದನೆ ಪ್ರಕ್ರಿಯೆಯನ್ನು 16 ಹಂತಗಳಿಂದ 7 ಹಂತಗಳಿಗೆ ಇಳಿಸಲಾಗಿದ್ದು, 2 ದಿನಗಳಲ್ಲಿ ಅನುಮತಿ ದೊರೆಯಲಿದೆ.

24X7 ಕಾರ್ಯಾಚರಣೆ: ಡಿಸ್ಟಿಲರಿಗಳು ಮತ್ತು ಬ್ರೂವರಿಗಳಿಗೆ ದಿನದ 24 ಗಂಟೆಯೂ ಕಾರ್ಯಾಚರಣೆ ಮಾಡಲು ಅವಕಾಶ ನೀಡಲಾಗಿದೆ.

ಡಿಜಿಟಲ್ ಕೌನ್ಸಿಲಿಂಗ್: ಭ್ರಷ್ಟಾಚಾರ ತಡೆಯಲು ಅಬಕಾರಿ ಅಧೀಕ್ಷಕರ ವರ್ಗಾವಣೆಯನ್ನು ಡಿಜಿಟಲ್ ಕೌನ್ಸಿಲಿಂಗ್ ಮೂಲಕ ಮಾಡಲಾಗುವುದು.

## ಎಲ್ಲ ಜಿಲ್ಲೆಗಳಲ್ಲಿ ವಿಜ್ಞಾನ ಕೇಂದ್ರ ಸ್ಥಾಪನೆ

ವಿಜ್ಞಾನ ಕ್ಷೇತ್ರಕ್ಕೆ ಹಲವು ಕೊಡುಗೆಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಕಟಿಸಿದ್ದು, ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ವಿಜ್ಞಾನ ಕೇಂದ್ರ ಹಾಗೂ 11 ಜಿಲ್ಲೆಗಳಲ್ಲಿ ತಾರಾಲಯಗಳನ್ನು ಸ್ಥಾಪಿಸುವುದಾಗಿ ಘೋಷಿಸಿದ್ದಾರೆ.

ಈ ಸಾಲಿನಲ್ಲಿ ವಿಜಯನಗರ, ಬಳ್ಳಾರಿ, ಚಿತ್ರದುರ್ಗ, ಯಾದಗಿರಿ, ಕೊಪ್ಪಳ ಹಾಗೂ ಬೀದರ್ ಜಿಲ್ಲೆಗಳಲ್ಲಿ ತಲಾ 4 ಕೋಟಿಯಂತೆ ಒಟ್ಟು 24 ಕೋಟಿ ವೆಚ್ಚದಲ್ಲಿ 6 ಹೊಸ ತಾರಾಲಯಗಳನ್ನು ಆರಂಭಿಸಲಾಗುವುದು ಎಂದು ಬಜೆಟ್ ಭಾಷಣದಲ್ಲಿ ತಿಳಿಸಿದ್ದಾರೆ. ಬೆಂಗಳೂರಿನ ಆದಿನಾರಾಯಣ ಹೊಸಹಳ್ಳಿಯಲ್ಲಿ ಅತ್ಯಾಧುನಿಕ ಸೌಲಭ್ಯವುಳ್ಳ ವಿಜ್ಞಾನ ನಗರವನ್ನು 233ಕೋಟಿ ವೆಚ್ಚದಲ್ಲಿ ಸ್ಥಾಪಿಸಲಾಗುವುದು ಎಂದು ಹೇಳಿದ್ದಾರೆ.

ಡ್ರೋಣ್‌ಗಳ ಪರೀಕ್ಷೆ ಮತ್ತು ಕಾರ್ಯಕ್ಷಮತೆ ಮೌಲ್ಯಮಾಪನಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಡ್ರೋಣ್ ಪರೀಕ್ಷಾ ಕೇಂದ್ರ ಸ್ಥಾಪನೆ, ಪರಿಣಾಮಕಾರಿ ನರ ಶಸ್ತ್ರಚಿಕಿತ್ಸೆಗೆ ಪೂರಕವಾಗಲು ಅತ್ಯಾಧುನಿಕ ಶಸ್ತ್ರಚಿಕಿತ್ಸಾ ನೆರವಿನ ರೋಬೋಗಳನ್ನು ಐಐಐಟಿಗಳನ್ನು ಬೆಂಗಳೂರು ಮತ್ತು ನಿಮ್ಹಾನ್ಸ್ ಸಂಸ್ಥೆಗಳ ಸಹಭಾಗಿತ್ವದಲ್ಲಿ ವಿನ್ಯಾಸಗೊಳಿಸಲು 4 ಕೋಟಿ ರೂ. ನೆರವು, ಜೈವಿಕ ತಂತ್ರಜ್ಞಾನ ಆಧಾರಿತ ಪ್ರಯೋಗಾಲಯಗಳಿಗೆ ಸ್ಥಳಾವಕಾಶ ಕಲ್ಪಿಸಲು ಮಾನವ ತಳಿ ವಿಜ್ಞಾನ ಕೇಂದ್ರದಲ್ಲಿ ಒಟ್ಟು 20 ಕೋಟಿ ರೂ. ವೆಚ್ಚದಲ್ಲಿ ಮೂಲ ಸೌಲಭ್ಯ ಒದಗಿಸುವುದಾಗಿಯೂ ಬಜೆಟ್‌ನಲ್ಲಿ ಹೇಳಿದ್ದಾರೆ.

## ಪೊಲೀಸ್ ಇಲಾಖೆಗೆ ಹೆಚ್ಚಿನ ಅನುದಾನ

ಬಜೆಟ್‌ನಲ್ಲಿ ಪೊಲೀಸ್ ಇಲಾಖೆಗೂ ಸಿದ್ದರಾಮಯ್ಯ ಹೆಚ್ಚಿನ ಅನುದಾನ ನೀಡಿದ್ದಾರೆ. ಹೆಚ್ಚುತ್ತಿರುವ ಜನಸಂಖ್ಯೆ ಮತ್ತು ಕೈಗಾರಿಕಾ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು, ನಾಗರಿಕರ ಸುರಕ್ಷತೆಗಾಗಿ ರಾಜ್ಯ ಸರ್ಕಾರವು ದಕ್ಷಿಣ ಕನ್ನಡ ಸೇರಿದಂತೆ 12 ಹೊಸ ಪೊಲೀಸ್ ಠಾಣೆಗಳನ್ನು ಮಂಜೂರು ಮಾಡಿದೆ. ಇದರಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಸಂಚಾರಿ ಪೊಲೀಸ್ ಠಾಣೆಗಳು ಸೇರಿವೆ.

ಹೊಸ ಠಾಣೆಗಳಿಗೆ ಸುಸಜ್ಜಿತ ಕಟ್ಟಡ ಮತ್ತು ಆಧುನಿಕ ಉಪಕರಣಗಳನ್ನು ಒದಗಿಸಲು ಅನುದಾನ ಮೀಸಲಿಡಲಾಗಿದೆ. 12 ಪೊಲೀಸ್ ಠಾಣೆಗಳಿಗೆ ಅಸ್ತು ಎಂದು ಹೇಳಿದ್ದಾರೆ. ಹೊಸ ಠಾಣೆಗಳ ಕಾರ್ಯಾಚರಣೆಗಾಗಿ ಅಗತ್ಯವಿರುವ ಪೊಲೀಸ್ ಸಿಬ್ಬಂದಿಗಳ ನೇಮಕಾತಿ ಪ್ರಕ್ರಿಯೆಗೂ ಚಾಲನೆ ನೀಡಲಾಗುವುದು. ದೊಡ್ಡಬಳ್ಳಾಪುರ, ಹಿರಿಯೂರು ಮತ್ತು ಗುಂಡ್ಲುಪೇಟೆಯಂತಹ ಬೆಳೆಯುತ್ತಿರುವ ನಗರಗಳಲ್ಲಿ ಸಂಚಾರ ದಟ್ಟಣೆ ನಿಯಂತ್ರಿಸಲು ಸಂಚಾರಿ ಠಾಣೆಗಳಿಗೆ ಒತ್ತು ನೀಡಲಾಗಿದೆ.

ಇದರ ಜತೆಗೆ ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ ವಿವಿಧ ಶ್ರೇಣಿಯ ಒಟ್ಟು 8,000 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಈ ವರ್ಷ ಭರ್ತಿ ಮಾಡಲಾಗುವುದು.

ಪೊಲೀಸ್ ಸಿಬ್ಬಂದಿಗಳಿಗೆ ವಸತಿ ಸೌಕರ್ಯ ಒದಗಿಸಲು 250 ಕೋಟಿ ರೂ. ವೆಚ್ಚದಲ್ಲಿ ಹೊಸ ವಸತಿಗೃಹಗಳ ನಿರ್ಮಾಣ. ಪೊಲೀಸ್ ಇಲಾಖೆಯ ಸಂವಹನ ಮತ್ತು ಫೋರೆನ್ಸಿಕ್ ಸಾಮರ್ಥ್ಯ ಹೆಚ್ಚಿಸಲು 75 ಕೋಟಿ ರೂ. ವೆಚ್ಚದಲ್ಲಿ ಹೊಸ ವಾಹನಗಳು ಮತ್ತು ಆಧುನಿಕ ಉಪಕರಣಗಳ ಖರೀದಿ ಮಾಡಲಾಗುವುದು.

ಅಗ್ನಿಶಾಮಕ ದಳದ ಸಿಬ್ಬಂದಿಗಳ ಆಹಾರ ಭತ್ಯೆಯನ್ನು 150 ರೂ.ನಿಂದ 300 ರೂ.ಗೆ ದ್ವಿಗುಣಗೊಳಿಸಲಾಗಿದೆ. ಕಾರಾಗೃಹಗಳಲ್ಲಿ ಮೊಬೈಲ್ ಬಳಕೆ ಮತ್ತು ಮಾದಕ ದ್ರವ್ಯ ತಡೆಗಟ್ಟಲು 20 ಕೋಟಿ ರೂ. ವೆಚ್ಚದಲ್ಲಿ AI ಆಧಾರಿತ ತಪಾಸಣಾ ವ್ಯವಸ್ಥೆ ಮತ್ತು ಬಾಡಿ ವೋರ್ನ್ ಕ್ಯಾಮೆರಾಗಳ ಅಳವಡಿಕೆ. ಸೈಬರ್ ಅಪರಾಧಗಳನ್ನು ತಡೆಗಟ್ಟಲು ಹೊಸ ಸಾಫ್ಟ್‌ವೇರ್ ಮತ್ತು ತರಬೇತಿಗಾಗಿ ವಿಶೇಷ ಅನುದಾನ ಕೂಡ ನೀಡಲಾಗಿದೆ.

**ಜಿಲ್ಲೆ - ಪೊಲೀಸ್ ಠಾಣೆಯ ಹೆಸರು - ಮಾದರಿ**

ದಕ್ಷಿಣ ಕನ್ನಡ - ಮಾಣಿ ಪೊಲೀಸ್ ಠಾಣೆ - ಕಾನೂನು & ಸುವ್ಯವಸ್ಥೆ
ದಕ್ಷಿಣ ಕನ್ನಡ - ಸಜಿಪನಡು ಪೊಲೀಸ್ ಠಾಣೆ - ಕಾನೂನು & ಸುವ್ಯವಸ್ಥೆ
ಬೆಂಗಳೂರು ಗ್ರಾಮಾಂತರ - ದೊಡ್ಡಬಳ್ಳಾಪುರ ಸಂಚಾರಿ ಠಾಣೆ - ಸಂಚಾರ
ಬೆಳಗಾವಿ - ಯರಗಟ್ಟಿ ಪೊಲೀಸ್ ಠಾಣೆ - ಕಾನೂನು & ಸುವ್ಯವಸ್ಥೆ
ಯಾದಗಿರಿ - ಕಕ್ಕೇರಾ ಪೊಲೀಸ್ ಠಾಣೆ - ಕಾನೂನು & ಸುವ್ಯವಸ್ಥೆ
ಚಿತ್ರದುರ್ಗ ಹಿರಿಯೂರು - ಸಂಚಾರ ಪೊಲೀಸ್ ಠಾಣೆ - ಸಂಚಾರ
ದಾವಣಗೆರೆ - ಆನಗೋಡು ಪೊಲೀಸ್ ಠಾಣೆ - ಕಾನೂನು & ಸುವ್ಯವಸ್ಥೆ
ಹಾವೇರಿ - ತಿಳುವಳ್ಳಿ ಪೊಲೀಸ್ ಠಾಣೆ - ಕಾನೂನು & ಸುವ್ಯವಸ್ಥೆ
ಮೈಸೂರು - ಉದಯಗಿರಿ ದಕ್ಷಿಣ ಪೊಲೀಸ್ ಠಾಣೆ - ಕಾನೂನು & ಸುವ್ಯವಸ್ಥೆ
ವಿಜಯಪುರ - ಮುದ್ದೇಬಿಹಾಳ ಗ್ರಾಮಾಂತರ ಠಾಣೆ - ಕಾನೂನು & ಸುವ್ಯವಸ್ಥೆ
ಕೋಲಾರ - ನರಸಾಪುರ ಕೈಗಾರಿಕಾ ವಲಯ ಠಾಣೆ - ಕೈಗಾರಿಕಾ ಸುರಕ್ಷತೆ
ಚಾಮರಾಜನಗರ - ಗುಂಡ್ಲುಪೇಟೆ ಸಂಚಾರ ಠಾಣೆ - ಸಂಚಾರ

## ಬೆಂಗಳೂರಿನ ಅಭಿವೃದ್ಧಿಗೆ ಭರ್ಜರಿ ಕೊಡುಗೆ

ದಾಖಲೆಯ ಬಜೆಟ್ ಮಂಡನೆ ಮಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ 2026-27ನೇ ಸಾಲಿನ ಕರ್ನಾಟಕ ಆಯ-ವ್ಯಯದಲ್ಲಿ ರಾಜ್ಯ ರಾಜಧಾನಿ ಬೆಂಗಳೂರಿನ ಅಭಿವೃದ್ಧಿಗೆ ಭರ್ಜರಿ ಕೊಡುಗೆಗಳನ್ನು ಪ್ರಕಟಿಸಿದ್ದಾರೆ

ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರ ಬ್ರ್ಯಾಂಡ್ ಬೆಂಗಳೂರು ಪರಿಕಲ್ಪನೆಗೆ ಬೆಂಬಲ ನೀಡುವಂತೆ ನಗರ ಅಭಿವೃದ್ಧಿಗೆ ಒಟ್ಟು 7,000 ಕೋಟಿ ರೂಪಾಯಿ ಅನುದಾನವನ್ನು ಸರ್ಕಾರ ಬಜೆಟ್‌ನಲ್ಲಿ ಘೋಷಿಸಿದೆ.

ಬೆಂಗಳೂರು ನಗರದಲ್ಲಿ ರಸ್ತೆ, ಮೂಲಸೌಕರ್ಯ, ಪಾದಚಾರಿ ಮಾರ್ಗ ಹಾಗೂ ಸಂಚಾರ ವ್ಯವಸ್ಥೆಯನ್ನು ಸುಧಾರಿಸುವ ಉದ್ದೇಶದಿಂದ ಹಲವು ಮಹತ್ವಾಕಾಂಕ್ಷಿ ಯೋಜನೆಗಳನ್ನು ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ. ನಗರದ ಐದು ನಗರ ಪಾಲಿಕೆಗಳಲ್ಲಿ 1,233 ಕೋಟಿ ರೂಪಾಯಿ ವೆಚ್ಚದಲ್ಲಿ ವಾರ್ಡ್ ಮಟ್ಟದ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತದೆ.

ಇದರ ಜೊತೆಗೆ 1,700 ಕೋಟಿ ರೂಪಾಯಿ ವೆಚ್ಚದಲ್ಲಿ 158 ಕಿಲೋಮೀಟರ್ ಉದ್ದದ ರಸ್ತೆಗಳಿಗೆ ವೈಟ್ ಟಾಪಿಂಗ್ ಮಾಡಲಾಗುತ್ತದೆ. ಮತ್ತೊಂದೆಡೆ 1,936 ಕೋಟಿ ರೂಪಾಯಿ ವೆಚ್ಚದಲ್ಲಿ ಪ್ರಮುಖ ಮತ್ತು ಉಪ ಮುಖ್ಯ ರಸ್ತೆಗಳ ಅಭಿವೃದ್ಧಿ ಕೈಗೊಳ್ಳಲು ಸರ್ಕಾರ ಯೋಜನೆ ರೂಪಿಸಿದೆ.

**ಸಿಲ್ಕ್ ಬೋರ್ಡ್ ಟು ಕೆಆರ್‌ಪುರಂ ಔಟರ್ ರಿಂಗ್ ರೋಡ್‌ಗೆ 450 ಕೋಟಿ ರೂ.**

ನಗರದ ಸಂಚಾರ ದಟ್ಟಣೆ ಕಡಿಮೆ ಮಾಡುವ ಉದ್ದೇಶದಿಂದ ಸಿಲ್ಕ್ ಬೋರ್ಡ್ ಜಂಕ್ಷನ್‌ನಿಂದ ಕೆಆರ್‌ಪುರಂ ಮೆಟ್ರೋ ನಿಲ್ದಾಣದವರೆಗೆ ಹೊರವರ್ತುಲ ರಸ್ತೆ ಅಭಿವೃದ್ಧಿಗೆ 450 ಕೋಟಿ ರೂಪಾಯಿ ಅನುದಾನ ಘೋಷಿಸಲಾಗಿದೆ. ಜೊತೆಗೆ ರಾಜಕಾಲುವೆಗಳ ಮೇಲ್ದರ್ಜೆಗೇರಿಸುವುದು ಮತ್ತು ಕೆರೆಗಳ ಅಭಿವೃದ್ಧಿಗಾಗಿ 273 ಕೋಟಿ ರೂಪಾಯಿ ಮೀಸಲಿಡಲಾಗಿದೆ.

ಮುಂದಿನ ಮೂರು ವರ್ಷಗಳಲ್ಲಿ ಬೆಂಗಳೂರಿನ 450 ಕಿಲೋಮೀಟರ್‌ಗೂ ಹೆಚ್ಚು ರಸ್ತೆಗೆ ವೈಟ್ ಟಾಪಿಂಗ್ ಮಾಡುವ ಯೋಜನೆಯೂ ಸರ್ಕಾರದ ಗಮನ ಸೆಳೆದಿದೆ. ಇದಕ್ಕಾಗಿ ಸುಮಾರು 3,000 ಕೋಟಿ ರೂಪಾಯಿ ಮೀಸಲಿಡಲಾಗಿದೆ.

ಇದರ ಜೊತೆಗೆ ನಗರ ಸೌಂದರ್ಯ ಹೆಚ್ಚಳಕ್ಕೂ ಒತ್ತು ನೀಡಲಾಗಿದ್ದು, 175 ಪ್ರಮುಖ ಜಂಕ್ಷನ್‌ಗಳನ್ನು ಆಧುನಿಕವಾಗಿ ಅಭಿವೃದ್ಧಿಪಡಿಸುವ ಯೋಜನೆ ಕೂಡ ಬಜೆಟ್‌ನಲ್ಲಿ ಪ್ರಕಟವಾಗಿದೆ.

ಒಟ್ಟಾರೆ, ಈ ಬಜೆಟ್‌ನಲ್ಲಿ ಘೋಷಿಸಲಾದ ವಿವಿಧ ಯೋಜನೆಗಳು ಡಿ.ಕೆ. ಶಿವಕುಮಾರ್ ಅವರ ಬ್ರ್ಯಾಂಡ್ ಬೆಂಗಳೂರು ಕನಸಿಗೆ ಮತ್ತಷ್ಟು ಬಲ ನೀಡುವಂತೆ ಕಂಡುಬಂದಿವೆ. ರಸ್ತೆ, ಸಂಚಾರ ಹಾಗೂ ಮೂಲಸೌಕರ್ಯ ಅಭಿವೃದ್ಧಿಗೆ ನೀಡಿರುವ ಹೆಚ್ಚಿನ ಅನುದಾನದಿಂದ ರಾಜಧಾನಿ ಬೆಂಗಳೂರಿನ ಅಭಿವೃದ್ಧಿಗೆ ವೇಗ ಸಿಗಲಿದೆ ಎಂಬ ನಿರೀಕ್ಷೆ ವ್ಯಕ್ತವಾಗಿದೆ.



# ದೇಶದ ಹಲವು ರಾಜ್ಯಗಳಿಗೆ ರಾಜ್ಯಪಾಲರ ನೇಮಕ; ಜಿಷ್ಣು ದೇವ್ ವರ್ಮ ಮಹಾರಾಷ್ಟ್ರದ ನೂತನ ರಾಜ್ಯಪಾಲ



ಹೊಸದಿಲ್ಲಿ, ಮಾ. 6- ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಗುರುವಾರ ರಾತ್ರಿ ಮಹಾರಾಷ್ಟ್ರ, ಪಶ್ಚಿಮ ಬಂಗಾಳ ಸೇರಿದಂತೆ ದೇಶದ ಹಲವು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಹೊಸ ರಾಜ್ಯಪಾಲರುಗಳು ಮತ್ತು ಉಪ ರಾಜ್ಯಪಾಲರುಗಳನ್ನು ನೇಮಿಸಿದ್ದು, ಮಹಾರಾಷ್ಟ್ರದ ನೂತನ ರಾಜ್ಯಪಾಲರಾಗಿ ಜಿಷ್ಣು ದೇವ್ ವರ್ಮ (68) ಅವರನ್ನು ನೇಮಕ ಮಾಡಿದ್ದಾರೆ.

ಜಿಷ್ಣು ದೇವ್ ವರ್ಮ ಅವರು 2024ರ ಜುಲೈ 31ರಿಂದ ತೆಲಂಗಾಣದ ರಾಜ್ಯಪಾಲರಾಗಿದ್ದು, ಮಹಾರಾಷ್ಟ್ರಕ್ಕೆ ವರ್ಗಾವಣೆಯಾಗಿದ್ದಾರೆ. ಮಹಾರಾಷ್ಟ್ರದ ಪ್ರಸಕ್ತ ಹಂಗಾಮಿ ರಾಜ್ಯಪಾಲ ಆಚಾರ್ಯ ದೇವವ್ರತ ಅವರ ಸ್ಥಾನಕ್ಕೆ ವರ್ಮ ನೇಮಕವಾಗಿದ್ದಾರೆ. ದೇವವ್ರತ ಅವರು ಗುಜರಾತ್ ರಾಜ್ಯಪಾಲರಾಗಿದ್ದು 2025ರ ಸೆಪ್ಟೆಂಬರ್ 15ರಿಂದ ಮಹಾರಾಷ್ಟ್ರದ ಹಂಗಾಮಿ ರಾಜ್ಯಪಾಲರಾಗಿ ಹೆಚ್ಚುವರಿ ಹೊಣೆ ಪಡೆದಿದ್ದರು.

ಹಿಮಾಚಲ ಪ್ರದೇಶದ ರಾಜ್ಯಪಾಲರಾಗಿದ್ದ ಶಿವಪ್ರತಾಪ್ ಶುಕ್ಲಾ ಅವರನ್ನು ತೆಲಂಗಾಣದ ರಾಜ್ಯಪಾಲರಾಗಿ ವರ್ಗಾವಣೆ ಮಾಡಲಾಗಿದೆ. ಬಿಹಾರ ವಿಧಾನ ಸಭೆಯ ಮಾಜಿ ಸ್ಪೀಕರ್ ನಂದ ಕಿಶೋರ್ ಯಾದವ್ ಅವರನ್ನು ನಾಗಾಲ್ಯಾಂಡಿನ ನೂತನ ರಾಜ್ಯಪಾಲರಾಗಿ ನೇಮಕ ಮಾಡಲಾಗಿದೆ.

ಬಿಹಾರದ ನೂತನ ರಾಜ್ಯಪಾಲರಾಗಿ ಲೆಫ್ಟಿನೆಂಟ್ ಜನರಲ್ (ನಿವೃತ್ತ) ಸಯ್ಯದ್ ಅಟಾ ಹಸ್ನೈನ್ ಅವರನ್ನು ನೇಮಿಸಿರುವುದಾಗಿ ರಾಷ್ಟ್ರಪತಿ ಭವನದ ಪ್ರಕಟಣೆ ತಿಳಿಸಿದೆ.

ತಮಿಳುನಾಡಿನ ರಾಜ್ಯಪಾಲರಾದ ಆರ್. ಎಸ್. ರವಿ ಅವರನ್ನು ಪಶ್ಚಿಮ ಬಂಗಾಳದ ನೂತನ ರಾಜ್ಯಪಾಲರಾಗಿ ನೇಮಕ ಮಾಡಲಾಗಿದೆ. ಪಶ್ಚಿಮ ಬಂಗಾಳದ ರಾಜ್ಯಪಾಲ ಸ್ಥಾನಕ್ಕೆ ಗುರುವಾರ ಡಾ| ಸಿ. ವಿ. ಆನಂದ ಬೋಸ್ ಅವರು ನೀಡಿದ್ದ ರಾಜೀನಾಮೆಯನ್ನು ರಾಷ್ಟ್ರಪತಿ ಅಂಗೀಕರಿಸಿದ್ದಾರೆ. ಕೇರಳದ ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಅವರು ತಮಿಳುನಾಡಿನ ರಾಜ್ಯಪಾಲರಾಗಿ ಹೆಚ್ಚುವರಿ ಕಾರ್ಯಭಾರ ನಿರ್ವಹಿಸಲಿದ್ದಾರೆ.

ಹಿಮಾಚಲ ಪ್ರದೇಶದ ಹೊಸ ರಾಜ್ಯಪಾಲರಾಗಿ ಲಡಾಖ್‌ನ ಉಪ ರಾಜ್ಯಪಾಲರಾಗಿದ್ದ ಕವಿಂದರ್ ಗುಪ್ತಾ ಅವರನ್ನು ವರ್ಗಾವಣೆ ಮಾಡಲಾಗಿದೆ. ದಿಲ್ಲಿಯ ಉಪ ರಾಜ್ಯಪಾಲ ವಿನಯ್ ಕುಮಾರ್ ಸಕ್ಸೆನ ಅವರನ್ನು ಲಡಾಖ್ ಉಪ ರಾಜ್ಯಪಾಲರಾಗಿ ನೇಮಿಸಲಾಗಿದೆ. ದಿಲ್ಲಿ ಉಪ ರಾಜ್ಯಪಾಲರಾಗಿ ಮಾಜಿ ರಾಜತಾಂತ್ರಿಕ ಸರಣ್‌ಜಿತ್ ಸಿಂಗ್ ಸಂಧು ಅವರನ್ನು ನೇಮಕ ಮಾಡಿ ರಾಷ್ಟ್ರಪತಿ ಮುರ್ಮು ಆದೇಶ ನೀಡಿದ್ದಾರೆ. ಸಂಧು - ಅವರು ಅಮೆರಿಕದಲ್ಲಿ ಭಾರತದ ರಾಯಭಾರಿಯಾಗಿದ್ದರು. ಕಳೆದ ಲೋಕಸಭಾ ಚುನಾವಣೆ ವೇಳೆ ಬಿಜೆಪಿ ಸೇರಿದ್ದ ಅವರು ಪಂಜಾಬಿನ ಅಮೃತಸರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ಪರಾಭವಗೊಂಡಿದ್ದರು. ಸಂಧು ಅವರನ್ನು ದಿಲ್ಲಿಯ ನೂತನ ಉಪ ರಾಜ್ಯಪಾಲರಾಗಿ ನೇಮಕ ಮಾಡಲಾಗಿದ್ದು, ಕಳೆದ ಒಂದು ವರ್ಷದಿಂದ ದೇಶದ ರಾಜಧಾನಿಯಲ್ಲಿ ಬಿಜೆಪಿ ಸರಕಾರವಿದೆ.

ತಮಿಳುನಾಡಿನ ರಾಜ್ಯಪಾಲರಾಗಿದ್ದುಕೊಂಡು ರಾಜ್ಯ ಸರಕಾರದ ಜತೆಗೆ ಸಂಘರ್ಷದಿಂದಾಗಿ ಸುಪ್ರೀಂ ಕೋರ್ಟಿನಲ್ಲಿ ಛೀಮಾರಿಗೆ ಒಳಗಾಗಿದ್ದ ಆರ್. ಎನ್. ರವಿ ಅವರನ್ನು ಇನ್ನು ಒಂದು ತಿಂಗಳಲ್ಲಿ ವಿಧಾನಸಭಾ ಚುನಾವಣೆ ನಡೆಯಲಿರುವ ಪಶ್ಚಿಮ ಬಂಗಾಳದ ರಾಜ್ಯಪಾಲರಾಗಿ ವರ್ಗಾಯಿಸಲಾಗಿದೆ. ತಮಿಳುನಾಡಿನಲ್ಲಿಯೂ ಎಪ್ರಿಲ್ ತಿಂಗಳಲ್ಲಿ ವಿಧಾನಸಭಾ ಚುನಾವಣೆ ನಡೆಯಲಿದೆ.

# ದೀಪಕ್ ಸಿಂಗ್ ಮುಂಬಯಿ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ; ಯೋಜನ ಥೊಕಾಲೆ ಮಹಿಳಾ ಮೋರ್ಚಾ ಅಧ್ಯಕ್ಷೆ

ಮುಂಬಯಿ, ಮಾ. 6- ಮುಂಬಯಿ ಘಟಕದ ಬಿಜೆಪಿ ಅಧ್ಯಕ್ಷ ಅಮಿತ್ ಸಾಟಂ ಅವರು ಮುಂಬಯಿಯ ಬಿಜೆಪಿ ಯುವ ಮತ್ತು ಮಹಿಳಾ ಘಟಕಗಳನ್ನು ಪುನರ್ರಚಿಸಿದ್ದು ಮುಂಬಯಿ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷರಾಗಿ ದೀಪಕ್ ಸಿಂಗ್ ಮತ್ತು ಮಹಿಳಾ ಮೋರ್ಚಾ ಅಧ್ಯಕ್ಷೆಯಾಗಿ ಯೋಜನಾ ಥೊಕಾಲೆ ಅವರನ್ನು ನೇಮಕ ಮಾಡಿದ್ದಾರೆ.

ಮುಂಬಯಿಯಲ್ಲಿ ಬಿಜೆಪಿಯನ್ನು ಸಂಘಟನಾತ್ಮಕವಾಗಿ ಮತ್ತಷ್ಟು ಬಲಿಷ್ಠಗೊಳಿಸಲು ನಗರದ ಯುವ ಮತ್ತು ಮಹಿಳಾ ಘಟಕವನ್ನು ಪುನರ್ರಚಿಸಿರುವುದಾಗಿ ಸಾಟಂ ಹೇಳಿದ್ದಾರೆ. ಸಾಟಂ ಅವರು ಮುಂಬಯಿ ಬಿಜೆಪಿ ಘಟಕದ ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರ ಪಟ್ಟಿಯನ್ನು ಪ್ರಕಟಿಸಿದ್ದಾರೆ. ಮುಂಬಯಿ ಬಿಜೆಪಿ ಒಬಿಸಿ ಮೋರ್ಚಾ ಅಧ್ಯಕ್ಷರಾಗಿ ಸನ್ನಿ ಸನಪ್, ಪರಿಶಿಷ್ಟ ಜಾತಿಗಳ ಮೋರ್ಚಾ ಅಧ್ಯಕ್ಷರಾಗಿ ಶರದ್ ಕಾಂಬ್ಳೆ, ಉತ್ತರ ಭಾರತೀಯರ ಮೋರ್ಚಾ ಅಧ್ಯಕ್ಷರಾಗಿ ಪ್ರಮೋದ್ ಮಿಶ್ರಾ ಮತ್ತು ಅಲ್ಪಸಂಖ್ಯಾಕರ ಮೋರ್ಚಾ ಅಧ್ಯಕ್ಷರಾಗಿ ವಾಸಿಂಖಾನ್ ಅವರನ್ನು ನೇಮಿಸಲಾಗಿದೆ.

ಧನಂಜಯ್ ಕೋಳ್ಕರ್ ಬಿಜೆಪಿಯ ಮುಂಬಯಿ ಕೊಳೆಗೇರಿ ಮೋರ್ಚಾದ ಅಧ್ಯಕ್ಷರಾಗಿ ನೇಮಕವಾದರೆ, ಕೊಂಕಣ ಆಘಾಡಿ ಅಧ್ಯಕ್ಷರಾಗಿ ಸುಹಾಸ್ ಅಧಿವರ್ಕರ್ ನೇಮಕವಾಗಿದ್ದಾರೆ. ಪಾಂಡುರಂಗ ಥೋರಟ್ ಅವರನ್ನು ಪಶ್ಚಿಮ ಮಹಾರಾಷ್ಟ್ರ ಆಘಾಡಿ ಅಧ್ಯಕ್ಷರಾಗಿ ಮತ್ತು ಅಭಿಜಿತ್ ರಾಣೆ ಅವರನ್ನು ಕಾರ್ಮಿಕ ಆಘಾಡಿ ಅಧ್ಯಕ್ಷರಾಗಿ ಸಾಟಂ ಪ್ರಕಟಿಸಿದ್ದಾರೆ.

ನ್ಯಾಯವಾದಿ ಅಮಿತ್ ಮೆಹ್ತಾ ಅವರನ್ನು ಮುಂಬಯಿ ಬಿಜೆಪಿಯ ಕಾನೂನು ಘಟಕದ ಸಂಚಾಲಕರಾಗಿ ಮತ್ತು ನ್ಯಾಯವಾದಿ ಮದನ್ ಗುಪ್ತಾ ಅವರನ್ನು ಸಹ ಸಂಚಾಲಕರಾಗಿ ನಿಯುಕ್ತಿ ಮಾಡಲಾಗಿದೆ. ನಚಿಕೇತ್ ಸಹಸ್ರಬುಧೆ ಅವರನ್ನು ಮುಂಬಯಿ ಬಿಜೆಪಿ ಐಟಿ ಮತ್ತು ಮಾಧ್ಯಮ ಘಟಕದ ಸಂಚಾಲಕರಾಗಿ ಮತ್ತು ಪಲ್ಲವಿ ಸಮ್ಯಾನ್ಕರ್ ಅವರನ್ನು ಸಹ ಸಂಚಾಲಕಿಯಾಗಿ ನೇಮಕ ಮಾಡಲಾಗಿದೆ.

ಮುಂಬಯಿ ಬಿಜೆಪಿ ಗುಜರಾತಿ ಘಟಕದ ಸಂಚಾಲಕರಾಗಿ ಬಿಮಲ್ ಭೂಟ ಮತ್ತು ಸಿ. ವಿ. ಶಾಹ ಅವರನ್ನು ಸಹ ಸಂಚಾಲಕರಾಗಿ ನಿಯುಕ್ತಿ ಮಾಡಲಾಗಿದೆ. ನಗರ ಬಿಜೆಪಿ ಕೈಗಾರಿಕೆಗಳ ಘಟಕದ ಅಧ್ಯಕ್ಷರಾಗಿ ಭರತ್ ಅಜ್ಮಾನಿ ಅವರನ್ನು ನೇಮಿಸಲಾದರೆ ಶಿಕ್ಷಣ ಘಟಕದ ಅಧ್ಯಕ್ಷರಾಗಿ ಡಾ| ರಾಜು ಬಂಡ್ಗಾರ್ ಮತ್ತು ಸಾಂಸ್ಕೃತಿಕ ಘಟಕದ ಅಧ್ಯಕ್ಷರಾಗಿ ಜೆಸಲ್ ಕೊಠಾರಿ ಅವರನ್ನು ನೇಮಿಸಲಾಗಿದೆ. ಮುಂಬಯಿ ಬಿಜೆಪಿ ಘಟಕದ ವಕ್ತಾರರುಗಳಾಗಿ ಅನಿಕೇತ್ ನಿಕಮ್, ನಿರಂಜನ್ ಶೆಟ್ಟಿ, ಸಮಿತಾ ಸಮಾನ್ ಸಿಂಗ್, ರಾಹುಲ್ ದೀನನಾಥ್ ತಿವಾರಿ, ಅಜಯ್ ಸಿಂಗ್, ಉದಯ್ ಪ್ರತಾಪ್ ಸಿಂಗ್ ಮತ್ತು ಕಿಶೋರ್ ಜೋಷಿ ಅವರನ್ನು ಸಾಟಂ ನೇಮಿಸಿದ್ದಾರೆ.

ನ್ಯಾಯವಾದಿ ಅನಿಕೇತ್ ನಿಕಮ್ ಅವರು ಬಾಂಬೇ ಹೈಕೋಟಿನಲ್ಲಿ ಹಲವು ಪ್ರಮುಖ ಪ್ರಕರಣಗಳಲ್ಲಿ ವಾದಿಸಿದ್ದಾರೆ. ಅವರು ಇತ್ತೀಚೆಗೆ ಮಹಾರಾಷ್ಟ್ರದ ಸಚಿವ ಮಾಣಿಕ್ ರಾವ್ ಕೊಕಾಟೆ ಅವರ ಪರವಾಗಿಯೂ ಹೈಕೋರ್ಟಿನಲ್ಲಿ ವಾದಿಸಿದ್ದರು.

ಇದಲ್ಲದೆ ಚಿತ್ರನಟಿ ಶಿಲ್ಪಾ ಶೆಟ್ಟಿ, ವಿದ್ಯುತ್ ಜಮ್ಮಾವಲ್ ಮತ್ತು ನಟ ನಾನಾ ಪಾಟೇಕರ್ ಅವರಂತಹ ವ್ಯಕ್ತಿಗಳಲ್ಲದೆ ಅಂಟಿಲಿಯಾ ಸುರಕ್ಷಾ ಪ್ರಕರಣ, ನಾರಾಯಣ ರಾಣೆ, ಆದರ್ಶ್ ಹೌಸಿಂಗ್ ಹಗರಣ ಮತ್ತು ಧನಂಜಯ್ ಮುಂಧೆ ಸಂಬಂಧಿತ ಪ್ರಕರಣಗಳಲ್ಲೂ ಹೈಕೋರ್ಟಿನಲ್ಲಿ ನಿಕಮ್ ವಾದಿಸಿದ್ದಾರೆ.

# ಚಿರಸ್ಮರಣೆ




DOD : 07.03.2024

**ಸರೋಜಿನಿ ಸುಂದರ್ ಶೆಟ್ಟಿ**

**(Daffodils, Bhandup West)**

*You have always been our source of inspiration & guidance.*
*Your Presence will always remain is our hearts and thoughts.*
*May your departed Soul rest in peace.*

**Sundar N. Shetty** (Husband)
**Mahesh S. Shetty** (Son)
**Rashma M. Shetty** (Daughter-in- law)
**Anupama S. Shetty & Amita S. Shetty** (Daughters)
**Sudhakar S. Shetty** (Son-in-law)
**Nisha,Saumya, Srusti, Meha & Risha** (Grand Childrens)



ಅವಿರತ ಪ್ರಯತ್ನದಿಂದ ಮಾಧ್ಯಮ ಸಮೂಹದ ವಟವೃಕ್ಷವನ್ನು ಬೆಳೆಸಿದ ಸ್ಫೂರ್ತಿದಾಯಕ ವ್ಯಕ್ತಿತ್ವ

'ಕರ್ನಾಟಕ ಮಲ್ಲ' ಪತ್ರಿಕಾ ಸಮೂಹದ ಸಂಸ್ಥಾಪಕ

ಗೌರವಾನ್ವಿತ

**ಮುರಳೀಧರ ಅನಂತ ಶಿಂಗೋಟೆ (ಬಾಬಾ)**

ಅವರ ಜಯಂತಿ ಪ್ರಯುಕ್ತ ( ಮಾರ್ಚ್ 7 )

**ನಮನಗಳು...**

— ಕರ್ನಾಟಕ ಮಲ್ಲ ಪರಿವಾರ —

# ರಿಲಯನ್ಸ್ ಪವರ್‌ಗೆ ಸಂಬಂಧಿಸಿದ ಸಂಸ್ಥೆಗಳ ಮೇಲೆ ಇಡಿ ದಾಳಿ ; ನಿರಾಕರಿಸಿದ ಕಂಪನಿ

ಹೊಸದಿಲ್ಲಿ, ಮಾ. 6 - ಉದ್ಯಮಿ ಅನಿಲ್ ಅಂಬಾನಿ ಅವರ ಸಮೂಹ ಕಂಪನಿಯಾದ ರಿಲಯನ್ಸ್ ಪವರ್ ಲಿಮಿಟೆಡ್‌ಗೆ ಸಂಬಂಧಿಸಿದ ಸಂಸ್ಥೆಗಳ ವಿರುದ್ಧದ ತನಿಖೆಯ ಭಾಗವಾಗಿ ಜಾರಿ ನಿರ್ದೇಶನಾಲಯ ಶುಕ್ರವಾರ ಮುಂಬೈ ಮತ್ತು ಹೈದರಾಬಾದ್‌ನ ಅನೇಕ ಸ್ಥಳಗಳಲ್ಲಿ ದಾಳಿ ನಡೆಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಫೆಡರಲ್ ತನಿಖಾ ಸಂಸ್ಥೆ ತನ್ನ ಯಾವುದೇ ಕಚೇರಿ ಅಥವಾ ಆವರಣದ ಮೇಲೆ ದಾಳಿ ನಡೆಸಿದೆ ಎಂಬುದನ್ನು ರಿಲಯನ್ಸ್ ಪವರ್ ನಿರಾಕರಿಸಿದೆ.

ಮುಂಬೈ ಮತ್ತು ಹೈದರಾಬಾದ್‌ನಲ್ಲಿ ಈ ಕಂಪನಿ ಮತ್ತು ಅದರ ಕಾರ್ಯನಿರ್ವಾಹಕರಿಗೆ ಸಂಬಂಧಿಸಿದ ಸುಮಾರು 10-12 ಸ್ಥಳಗಳನ್ನು ಶೋಧಿಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಏಜೆನ್ಸಿಯ ಸುಮಾರು 15 ತಂಡಗಳು ಈ ಕ್ರಮ ಕೈಗೊಳ್ಳುತ್ತಿವೆ ಎಂದು ಅವರು ಹೇಳಿದರು. ರಿಲಯನ್ಸ್ ಪವರ್ ಸ್ಟಾಕ್ ಎಕ್ಸ್‌ಚೇಂಜ್‌ಗಳಿಗೆ ಒದಗಿಸಿದ ಹೇಳಿಕೆಯಲ್ಲಿ ''ತನ್ನ ಅತ್ಯುತ್ತಮ ಜ್ಞಾನದ ಪ್ರಕಾರ, ಕಂಪನಿಯ ಯಾವುದೇ ಕಚೇರಿ ಅಥವಾ ಆವರಣದಲ್ಲಿ ಅಂತಹ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ'' ಎಂದು ತಿಳಿಸಿದೆ.

ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ (ಫೆಮಾ) ಅಡಿಯಲ್ಲಿ ಹಣಕಾಸಿನ ಅಕ್ರಮಗಳ ಜೊತೆಗೆ, ಬ್ಯಾಂಕ್ ವಂಚನೆ ಸಂಬಂಧಿತ ಹಣ ವರ್ಗಾವಣೆ ಪ್ರಕರಣದ ಭಾಗವಾಗಿ ಅನಿಲ್ ಅಂಬಾನಿಗೆ ಸಂಬಂಧಿಸಿದ ಅನೇಕ ಕಂಪನಿಗಳನ್ನು ಇಡಿ ತನಿಖೆ ನಡೆಸುತ್ತಿದೆ.

ಈ ತನಿಖೆಯ ಭಾಗವಾಗಿ 66 ವರ್ಷದ ಅಂಬಾನಿಯನ್ನು ಹಣ ವರ್ಗಾವಣೆ ವಿರೋಧಿ ಕಾನೂನಿನಡಿಯಲ್ಲಿ ಇಡಿ ಎರಡು ಬಾರಿ ಪ್ರಶ್ನಿಸಿದೆ.

ಸುಪ್ರೀಂ ಕೋರ್ಟ್ ನಿರ್ದೇಶನದ ಮೇರೆಗೆ ಅಂಬಾನಿ ಸಮೂಹ ಕಂಪನಿಗಳ ವಿರುದ್ಧದ ಪ್ರಕರಣಗಳ ತನಿಖೆಗಾಗಿ ಇಡಿ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಿದೆ. ಇಡಿ ಸುಪ್ರೀಂ ಕೋರ್ಟ್‌ಗೆ ನೀಡಿದ ಮಾಹಿತಿಯ ಪ್ರಕಾರ, ಬ್ಯಾಂಕ್ ಸಾಲ ವಂಚನೆ ಮತ್ತು ಇತರ ಹಣಕಾಸು ಅಕ್ರಮಗಳ ಆರೋಪಗಳನ್ನು ತನಿಖೆ ಮಾಡಲು ಅನಿಲ್ ಧೀರೂಭಾಯಿ ಅಂಬಾನಿ ಗ್ರೂಪ್ (ಎಡಿಎಜಿ) ವಿರುದ್ಧ ಮೂರು ಹಣ ವರ್ಗಾವಣೆ ಪ್ರಕರಣಗಳನ್ನು ದಾಖಲಿಸಿದೆ.





जालिम लोशन®

www.zalimlotion.in

ಕಜ್ಜಿ, ಗಜಕರ್ಣ ತುರಿಕೆಯಿಂದ ತಕ್ಷಣ ಪರಿಹಾರ

ANIL PUB. 12D/75/4127/09/25/267

For DEALERSHIP at zalimlotion1929@gmail.com

ಓಲ್ಡ್ ಈಸ್ ಗೋಲ್ಡ್

50 ವರ್ಷಗಳ ವಿಶ್ವಾಸ !

ಧೌತಿ-ಯೋಗ®

ಚೂರ್ಣ ಮತ್ತು ಮಾತ್ರೆಗಳು

ರಾತ್ರಿಯಲ್ಲಿ ಒಂದು ಟ್ಯಾಬ್ಲೆಟ್, ಬೆಳಿಗ್ಗೆ ಸರಿ ಮಾಡುತ್ತದೆ !

ಡಾ. ಅಭಿಜಿತ್ 9422011723

## BILLAVA SEVA SANGHA KUNDAPURA (R) MUMBAI

## ಬಿಲ್ಲವ ಸೇವಾ ಸಂಘ ಕುಂದಾಪುರ (ರಿ) ಮುಂಬಯಿ






Admin Office: 101, 9-Mansi, 1st Floor, Mukund Natu Path, Near Gaondevi Maidan, Naupada, Thane (W)- 400602

ಮಹಿಳಾ ಸಂಪದ ಸಮಿತಿಯ ಆಯೋಜನೆಯಲ್ಲಿ

**ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಮತ್ತು ಅರಶಿನ ಕುಂಕುಮ ಕಾರ್ಯಕ್ರಮ**

**ON SUNDAY MARCH 08-03-2026 10.00 AM ONWARDS**

**At: Vasanth Rao Nayak Hall, Above Waman Hari Pethe Sons, Nr. Thane Janata Sahakari Bank, Dada Patilwadi Rd, Nr. Thane Rly. Stn, Naupada Thane (W)**

### ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ

ಬೆಳಿಗ್ಗೆ 10 ಗಂಟೆಗೆ ದೀಪ ಪ್ರಜ್ವಲನೆ, ಸಾಂಸ್ಕೃತಿಕ ಕಾರ್ಯಕ್ರಮ, ಪ್ರತಿಭಾ ಪುರಸ್ಕಾರ ಮತ್ತು ವಿದ್ಯಾರ್ಥಿವೇತನ ವಿತರಣೆ.

ಸಭಾ ಕಾರ್ಯಕ್ರಮ

ಅಧ್ಯಕ್ಷತೆ : ಸಿ.ಎ. ಪೂಜಾರಿ (ಅಧ್ಯಕ್ಷರು, ಬಿಎಸ್ಎಸ್‌ಕೆಎಂ)

ಮುಖ್ಯ ಅತಿಥಿ : ಶ್ರೀಮತಿ ಲಕ್ಷ್ಮೀ ಆರ್. ಪೂಜಾರಿ (ಕವಿ, ಲೇಖಕರು, ನಿರೂಪಕಿ, ಕಲಾವಿದೆ)

ಅತಿಥಿಗಳು : ಶ್ರೀಮತಿ ರಮಾಬಾಯಿ ಆರ್. ಕಾಮತ್ (ಸಂಸ್ಕೃತ ಟೀಚರ್)

ಶ್ರೀಮತಿ ಮೀರಾ ಟಿ. ಶೆಟ್ಟಿ (ಚೆಯರ್‌ಮೆನ್, ಅಜೆಕಾರು ಕಲಾಭಿಮಾನಿ ಬಳಗ ಭಾಂಡುಪ್)

ಡಾ. ಆಶಾ ಎ. ಸೋನಾವಣೆ (ಸ್ಥಾಪಕರು, ಡೈರೆಕ್ಟರ್, ನಿಶಾದ್ ಫೌಂಡೇಶನ್, ಬೇಲಾಪುರ್)

ಶ್ರೀಮತಿ ಪೂರ್ಣಿಮಾ ಆರ್. ಪೂಜಾರಿ (ಯುಟ್ಯೂಬರ್ ಮುಂಬಯಿ- ಕರ್ನಾಟಕ ಚಾನೆಲ್)



ಸನ್ಮಾನಿತರು :

ಶ್ರೀಮತಿ ಸೀತಾ ಗಣಪ ಬಿಲ್ಲವ (ಸಮಾಜದ ಹಿರಿಯ ಸದಸ್ಯರು)

ಶ್ರೀಮತಿ ಸಾವಿತ್ರಿ ಮಾಚ ಪೂಜಾರಿ (ಸಮಾಜದ ಹಿರಿಯ ಸದಸ್ಯರು)



### ಅರಸಿನ ಕುಂಕುಮ ಕಾರ್ಯಕ್ರಮ

ಸಾಂಸ್ಕೃತಿಕ ಕಾರ್ಯಕ್ರಮ ಸಂಘದ ಸದಸ್ಯರಿಂದ ಕುಂದಾಪುರ ಕನ್ನಡ ನಗೆ ನಾಟಕ

**ಬದಿಮನೆ ಗಂಡ್**

ಸಭಾ ಕಾರ್ಯಕ್ರಮ

ಅಧ್ಯಕ್ಷತೆ : ಸಿ.ಎ. ಪೂಜಾರಿ (ಅಧ್ಯಕ್ಷರು, ಬಿಎಸ್ಎಸ್‌ಕೆಎಂ)

ಮುಖ್ಯ ಅತಿಥಿ : ಮಂಜುನಾಥ ಎ. ಬಿಲ್ಲವ (ಗೌ. ಅಧ್ಯಕ್ಷರು, ಬಿಎಸ್ಎಸ್‌ಕೆಎಂ)

ಅತಿಥಿಗಳು : ಪ್ರಕಾಶ್ ಹೆಗ್ಡೆ ಕುಂಠಿನಿ (ಸಂಪಾದಕರು, ಛಾಯಾಕಿರಣ ಪತ್ರಿಕೆ)

ಶ್ರೀಮತಿ ಶುಭದ ಎನ್. ಬಿಲ್ಲವ (ಡೈರೆಕ್ಟರ್, ರೆಡಿಕ್ಸ್ ಕಾರ್ಪೋರೇಟ್ ಸೊಲ್ಯೂಶನ್ ಪ್ರೈ. ಲಿ.)


ಶ್ರೀಮತಿ ಕವಿತಾ ಅಶೋಕ್ ಪೂಜಾರಿ (ಬಿಸಿನೆಸ್‌ವುಮನ್, ಸಮಾಜ ಸೇವಕಿ)

ಶ್ರೀಮತಿ ಅಶ್ವಿನಿ ಎ. ಮಟೇಕರ್ (ಕಾರ್ಪೋರೇಟರ್, ಪೊವಾಯಿ)

ಶ್ರೀಮತಿ ಸುನೀತಾ ಎಸ್. ಬೆಲ್‌ವಟ್‌ಕರ್ (ಮುಖ್ಯೋಪಾಧ್ಯಾಯರು, ಶ್ರೀ ಚೈತನ್ಯ ಟೆಕ್ನೋ ಸ್ಕೂಲ್ ಬದ್ಲಾಪುರ)

ಸ್ನಾತಕೋತ್ತರ ಪದವಿ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನ


Kshitija S. Billava


Rakshita G. Poojari


Suma M. Poojari


Sushmit S. Poojary

**All Are Cordially Invited**

ಸುಶೀಲಾ ಎಸ್. ಪೂಜಾರಿ (ಕಾರ್ಯಾಧ್ಯಕ್ಷೆ) ಶಾರದಾ ಬಿ. ಪೂಜಾರಿ (ಕಾರ್ಯದರ್ಶಿ) ಬೇಬಿ ರಂಗ ಪೂಜಾರಿ (ಉಸ್ತುವಾರಿ ಮಹಿಳಾ ಸಂಪದ)

**BILLAVA SEVA SANGHA KUNDAPURA (R) MUMBAI.**

**Office Bearers of the Managing Committee, Yuva Sampada, Mahila Sampada, Dharmika Samiti & All Members.**



## VIJAYA COLLEGE MULKI GLOBAL ALUMNI ASSOCIATION, MUMBAI

The President, Office Bearers and Managing Committee Members Cordially Invite you with your family to the

## ANNUAL GET TOGETHER - 2026

**On Saturday, 07th March, 2026 at 5.00 p.m.**

**at Concord Hall, 5th Floor, Hotel Peninsula Grand, Near Saki Naka Metro Station, Andheri East, Mumbai**

**Inauguration**


Mr. Anand Shetty


Mr. Vasudeva M. Sallan


Dr. P.V. Shetty


Mr. Suhas Hegde


Prof. Venkatesha Bhat

| | |
|---|---|
| Inauguration | : Mr. Anand Shetty, Hon. President |
| President | : Mr. Vasudeva M. Salian, President |
| Chief Guest | : Dr. P. V Shetty, Ex. Jt. Secretary, Mumbai Cricket Association (MCA) Director, Payyade Hotels Pvt. Ltd. |
| Guest of Honour | : Mr. Suhas Hegde Nandalike, Chairman, Governing Council, Vijaya College, Mulki |
| | : Prof. Venkatesha Bhat, Principal, Vijaya College, Mulki |
| Guru-Vandana | : Prof. Parvathi Amma, Retd. Prof. in English, Vijaya College, Mulki |
| | : Prof. G. S Hegde, Retd. Prof. in Accounts and Audit, Vijaya College, Mulki |

**: Felicitation Achievers from our Fraternity :**

| | | |
|---|---|---|
| CA. Sadashiva Shetty | Mr. Rajkumar Karnad | Mr. Y. T Shetty |
| Kabetiguttu-Mulki | Rtd, AGM, | Renowned Writer & |
| Chartered Accountant | HDFC Bank | Reporter |

**Invitees are Welcome**


Adv. Shekhar S. Bhandary
Vice President


Bhaskar B. Shetty
Hon. Secretary


CA. Rohithaksha Devadiga
Treasurer

# ಇರಾನ್ ಮೇಲೆ ಇಸ್ರೇಲಿನಿಂದ ಒಂದೇ ಸಮನೆ ಬಾಂಬೆಸೆತ : ಇಸ್ರೇಲ್ , ಕೊಲ್ಲಿ ರಾಷ್ಟ್ರಗಳ ಮೇಲೆ ಇರಾನ್ ಪ್ರತಿದಾಳಿ





**ಟೆಹರಾನ್/ಬೆರೂತ್/ದುಬಾಯಿ, ಮಾ.6- ಇಸ್ರೇಲ್ ಯುದ್ಧ ವಿಮಾನಗಳು ಶುಕ್ರವಾರ ಬೆರೂತ್ ಮತ್ತು ಟೆಹರಾನ್ ಮೇಲೆ ಒಂದೇ ಸಮನೇ ಬಾಂಬುಗಳನ್ನು ಎಸೆದರೆ ಅದಕ್ಕೆ ಪ್ರತೀಕಾರವಾಗಿ ಇರಾನ್ ಮಿಲಿಟರಿ ಇಸ್ರೇಲ್ ಮತ್ತು ಗಲ್ಫ್ ರಾಷ್ಟ್ರಗಳಲ್ಲಿನ ಅಮೆರಿಕದ ಸೇನಾ ನೆಲೆಗಳು ಮತ್ತು ರಾಯಭಾರಿ ಕಚೇರಿಗಳ ಮೇಲೆ ಮತ್ತೊಂದು ಸುತ್ತಿನ ದಾಳಿ ನಡೆಸಿದೆ.**

ಅಮೆರಿಕದ ಅಧ್ಯಕ್ಷ ಟ್ರಂಪ್ ಅವರು ಇರಾನ್ ಜತೆಗೆ ಯಾವುದೇ ಶಾಂತಿ ಮಾತುಕತೆ ಇಲ್ಲ ಎಂದು ಇಂದು ಸ್ಪಷ್ಟಪಡಿಸುವ ಮೂಲಕ 8ನೇ ದಿನಕ್ಕೆ ತಲುಪುತ್ತಿರುವ ಕೊಲ್ಲಿ ರಾಷ್ಟ್ರಗಳಲ್ಲಿ ನಡೆಯುತ್ತಿರುವ ಯುದ್ಧ ನಿಲ್ಲುವ ಸೂಚನೆಯಿಲ್ಲ.

ಇರಾನ್ 'ಬೇಷರತ್ ಶರಣಾಗಬೇಕು' ಎಂದು ಎಚ್ಚರಿಕೆ ನೀಡಿರುವ ಟ್ರಂಪ್ , ಇರಾನ್‌ನಲ್ಲಿ ಹೊಸ ಸರಕಾರ ರಚನೆ ಮಾಡುವುದೇ ಅಮೆರಿಕದ ಮತ್ತು ಇಸ್ರೇಲ್ ಗುರಿಯಾಗಿದ್ದು, ಅಲ್ಲಿ ಯಾವುದೇ ಸರ್ವೋಚ್ಚ ನಾಯಕ ಮತ್ತೆ ಆಯ್ಕೆಯಾಗಲು ಬಿಡುವುದಿಲ್ಲ ಎಂದು ಹೇಳಿದ್ದಾರೆ.

2024ರ ಯುದ್ಧ ವಿಮಾನದ ಬಳಿಕ ಶುಕ್ರವಾರ ಲೆಬನಾನ್ ಮೇಲೆ ಇಸ್ರೇಲ್ ಅತೀ ಭೀಕರ ಬಾಂಬು ದಾಳಿ ನಡೆಸಿದೆ. ಇಸ್ರೇಲ್ ಮೇಲೆ ಇರಾನ್ ಬೆಂಬಲಿತ ಹೆಜ್ಬುಲ್ಲಾಗಳು 2 ದಿನಗಳ ಹಿಂದೆ ರಾಕೆಟ್ ದಾಳಿ ನಡೆಸಿದ್ದು, ಅದಕ್ಕೆ ಪ್ರತೀಕಾರವಾಗಿ ಇಂದು ಇಸ್ರೇಲ್ ಮಿಲಿಟರಿ ವಿಮಾನಗಳು ಲೆಬನಾನ್ ದಕ್ಷಿಣ ಮತ್ತು ಬೆರೂತ್ ಉಪನಗರಗಳ ಮೇಲೆ ಬಾಂಬು ದಾಳಿ ನಡೆಸಿವೆ.

ಗಡಿಯಿಂದ ಜನರು ತಕ್ಷಣವೇ ತೆರವು ಮಾಡುವಂತೆ ಇಸ್ರೇಲ್ ನೀಡಿದ್ದ ಎಚ್ಚರಿಕೆಯನ್ನು ಅನುಸರಿಸಿ ಬೆರೂತ್ ಉಪನಗರಗಳು ಮತ್ತು ದಕ್ಷಿಣ ಲೆಬನಾನ್‌ನಿಂದ ರಕ್ಷಣೆಗಾಗಿ ಜನರು ಓಡಿ ಹೋಗುತ್ತಿರುವ ದೃಶ್ಯಗಳು ಕಂಡುಬಂದಿವೆ.

ಹೊರ್ಮುಜ್ ಜಲಸಂಧಿಯಲ್ಲಿ ಹಡಗುಗಳ ಸಂಚಾರಕ್ಕೆ ಇರಾನ್ ನಿಷೇಧ ವಿಧಿಸಿರುವುದರಿಂದ ತೈಲ ಹೊತ್ತ ಹಡಗುಗಳ ಸಂಚಾರ ಸ್ಥಗಿತಗೊಂಡಿದ್ದು, ವಿಶ್ವದೆಲ್ಲೆಡೆ ತೈಲ ಕೊರತೆಯ ಆತಂಕ ಉಂಟಾಗಿದೆ.

ಇಂದು ಇರಾನಿನ ಡ್ರೋನ್ ಹೊತ್ತ ನೌಕೆಯೊಂದನ್ನು ನಾಶಪಡಿಸಲಾಗಿದೆ ಎಂದು ಅಮೆರಿಕ ಹೇಳಿಕೊಂಡಿದೆ. ಅಮೆರಿಕ ಮತ್ತು ಇಸ್ರೇಲ್ ಮಿಲಿಟರಿಗಳು ಒಂದೇ ಸಮನೇ ಬಾಂಬು ದಾಳಿ ನಡೆಸುತ್ತಿವೆ. ಇರಾನಿನ ಮಿಲಿಟರಿ ನೆಲೆಗಳು , ನಾಯಕರ ನೆಲೆಗಳು ಮತ್ತು ಪರಮಾಣು ಕೇಂದ್ರಗಳನ್ನು ಗುರಿಯಾಗಿಟ್ಟು ದಾಳಿ ನಡೆಸುತ್ತಿವೆ.

ಇರಾನ್ ಶರಣಾಗತವಾಗುವ ತನಕ ನಮ್ಮ ದಾಳಿ ಮುಂದುವರಿಯಲಿವೆ ಎಂದು ಶುಕ್ರವಾರ ಸಾಮಾಜಿಕ ಮಾಧ್ಯಮದಲ್ಲಿ ಹೇಳಿರುವ ಅಮೆರಿಕದ ಅಧ್ಯಕ್ಷ ಟ್ರಂಪ್ ಅವರು, ಇರಾನ್ ನಮ್ಮ ವಶವಾದ ಬಳಿಕ ನಾವು ಒಪ್ಪಿಗೆಯಾಗುವ ನಾಯಕರೊಬ್ಬರನ್ನು ಆಯ್ಕೆ ಮಾಡುತ್ತೇವೆ ಮತ್ತು ನಾಶದಿಂದ ಇರಾನ್‌ನ್ನು ಮರು ನಿರ್ಮಿಸಲು ನಮ್ಮೆಲ್ಲ ಮಿತ್ರ ರಾಷ್ಟ್ರಗಳು ವಿಶ್ರಾಂತಿ ಪಡೆಯದೇ ಕೆಲಸ ಮಾಡುತ್ತೇವೆ ಎಂದು ಹೇಳಿದ್ದಾರೆ.

ಕೊಲ್ಲಿ ರಾಷ್ಟ್ರಗಳಲ್ಲಿ ನಡೆಯುತ್ತಿರುವ ಯುದ್ಧ ಜಗತ್ತಿನೆಲ್ಲೆಡೆ ತೈಲ ಅಭಾವ ಸೃಷ್ಟಿಸಿದ್ದು, ಬೆಲೆ ಏರಿಕೆಗೆ ಕಾರಣವಾಗಿದೆ . ಯುದ್ಧ ತಕ್ಷಣ ನಿಲ್ಲದೇ ಇದ್ದರೆ ವಿಶ್ವದ ಆರ್ಥಿಕತೆ ನೆಲಕಚ್ಚಲಿದೆ ಎಂದು ಕತಾರ್ ಇಂಧನ ಮಂತ್ರಿ ಎಚ್ಚರಿಸಿದ್ದಾರೆ. ಗಲ್ಫ್ ರಾಷ್ಟ್ರಗಳು ತೈಲ ರಫ್ತು ಮಾಡುವುದನ್ನು ನಿಲ್ಲಿಸಿರುವುದರಿಂದಾಗಿ ಬ್ಯಾರೆಲ್ ಒಂದಕ್ಕೆ ಕಚ್ಚಾ ತೈಲ ಬೆಲೆ 150 ಅಮೆರಿಕನ್ ಡಾಲರ್‌ಗೆ ತಲುಪಬಹುದು ಎಂದು ಕತಾರ್ ಇಂಧನ ಸಚಿವ ಸಾದ್-ಅಲ್- ಕೌಬಿ ಹೇಳಿದ್ದಾರೆ.

ಯುದ್ಧ ತಕ್ಷಣ ನಿಂತರೂ ಇರಾನಿನ ಡ್ರೋನ್‌ಗಳು ಕತಾರಿನ ಅತೀ ದೊಡ್ಡ ಎಲ್‌ಎನ್‌ಜಿ ಸ್ಥಾವರಕ್ಕೆ ಹಾನಿ ಮಾಡಿರುವುದರಿಂದ ಸಾಮಾನ್ಯ ರೀತಿಯಲ್ಲಿ ರಫ್ತು ಆರಂಭವಾಗಬೇಕಾದರೆ ವಾರಗಳಿಂದ ತಿಂಗಳುಗಳೇ ಬೇಕಾಗಬಹುದು ಎಂದು ಅವರು ತಿಳಿಸಿದ್ದಾರೆ.

ಇರಾನಿನ ಕೆರ್ಮಾನ್ ಶಾಹ ನಗರದ ಸುತ್ತ ಭಾರೀ ಸ್ಫೋಟಗಳು ನಡೆದಿವೆ ಎಂದು ಇತರು ವರದಿ ಮಾಡಿದ್ದು, ಆ ಪ್ರದೇಶದಲ್ಲಿ ಇರಾನಿನ ಹಲವು ಕ್ಷಿಪಣಿ ನೆಲೆಗಳಿವೆ . ಇಸ್ರೇಲ್ ಇರಾನಿನ ಪ್ರಮುಖ ಕ್ರೀಡಾ ಸಂಕುಲವೊಂದು ಇಸ್ರೇಲ್ ಬಾಂಬು ದಾಳಿಗೆ ನೆಲಸಮವಾಗಿದೆ ಎಂದು ವರದಿಗಳು ತಿಳಿಸಿವೆ.

ಇರಾನ್ ಕೂಡ ಇಂದು ಒಂದೇ ಸಮನೇ ಇಸ್ರೇಲ್ ಮೇಲೆ ಕ್ಷಿಪಣಿ ದಾಳಿ ಮುಂದುವರಿಸಿದೆ. ಇದಲ್ಲದೆ ಕುವೈಟ್ , ಕತಾರ್, ಸೌದಿ ಅರೇಬಿಯಾ, ಬಹ್ರೈನ್, ಯುಎಇ ಸಹಿತ ಗಲ್ಫ್ ರಾಷ್ಟ್ರಗಳಲ್ಲಿ ಇರಾನ್ ಅಮೆರಿಕದ ಮಿಲಿಟರಿ ನೆಲೆಗಳು ಇರುವ ಕೇಂದ್ರಗಳ ಮೇಲೆ ಕ್ಷಿಪಣಿ ಮತ್ತು ಡ್ರೋನ್ ದಾಳಿ ನಡೆಸುತ್ತಿದೆ.

**ಭಾರತದ 278 ವಿಮಾನ ರದ್ದು :**

ಕೊಲ್ಲಿ ರಾಷ್ಟ್ರಗಳಲ್ಲಿ ನಡೆಯುತ್ತಿರುವ ಭೀಕರ ಯುದ್ಧ ಹಿನ್ನೆಲೆಯಲ್ಲಿ ಶುಕ್ರವಾರ 278 ಅಂತಾರಾಷ್ಟ್ರೀಯ ವಿಮಾನಗಳು ಭಾರತದಿಂದ ರದ್ದಾಗಿರುವುದಾಗಿ ಅಧಿಕೃತವಾಗಿ ಸರಕಾರ ಹೇಳಿದೆ.

ಮಧ್ಯ ಪ್ರಾಚ್ಯಕ್ಕೆ ತೆರಳುವ 278 ವಿಮಾನಗಳು ಇಂದು ರದ್ದಾಗಿದ್ದು, 98 ವಿಮಾನಗಳನ್ನು ಪುನರಾರಂಭಿಸಲು ವ್ಯವಸ್ಥೆ ಮಾಡಲಾಗಿದೆ ಎಂದು ಸರಕಾರ ತಿಳಿಸಿದೆ.

ಮುಂಬಯಿ, ದಿಲ್ಲಿ , ಬೆಂಗಳೂರು, ಕೊಲ್ಕತ್ತಾ ವಿಮಾನ ನಿಲ್ದಾಣಗಳಿಂದ ಇಂದು 140ಕ್ಕೂ ಹೆಚ್ಚು ವಿಮಾನಗಳು ಮಧ್ಯಪ್ರಾಚ್ಯಕ್ಕೆ ತೆರಳದೇ ರದ್ದಾಗಿವೆ ಎಂದು ಸರಕಾರ ಹೇಳಿದೆ. ಮುಂಬಯಿ ವಿಮಾನ ನಿಲ್ದಾಣದಿಂದ ತೆರಳ ಬೇಕಾಗಿದ್ದ 39 ಮತ್ತು ಆಗಮನವಾಗ ಬೇಕಾದ 34 ವಿಮಾನಗಳು ರದ್ದಾಗಿವೆ ಎಂದು ಮುಂಬಯಿ ವಿಮಾನ ನಿಲ್ದಾಣ ಹೇಳಿದೆ.

ಇರಾನ್ ನೌಕಾಪಡೆ ಹಡಗಿನ ಮೇಲೆ ದಾಳಿ ನಡೆಸಿ ಅದನ್ನು ಮುಳುಗಿಸಲು ಭಾರತ ಅಮೆರಿಕಕ್ಕೆ ನೀಡಿದ್ದ ಗುಪ್ತಚರ ಮಾಹಿತಿ ಕಾರಣ ಎಂದು ವದಂತಿ ಹರಡಿದ್ದನ್ನು ಭಾರತ ಅದನ್ನು ನಿರಾಧಾರ ಮತ್ತು ಸುಳ್ಳು ಎಂದು ಸ್ಪಷ್ಟಪಡಿಸಿದೆ. ಅಮೆರಿಕಕ್ಕೆ ಭಾರತ ಯಾವುದೇ ಮಾಹಿತಿ ನೀಡಿಲ್ಲ , ಅದೆಲ್ಲ ಸುಳ್ಳು ಎಂದು ಮೂಲಗಳು ತಿಳಿಸಿವೆ.

# ಮತಾಂತರ ವಿರೋಧಿ ಕರಡು ಮಸೂದೆಗೆ ಅನುಮೋದನೆ ನೀಡಿದ ಮಹಾರಾಷ್ಟ್ರ ಸಚಿವ ಸಂಪುಟ

**60 ದಿನಗಳ ಮೊದಲು ಸೂಚನೆ; ಸಕ್ಷಮ ಪ್ರಾಧಿಕಾರದ ಅನುಮತಿ ಕಡ್ಡಾಯ, 25 ದಿನಗಳ ಒಳಗೆ ನೋಂದಣಿ**

ಮುಂಬಯಿ, ಮಾ. 6 - ಮಹಾರಾಷ್ಟ್ರ ಸಚಿವ ಸಂಪುಟವು ಮತಾಂತರ ವಿರೋಧಿ ಕರಡು ಮಸೂದೆಗೆ ಅನುಮೋದನೆ ನೀಡಿದೆ, ಇದು ಬೇರೆ ಧರ್ಮಕ್ಕೆ ಮತಾಂತರಗೊಳ್ಳುವ ಮೊದಲು ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆಯುವುದು ಕಡ್ಡಾಯಗೊಳಿಸುತ್ತದೆ. ಮತಾಂತರಗೊಳ್ಳಲು ಬಯಸುವ ವ್ಯಕ್ತಿಯು ಮತಾಂತರಗೊಳ್ಳುವ ಮೊದಲು 60 ದಿನಗಳ ಸೂಚನೆ ನೀಡಬೇಕು ಮತ್ತು ಗೊತ್ತುಪಡಿಸಿದ ಪ್ರಾಧಿಕಾರದಿಂದ ಅನುಮತಿ ಪಡೆಯಬೇಕು ಎಂದು ಅಧಿಕಾರಿಯೊಬ್ಬರು ಗುರುವಾರ ಪ್ರಸ್ತಾವಿತ ಶಾಸನದ ವಿವರಗಳನ್ನು ಹಂಚಿಕೊಂಡರು. ಇದಲ್ಲದೆ, ಮತಾಂತರವನ್ನು 25 ದಿನಗಳ ಒಳಗೆ ಪ್ರಾಧಿಕಾರದಲ್ಲಿ ನೋಂದಾಯಿಸಬೇಕು, ಇಲ್ಲದಿದ್ದರೆ ಅದನ್ನು ಅಮಾನ್ಯವೆಂದು ಪರಿಗಣಿಸಲಾಗುತ್ತದೆ ಎಂದು ಅವರು ಹೇಳಿದರು.

ಮತಾಂತರಗೊಳ್ಳಲು ಬಯಸುವ ವ್ಯಕ್ತಿಯ ರಕ್ತಸಂಬಂಧಿಯು ಅದು ಕಾನೂನುಬಾಹಿರವಾಗಿದೆ ಎಂದು ದೂರು ದಾಖಲಿಸಿದರೆ, ಪೊಲೀಸರು ಪ್ರಥಮ ಮಾಹಿತಿ ವರದಿಯನ್ನು ದಾಖಲಿಸುತ್ತಾರೆ ಮತ್ತು ಮಸೂದೆಯ ಪ್ರಕಾರ ತನಿಖೆ ನಡೆಸುತ್ತಾರೆ.

ಧಾರ್ಮಿಕ ಸ್ವಾತಂತ್ರ್ಯದ ಹಕ್ಕಿನಲ್ಲಿ ಬಲವಂತ, ವಂಚನೆ ಅಥವಾ ಆಮಿಷದಿಂದ ಮತಾಂತರಗೊಳ್ಳುವ ಹಕ್ಕು ಸೇರಿಲ್ಲ ಆದರೆ ಅಂತಹ ಕಾನೂನುಬಾಹಿರ ಮತಾಂತರಗಳಿಂದ ರಕ್ಷಿಸಿಕೊಳ್ಳುವ ಹಕ್ಕನ್ನು ಒಳಗೊಂಡಿದೆ ಎಂದು ಮಸೂದೆ ಹೇಳಿದೆ.

ಮಹಾರಾಷ್ಟ್ರ ಸಚಿವ ಮತ್ತು ಬಿಜೆಪಿ ನಾಯಕ ನಿತೇಶ್ ರಾಣೆ ಅವರು, ಸಂಪುಟವು ಬಲವಾದ ಮತಾಂತರ ವಿರೋಧಿ ಕಾನೂನನ್ನು ಅಂಗೀಕರಿಸಿದೆ ಮತ್ತು ವಿಧಾನಸಭಾ ಚುನಾವಣೆಗೆ ಮುನ್ನ ಪಕ್ಷವು ನೀಡಿದ ಭರವಸೆಯನ್ನು ಈಡೇರಿಸಿದೆ ಎಂದು ಹೇಳಿದರು.

ವಿಧಾನ ಭವನದ ಆವರಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ರಾಣೆ, ''ನಾವು ಅಧಿಕಾರಕ್ಕೆ ಬಂದ ನಂತರ ಮಹಾರಾಷ್ಟ್ರದಲ್ಲಿ ಬಲವಾದ ಮತಾಂತರ ವಿರೋಧಿ ಕಾನೂನನ್ನು ತರುತ್ತೇವೆ ಎಂದು ವಿಧಾನಸಭಾ ಚುನಾವಣೆಯ ಸಮಯದಲ್ಲಿ ದೃಢವಾಗಿ ಹೇಳಿದ್ದೆವು, ಇದನ್ನು ಲವ್ ಜಿಹಾದ್ ವಿರುದ್ಧದ ಕಾನೂನು ಎಂದೂ ಕರೆಯಲಾಗುತ್ತದೆ. ಇಂದು, ಇಷ್ಟು ಬಲವಾದ ಮತಾಂತರ ವಿರೋಧಿ ಕಾನೂನನ್ನು ಸಂಪುಟವು ಅನುಮೋದಿಸಿರುವುದರಿಂದ ನನಗೆ ಅತ್ಯಂತ ತೃಪ್ತಿಯಾಗಿದೆ'' ಎಂದು ಹೇಳಿದರು. ಈ ನಿರ್ಧಾರಕ್ಕಾಗಿ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಮತ್ತು ಉಪಮುಖ್ಯಮಂತ್ರಿಗಳಾದ ಏಕನಾಥ್ ಶಿಂಧೆ ಮತ್ತು ಸುನೇತ್ರಾ ಪವಾರ್ ಅವರಿಗೆ ಧನ್ಯವಾದ ಹೇಳಿದ ರಾಣೆ, ಪ್ರಸ್ತಾವಿತ 'ಧರ್ಮ ಸ್ವಾತಂತ್ರ್ಯ ಅಧಿನಿಯಮ 2026' ಅಡಿಯಲ್ಲಿ ಮಸೂದೆಯನ್ನು ಅಂಗೀಕರಿಸಲಾಗಿದೆ ಎಂದು ಹೇಳಿದರು.

ಶೀಘ್ರದಲ್ಲೇ ಸರ್ಕಾರಿ ನಿರ್ಣಯ (ಜಿಆರ್) ಹೊರಡಿಸಲಾಗುವುದು ಎಂದು ಅವರು ಹೇಳಿದರು. ರಾಜ್ಯದಲ್ಲಿ ಇಂತಹ ಕಾನೂನನ್ನು ಜಾರಿಗೆ ತರಬೇಕೆಂದು ಒತ್ತಾಯಿಸಿ ಹಲವಾರು ಕಾರ್ಯಕರ್ತರು ಮತ್ತು ಹಿಂದುತ್ವ ಸಂಘಟನೆಗಳು ಈ ಹಿಂದೆ ಚಳುವಳಿಗಳು ಮತ್ತು ಆಂದೋಲನಗಳನ್ನು ನಡೆಸಿದ್ದವು. ಮುಂಬರುವ ಅವಧಿಯಲ್ಲಿ ಈ ಶಾಸನವನ್ನು ವಿಧಾನಸಭೆಯಲ್ಲಿ ಪರಿಚಯಿಸಿ ಅಂಗೀಕರಿಸುವ ನಿರೀಕ್ಷೆಯಿದೆ ಎಂದು ಅವರು ಹೇಳಿದರು.

# ಅಸ್ಸಾಂ : ಐಎಎಫ್ ಜೆಟ್ ಪತನ; ಪೈಲೆಟ್‌ಗಳಿಬ್ಬರು ಮೃತ್ಯು 'ಆಪರೇಷನ್ ಸಿಂದೂರ'ದಲ್ಲಿ ಭಾಗಿಯಾಗಿದ್ದ ನಾಗಪುರದ ಯೋಧ ಬಲಿ

ಹೊಸದಿಲ್ಲಿ / ನಾಗಪುರ, ಮಾ. 6- ಅಸ್ಸಾಮಿನ ಕರ್ಬಿ ಅಂಗ್ಲಾಂಗ್ ಜಿಲ್ಲೆಯಲ್ಲಿ ಗುರುವಾರ ಭಾರತೀಯ ವಾಯು ಪಡೆಯ ಎಸ್‌ಯು-30 ಎಂಕೆಐ ಯುದ್ಧ ಜೆಟ್ ವಿಮಾನ ಪತನಗೊಂಡು ಇಬ್ಬರು ಪೈಲಟ್‌ಗಳು ಮೃತಪಟ್ಟಿರುವುದಾಗಿ ಶುಕ್ರವಾರ ಭಾರತೀಯ ವಾಯುಪಡೆ (ಐಎಎಫ್) ದೃಢಪಡಿಸಿದೆ.

ಪೈಲಟ್‌ಗಳಾದ ಸ್ಕ್ವಾಡ್ರನ್ ಲೀಡರ್ ಅನುಜ್ ಮತ್ತು ಮಹಾರಾಷ್ಟ್ರದ ನಾಗ್ಪುರದ ನಿವಾಸಿ ಫ್ಲೈಟ್ ಲೆಫ್ಟಿನೆಂಟ್ ಪೂರ್ವೇಶ್ ದುರಾಗ್ಕರ್ ಮೃತಪಟ್ಟಿರುವುದಾಗಿ ಐಎಎಫ್ ಪ್ರಕಟಿಸಿದೆ. ಗುರುವಾರ ರಾತ್ರಿ ರಷ್ಯಾ ನಿರ್ಮಿತ ಯುದ್ಧ ಜೆಟ್ ಅಸ್ಸಾಮಿನ ದುರ್ಗಮ ಪ್ರದೇಶದಲ್ಲಿ ನಾಪತ್ತೆಯಾಗಿತ್ತು.

ಅಸ್ಸಾಮಿನ ಜೊರ್ಹಾಟ್ ವಾಯು ನೆಲೆಯಿಂದ ತರಬೇತಿಯಾರ್ಥ ಹೊರಟಿದ್ದ ವಿಮಾನ ಬಳಿಕ ರ‍್ಯಾಡಾರ್‌ನಿಂದ ನಾಪತ್ತೆಯಾಗಿತ್ತು. ಕಳೆದ ರಾತ್ರಿಯೇ ಶೋಧ ಕಾರ್ಯವನ್ನು ವಾಯು ಪಡೆ ಆರಂಭಿಸಿತ್ತು. ಕರ್ಬಿ ಅಂಗ್ಲಾಂಗ್ ಜಿಲ್ಲೆಯಲ್ಲಿ ವಿಮಾನವೊಂದು ಪತನಗೊಂಡಿದೆ ಎಂದು ಗ್ರಾಮಸ್ಥರು ಪೊಲೀಸರಿಗೆ ಮಾಹಿತಿ ನೀಡಿದ್ದರು.

ಸ್ಕ್ವಾಡ್ರನ್ ಲೀಡರ್ ಅನುಜ್ ಮತ್ತು ಫ್ಲೈಟ್ ಲೆಫ್ಟಿನೆಂಟ್ ಪೂರ್ವೇಶ್ ದುರಾಗ್ಕರ್ ಯುದ್ಧ ಜೆಟ್ ವಿಮಾನ ಪತನದಲ್ಲಿ ಗಂಭೀರ ಗಾಯಗೊಂಡು ಮೃತಪಟ್ಟಿದ್ದಾರೆಂದು ಐಎಎಫ್ ಇಂದು ಸಂಕ್ಷಿಪ್ತ ಹೇಳಿಕೆಯಲ್ಲಿ ತಿಳಿಸಿದೆ. ಗುರುವಾರ ರಾತ್ರಿ ಗಂಟೆ 7.42ರ ವೇಳೆಗೆ ವಿಮಾನದ ಸಂಪರ್ಕ ಕಡಿದು ಹೋಗಿತ್ತು ಎಂದು ಅಧಿಕಾರಿಗಳು ಹೇಳಿದ್ದಾರೆ.

ಶುಕ್ರವಾರ ಮುಂಜಾವ ಗಂಟೆ 1ರ ವೇಳೆಗೆ ಎಸ್‌ಯು-30 ಎಂಕೆಐ ಸಮರ ವಿಮಾನ ಪತನಗೊಂಡಿದೆ ಎಂದು ಐಎಎಫ್ ದೃಢಪಡಿಸಿತ್ತು.

ರಷ್ಯಾದ ಸುಖೋಯಿ ವಿಮಾನ ತಯಾರಿ ಕಾರ್ಖಾನೆ ಅಭಿವೃದ್ಧಿ ಪಡಿಸಿರುವ ಎರಡು ಸೀಟಿನ ದೂರಗಾಹಿ ಯುದ್ಧ ವಿಮಾನ ಇದಾಗಿದೆ. ಪ್ರಸಕ್ತ ಹಿಂದೂಸ್ಥಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ಈ ಯುದ್ಧ ವಿಮಾನವನ್ನು ಭಾರತೀಯ ವಾಯು ಪಡೆಗಾಗಿ ನಿರ್ಮಿಸುತ್ತಿದೆ. ಭಾರತೀಯ ವಾಯು ಪಡೆಯಲ್ಲಿ 200ಕ್ಕೂ ಹೆಚ್ಚು ಎಸ್‌ಯು-30 ಎಂಕೆಐ ಜೆಟ್‌ಗಳಿವೆ.

**'ಆಪರೇಷನ್ ಸಿಂದೂರ'ದಲ್ಲಿ ಭಾಗಿಯಾಗಿದ್ದ ಪೂರ್ವೇಶ್**

ಅಸ್ಸಾಮಿನಲ್ಲಿ ಯುದ್ಧ ಜೆಟ್ ವಿಮಾನ ಪತನದಲ್ಲಿ ಮೃತಪಟ್ಟ ಪೈಲಟ್ ಫ್ಲೈಟ್ ಲೆಫ್ಟಿನೆಂಟ್ ಪೂರ್ವೇಶ್ ದುರಾಗ್ಕರ್, 10 ದಿನಗಳ ಹಿಂದೆ ಮನೆಯಲ್ಲಿ ನಡೆದ ಕುಟುಂಬದ ಕಾರ್ಯಕ್ರಮವೊಂದಕ್ಕೆ ಬಂದಿದ್ದು, ಬುಧವಾರ ಮೊಬೈಲ್‌ನಲ್ಲಿ ಮಾತನಾಡಿದ್ದಾಗಿ ಅವರ ತಂದೆ ರವೀಂದ್ರ ದುರಾಗ್ಕರ್ ನಾಗಪುರದಲ್ಲಿಂದು ತಿಳಿಸಿದ್ದಾರೆ.

ನಾಗಪುರದ ನವ ಸುಬೇದಾರ್ ಲೇಔಟ್‌ನಲ್ಲಿ ವಾಸಿಸುತ್ತಿರುವ ನಿವೃತ್ತ ರೈಲ್ವೇ ನೌಕರರಾದ ರವೀಂದ್ರ ಅವರನ್ನು ಸಂತೈಸಲು ಐಎಎಫ್ ಅಧಿಕಾರಿಗಳು ಸತತ ಪ್ರಯತ್ನ ನಡೆಸುತ್ತಿದ್ದಾರೆ. ಮಗನ ಅಕಾಲಿಕ ದುರ್ಮರಣದಿಂದ ತೀವ್ರ ಆಘಾತಗೊಂಡಿರುವ ರವೀಂದ್ರ ಅವರು ಯುದ್ಧ ವಿಮಾನವನ್ನು ಹಾರಿಸುತ್ತಿದ್ದ ಮಗನ ಬಗ್ಗೆ ಹೆಮ್ಮೆ ಪಟ್ಟಿದ್ದಾರಲ್ಲದೆ, ಪೂರ್ವೇಶ್ 'ಆಪರೇಷನ್ ಸಿಂದೂರ'ದಲ್ಲಿ ಭಾಗಿಯಾಗಿದ್ದು ದೇಶದ ರಕ್ಷಣೆಗೆ ಆತ ಮುಡಿಪಾಗಿದ್ದ ಎಂದು ಕಣ್ಣೀರಿಡುತ್ತಾ ಹೇಳಿದ್ದಾರೆ.

ಬುಧವಾರ ನಾವು ಅವನ ಜತೆಗೆ ಮಾತನಾಡಿದ್ದೆವು. ಅವನ ಗ್ರೂಪ್ ಕ್ಯಾಪ್ಟನ್ ನಮ್ಮ ಜತೆ ಸಂಪರ್ಕ ಹೊಂದಿದ್ದು ದುರಂತ ಬಗ್ಗೆ ತಿಳಿಸಿದ್ದಾರೆ ಎಂದು ಅಳುತ್ತಾ ಅವರು ತಿಳಿಸಿದ್ದಾರೆ. ಪೂರ್ವೇಶ್ ದುರಾಗ್ಕರ್ (28) ಕಳೆದ ವರ್ಷದ ಪಹಲ್ಗಾಮ್ ಭಯೋತ್ಪಾದಕ ದಾಳಿ ಬಳಿಕ ಭಾರತದ ಮಿಲಿಟರಿ ನಡೆಸಿದ್ದ ಆಪರೇಷನ್ ಸಿಂದೂರದಲ್ಲಿ ಭಾಗಿಯಾಗಿದ್ದು, ಪಾಕಿಸ್ತಾನದ ಉಗ್ರಗಾಮಿ ನೆಲೆಗಳ ಮೇಲೆ ದಾಳಿಯಲ್ಲಿ ಭಾಗವಹಿಸಿದ್ದಾಗಿ ತಿಳಿಸಿರುವ ರವೀಂದ್ರ ಅವರು, ಮಗ ಪೂರ್ವೇಶ್ ಆತನ ಕೆಲಸದಲ್ಲೇ ತಲ್ಲೀನನಾಗಿರುತ್ತಿದ್ದ ಎಂದಿದ್ದಾರೆ.

# ವಿಶ್ವ ದರ್ಜೆಯ ಸ್ಟಾರ್ಟ್‌ಅಪ್ ಹಬ್, '3ನೇ ಮುಂಬಯಿ' ರಚನೆ

ಮೊದಲ ಪುಟದಿಂದ

**ವಿಮಾನ ನಿಲ್ದಾಣ ಅಭಿವೃದ್ಧಿ :** ನವಿ ಮುಂಬೈ ವಿಮಾನ ನಿಲ್ದಾಣದ ಎರಡನೇ ಹಂತ, ಪುರಂದರ್ ವಿಮಾನ ನಿಲ್ದಾಣಕ್ಕೆ ವಿಶೇಷ ನಿಧಿ ಮತ್ತು ರಾಜ್ಯದ ಇತರ ವಿಮಾನ ನಿಲ್ದಾಣಗಳ ವಿಸ್ತರಣೆಗೆ ನಿಧಿ.

**ಸಂಪರ್ಕ:** ರಾಜ್ಯದಲ್ಲಿ ಮೆಟ್ರೋ ಜಾಲವನ್ನು 1,200 ಕಿ.ಮೀ.ಗೆ ಮತ್ತು ಎಕ್ಸ್‌ಪ್ರೆಸ್ ವೇ ಜಾಲವನ್ನು 6,000 ಕಿ.ಮೀ.ಗೆ ಕೊಂಡೊಯ್ಯುವುದು ಗುರಿಯಾಗಿದೆ. ಕಲ್ಯಾಣ್‌ನಿಂದ ಲಾತೂರ್ ಮತ್ತು ಶಿರೂರ್‌ನಿಂದ ಛತ್ರಪತಿ ಸಂಭಾಜಿನಗರದ ನಡುವೆ ಹೊಸ ಗ್ರೀನ್‌ಫೀಲ್ಡ್ ಹೆದ್ದಾರಿಗಳನ್ನು ನಿರ್ಮಿಸಲಾಗುವುದು.

**ಪ್ರಮುಖ ಪ್ರಕಟಣೆಗಳು :**

ಉತ್ತಾನ್‌ನಿಂದ ವಿರಾರ್ ಸಮುದ್ರ ಸೇತುವೆ ಮುಂಬೈನಿಂದ ವಧಾನ್ ಬಂದರಿಗೆ 58,754 ಕೋಟಿ ರೂ. ವೆಚ್ಚದಲ್ಲಿ ಸಂಪರ್ಕ ಕಲ್ಪಿಸಲಿದೆ.

ಬಾಲ್ಕುಮ್ ನಿಂದ ಗಾಯ್ಮುಖ್ ಮತ್ತು ಉಲ್ವೆ ಕರಾವಳಿ ರಸ್ತೆ. ಅಟಲ್ ಸೇತುವನ್ನು ಮುಂಬೈ-ಪುಣೆ ಎಕ್ಸ್‌ಪ್ರೆಸ್‌ವೇಗೆ ಸಂಪರ್ಕಿಸುತ್ತದೆ.

ಆರೆಂಜ್ ಗೇಟ್ (ಪೂರ್ವ ಮುಕ್ತಮಾರ್ಗ) ಮೆರೈನ್ ಡ್ರೈವ್‌ನಿಂದ, ಗೋರೆಗಾಂವ್-ಮುಲುಂಡ್, ಥಾಣೆ ನಿಂದ ಬೊರಿವಲಿ, ಮತ್ತು ಖಾರ್ಘರ್‌ನಿಂದ ತುರ್ಭೆ ಸಬ್‌ವೇಗಳು. ಗಾಯ್‌ಮುಖ್ ಜಂಕ್ಷನ್‌ನಿಂದ ಫೌಂಟೇನ್ ಹೋಟೆಲ್‌ನಿಂದ ಭಾಯಾಂದರ್(6 ಮತ್ತು 9 ಕಿ.ಮೀ ಉದ್ದದ ಮಾರ್ಗಗಳು). ಬಾಂದ್ರಾ-ವರ್ಲಿ ಸಮುದ್ರ ಸೇತುವೆಯಿಂದ ಹೈ ಸ್ಪೀಡ್ ರೈಲ್ವೆ ನಿಲ್ದಾಣ (ಬಿಕೆಸಿ) ಮುಂಬೈ ವಿಮಾನ ನಿಲ್ದಾಣಕ್ಕೆ.

**ಗ್ರಾಮೀಣ ರಸ್ತೆಗಳಿಗೆ ಗಣನೀಯ ಹಣಕಾಸು : ಮಹಾರಾಷ್ಟ್ರ ಅಮೃತಕಲ್ ಯೋಜನೆ:** 6,272 ಕಿ.ಮೀ ಎಕ್ಸ್‌ಪ್ರೆಸ್‌ವೇಗಳು ಮತ್ತು 14,919 ಕಿ.ಮೀ ರಾಜ್ಯ/ಜಿಲ್ಲಾ ರಸ್ತೆಗಳು.

**ಮುಖ್ಯಮಂತ್ರಿ ಗ್ರಾಮ ಸಡಕ್ ಯೋಜನೆ (ಹಂತ-3):** 23 ಸಾವಿರ ಕಿ.ಮೀ. ರಸ್ತೆಗಳು.

**ಕಾಂಕ್ರೀಟೀಕರಣ :** 1,000 ಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿರುವ ಗ್ರಾಮಗಳನ್ನು ಕಾಂಕ್ರೀಟ್ ರಸ್ತೆಗಳಿಂದ ಸಂಪರ್ಕಿಸಲಾಗುವುದು (4,500 ಕೋಟಿ).

**ಪ್ರವಾಸೋದ್ಯಮ ಮಾರ್ಗ:** 5,000 ಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿರುವ ವಸಾಹತುಗಳನ್ನು 4,247 ಕಿ.ಮೀ 'ಪ್ರವಾಸೋದ್ಯಮ ಮಾರ್ಗ'ದಿಂದ ಸಂಪರ್ಕಿಸಲಾಗುತ್ತದೆ.

# 'ವಿಕಸಿತ ಮಹಾರಾಷ್ಟ್ರ'ದತ್ತ ದಿಟ್ಟ ಹೆಜ್ಜೆ

ಮೊದಲ ಪುಟದಿಂದ

**ಯುವಕರಿಗೆ ಉದ್ಯೋಗ ಮತ್ತು ಸ್ಟಾರ್ಟಪ್ ಉತ್ತೇಜನ :**

ಯುವಕರಿಗೆ ಉದ್ಯೋಗ ಅವಕಾಶ ಕಲ್ಪಿಸಲು ಹೊಸ ಕೈಗಾರಿಕಾ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ. ಮುಂದಿನ ಐದು ವರ್ಷಗಳಲ್ಲಿ ಸಾವಿರಾರು ಸ್ಟಾರ್ಟಪ್‌ಗಳಿಗೆ ಪ್ರೋತ್ಸಾಹ ನೀಡುವ ಮೂಲಕ ಉದ್ಯಮಶೀಲತೆಗೆ ಉತ್ತೇಜನ ನೀಡುವ ಯೋಜನೆಗಳನ್ನು ಸರ್ಕಾರ ಘೋಷಿಸಿದೆ.

**ಮೂಲಸೌಕರ್ಯ ಅಭಿವೃದ್ಧಿಗೆ ಭಾರೀ ಹೂಡಿಕೆ :**

ಮುಂಬೈ ಮಹಾನಗರ ಪ್ರದೇಶದಲ್ಲಿ ಮೆಟ್ರೋ ಜಾಲ ವಿಸ್ತರಣೆ, ಬುಲೆಟ್ ರೈಲು ಯೋಜನೆ ಹಾಗೂ ಹೊಸ ರಸ್ತೆ ಮತ್ತು ಸಂಪರ್ಕ ವ್ಯವಸ್ಥೆಗಳಿಗೆ ಸರ್ಕಾರ ಹೆಚ್ಚಿನ ಅನುದಾನ ಮೀಸಲಾಗಿದೆ. ಇದರಿಂದ ರಾಜ್ಯದಲ್ಲಿ ಹೂಡಿಕೆ ಮತ್ತು ಉದ್ಯೋಗಾವಕಾಶಗಳು ಹೆಚ್ಚುವ ನಿರೀಕ್ಷೆಯಿದೆ.

# ಬಂಟರ ಸಂಘ ಮುಂಬಯಿ ಮೀರಾ-ಭಾಯಂದರ್ ಪ್ರಾದೇಶಿಕ ಸಮಿತಿ : ಮಾ. 8 ರಂದು ಸಮಾಜ ಕಲ್ಯಾಣ ಸಮಿತಿ ವತಿಯಿಂದ ಆರ್ಥಿಕ ಸಹಾಯದ ಅರ್ಜಿ ವಿತರಣೆ

ಮೀರಾರೋಡ್, ಮಾ.6- ಬಂಟರ ಸಂಘ ಮುಂಬಯಿ ಇದರ ಸಮಾಜ ಕಲ್ಯಾಣ ಸಮಿತಿಯ ಆಶ್ರಯದಲ್ಲಿ ಕೊಡಲ್ಪಡುವ ಧನ ಸಹಾಯವು ಆರ್ಥಿಕವಾಗಿ ಸಂಕಷ್ಟದಲ್ಲಿರುವ ಸಮಾಜದ ಬಂಟ ಬಂಧುಗಳ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ನೆರವು, ವಾರ್ಷಿಕ ವಿಧವಾ ವೇತನ, ಮತ್ತು ಮಾನಸಿಕ ಅಸ್ವಸ್ಥೆಯಲ್ಲಿರುವ ಅಥವಾ ವಿಕಲಾಂಗ ಚೇತನರಿಗೆ ಆರ್ಥಿಕ ನೆರವು ವಿತರಣೆ ಕಾರ್ಯಕ್ರಮ ಸಂಘದ ಅಧ್ಯಕ್ಷ ಪ್ರವೀಣ್ ಭೋಜ ಶೆಟ್ಟಿಯವರ ಮಾರ್ಗದರ್ಶನದಲ್ಲಿ ಹಾಗೂ ಸಮಾಜ ಕಲ್ಯಾಣ ಸಮಿತಿಯ ಕಾರ್ಯಾಧ್ಯಕ್ಷ ಇಂದ್ರಾಳಿ ದಿವಾಕರ್‌ಶೆಟ್ಟಿಯವರ ನೇತೃತ್ವದಲ್ಲಿ ಜೂನ್ ತಿಂಗಳಲ್ಲಿ ನಡೆಯಲಿದೆ. ಆ ಪ್ರಯುಕ್ತ ಅರ್ಜಿ ವಿತರಣೆಯು ಬಂಟರ ಸಂಘ ಮುಂಬಯಿ ಇದರ ಮೀರಾ -ಭಾಯಂದರ್ ಪ್ರಾದೇಶಿಕ ಸಮಿತಿಯ ಆಶ್ರಯದಲ್ಲಿ ಪ್ರಾದೇಶಿಕ ಸಮಿತಿಯ ಕಾರ್ಯಾಧ್ಯಕ್ಷ ಗುತ್ತಿನಾರ್‌ರವೀಂದ್ರ ಶೆಟ್ಟಿಯವರ ಸಮಕ್ಷಮದಲ್ಲಿ ಹಾಗೂ ಸಮಾಜ ಕಲ್ಯಾಣ ಸಮಿತಿಯ ಕಾರ್ಯಾಧ್ಯಕ್ಷ ಸಂಪತ್ ಶೆಟ್ಟಿ ಪಂಜದಗುತ್ತು ಇವರ ಮುಂದಾಳತ್ವದಲ್ಲಿ ಮಾ. 8ರ ರವಿವಾರದಂದು ಹೋಟೆಲ್ ಸ್ವಸ್ತಿಕ್, ಅಂಬರ್‌ಪ್ಲಾಜಾ, ವಿಜಯ ಪಾರ್ಕ್‌ಮೀರಾ ರೋಡ್ ಇಲ್ಲಿ ಸಂಜೆ ಗಂಟೆ 4 ರಿಂದ 6 ರ ತನಕ ನಡೆಯಲಿರುವುದು.

ಇದರ ಪ್ರಯೋಜನವನ್ನು ಪಡೆಯಲಿಚ್ಛಿಸುವ ಸಮಾಜ ಬಾಂಧವರು ಸಮಯಕ್ಕೆ ಸರಿಯಾಗಿ ಹಾಜರಿದ್ದು ಸಹಾಯ ಧನ ವಿತರಣೆಯ ಲಾಭವನ್ನು ಪಡೆದುಕೊಳ್ಳಬಹುದು. ಅರ್ಜಿಯನ್ನು ಪಡೆಯಲಿಚ್ಛಿಸುವ ಸಮಾಜ ಬಾಂಧವರು ತಮ್ಮ ಗುರುತು ಪತ್ರ ,ಆಧಾರ್‌ಕಾರ್ಡ್ ಪ್ರತಿಯೊಂದಿಗೆ ಮನೆಯ ವಿದ್ಯುತ್ ಬಿಲ್ ಪ್ರತಿ, ಮಕ್ಕಳ ಇತ್ತೀಚಿನ ಶಾಲಾ ದಾಖಲೆ (ಮಾರ್ಕ್ಸ್ ಕಾರ್ಡ್), ಭಾವ ಚಿತ್ರ, ವಿಧವಾ ವೇತನ ಮತ್ತು ವಿಕಲಾಂಗ ಚೇತನದ ಲಾಭ ಪಡೆಯಲಿಚ್ಛಿಸುವ ಸಮಾಜ ಬಾಂಧವರು ಸಂಬಂಧ ಪಟ್ಟ ದಾಖಲೆಗಳನ್ನು ಕಡ್ಡಾಯವಾಗಿ ಲಗತ್ತೀಕರಿಸ ಬೇಕು. ಅರ್ಜಿ ಪಡೆಯಲಿಚ್ಛಿಸುವ ಅರ್ಜಿದಾರರು ಬಂಟರ ಸಂಘ ಮುಂಬಯಿ ಇದರ ಸದಸ್ಯತ್ವವನ್ನು ಹೊಂದಿರಬೇಕು. ಮಾತ್ರವಲ್ಲದೆ ಸದಸ್ಯತನದ ಪ್ರತಿಯನ್ನು ಅರ್ಜಿಯಲ್ಲಿ ಲಗತ್ತೀಕರಿಸ ತಕ್ಕದ್ದು, ಅರ್ಜಿಯನ್ನು ಕೇವಲ ವಿದ್ಯಾರ್ಥಿಗಳಿಗೆ, ವಿಧವೆಯರಿಗೆ, ವಿಕಲಾಂಗ ಚೇತನರಿಗೆ ಸ್ವತಃ ಯಾ ಅವರವರ ಮಾತಾ ಪಿತಾ ಯಾ ಪೋಷಕರಿಗೆ ಮಾತ್ರ ನೀಡಲಾಗುವುದು.

ಹೆಚ್ಚಿನ ವಿವರಗಳಿಗಾಗಿ ಮೀರಾ-ಭಾಯಾಂದರ್ ಪ್ರಾದೇಶಿಕ ಸಮಿತಿಯ ಕಾರ್ಯಾಧ್ಯಕ್ಷ ರವೀಂದ್ರ ಶೆಟ್ಟಿ ಕೊಟ್ರಪಾಡಿಗುತ್ತು (ಮೊ.ನಂ- 9967325878), ಸಮಾಜ ಕಲ್ಯಾಣ ಸಮಿತಿಯ ಕಾರ್ಯಾಧ್ಯಕ್ಷ ಸಂಪತ್ ಶೆಟ್ಟಿ ಪಂಜದಗುತ್ತು (ಮೋ.ನಂ- 9223481670), ಕಾರ್ಯದರ್ಶಿ ಕಿಶೋರ್‌ಕುಮಾರ್ ಕುತ್ಯಾರ್(ಮೊ. ನಂ. 9930090328), ಸಂಚಾಲಕ ಶಿವಪ್ರಸಾದ್ ಶೆಟ್ಟಿ ಮಾಣಿ ಗುತ್ತು (ಮೋ.ನಂ- 9819040608), ಮಹಿಳಾ ವಿಭಾಗದ ಕಾರ್ಯಾಧ್ಯಕ್ಷೆ ವಸಂತಿ ಎಸ್ ಶೆಟ್ಟಿ (ಮೋ.ನಂ- 9892097549) ಇವರುಗಳನ್ನು ಸಂಪರ್ಕಿಸಬಹುದು.

# ಯುಪಿಎಸ್‌ಸಿ ಪರೀಕ್ಷಾ ಅಂತಿಮ ಫಲಿತಾಂಶ ಪ್ರಕಟ; ಅನುಜ್, ರಾಜೇಶ್ವರಿ, ಆಕಾಂಶ್‌ಗೆ ಮೊದಲ ಮೂರು ಸ್ಥಾನಗಳು

ಹೊಸದಿಲ್ಲಿ, ಮಾ. 6- ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) 2025ರಲ್ಲಿ ನಡೆಸಿರುವ ನಾಗರಿಕ ಸೇವೆಗಳ ಪರೀಕ್ಷಾ ಫಲಿತಾಂಶವನ್ನು ಶುಕ್ರವಾರ ಪ್ರಕಟಿಸಿದ್ದು, ಎಂಬಿಬಿಎಸ್ ಪದವೀಧರ ಅಅನುಜ್ ಅಗ್ನಿಹೋತ್ರಿ ಮೊದಲ ಸ್ಥಾನ ಪಡೆದಿದ್ದಾರೆ. ರಾಜೇಶ್ವರಿ ಸುವೆ ಎಂ. ಮತ್ತು ಆಕಾಂಶ್ ಧುಲ್ ಕ್ರಮವಾಗಿ ಎರಡು ಮತ್ತು ಮೂರನೇ ರ‍್ಯಾಂಕ್ ಪಡೆದಿದ್ದಾರೆ.

ಅಗ್ನಿಹೋತ್ರಿ ಯುಪಿಎಸ್‌ಸಿ ಪರೀಕ್ಷೆಯಲ್ಲಿ ವೈದ್ಯಕೀಯ ವಿಜ್ಞಾನ ವಿಷಯವನ್ನು ಐಚ್ಛಿಕವಾಗಿ ಬರೆದಿದ್ದರು. ಅವರು ರಾಜಸ್ಥಾನದ ಜೋಧ್ಪುರದ ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಎಂಬಿಬಿಎಸ್ ಪದವಿ ಪಡೆದಿದ್ದಾರೆ.

ರಾಜೇಶ್ವರಿ ಚೆನ್ನೈ ಅಣ್ಣಾ ವಿಶ್ವವಿದ್ಯಾಲಯದಲ್ಲಿ ಇಲೆಕ್ಟ್ರಿಕ್ ಮತ್ತು ಎಲೆಕ್ಟ್ರಾನಿಕ್ ಇಂಜಿನೀಯರಿಂಗ್‌ನಲ್ಲಿ ಬಿಇ ಪದವಿ ಪಡೆದಿದ್ದಾರೆ. ಆಕೆ ಸಮಾಜ ವಿಜ್ಞಾನವನ್ನೂ ಐಚ್ಛಿಕ ವಿಷಯವಾಗಿ ಆಯ್ದುಕೊಂಡಿದ್ದರು.

ಆಕಾಂಶ್ ದಿಲ್ಲಿ ವಿಶ್ವವಿದ್ಯಾಲಯದ ಬಿಕಾಂ ಪದವೀಧರ ಆಗಿದ್ದು ಲೋಕಸೇವಾ ಆಯೋಗದ ಪರೀಕ್ಷೆಗೆ ಕಾಮರ್ಸ್ ಮತ್ತು ಅಕೌಂಟೆನ್ಸಿಯನ್ನು ಐಚ್ಛಿಕ ವಿಷಯವಾಗಿ ಆಯ್ದುಕೊಂಡಿದ್ದರು. ಯುಪಿಎಸ್‌ಸಿಯ ನಾಗರಿಕ ಸೇವಾ ಪರೀಕ್ಷೆಯಲ್ಲಿ ಅಂತಿಮವಾಗಿ ಅರ್ಹತೆ ಪಡೆದ ಮೊದಲ ಐವರಲ್ಲಿ ಒಬ್ಬರು ಮಹಿಳೆಯಾದರೆ ಇತರ ನಾಲ್ವರು ಪುರುಷ ಅಭ್ಯರ್ಥಿಗಳಾಗಿದ್ದಾರೆ. ರಾಘವ್ ಜುನ್‌ಜುನ್‌ವಾಲ ಮತ್ತು ಇಶಾನ್ ಭಟ್ನಾಗರ್ ಕ್ರಮವಾಗಿ 4 ಮತ್ತು ಐದನೇ ರ‍್ಯಾಂಕ್ ಪಡೆದಿದ್ದಾರೆ. ರಾಘವ್ ದಿಲ್ಲಿ ವಿಶ್ವವಿದ್ಯಾಲಯದಿಂದ ಅರ್ಥಶಾಸ್ತ್ರದಲ್ಲಿ ಬಿಎ ಪದವಿ ಪಡೆದಿದ್ದು, ಯುಪಿಎಸ್‌ಸಿ ಪರೀಕ್ಷೆಯಲ್ಲಿ ಅರ್ಥಶಾಸ್ತ್ರವನ್ನು ಐಚ್ಛಿಕ ವಿಷಯವಾಗಿ ಆಯ್ದುಕೊಂಡಿದ್ದರು.

ಐದನೇ ಸ್ಥಾನ ಪಡೆದಿರುವ ಇಶಾನ್ ದಿಲ್ಲಿಯ ರಾಷ್ಟ್ರೀಯ ಕಾನೂನು ವಿಶ್ವ ವಿದ್ಯಾಲಯದ ಬಿಎಎಲ್‌ಎಲ್‌ಬಿ ಪದವೀಧರಗಿದ್ದು, ಸಮಾಜ ಶಾಸ್ತ್ರವನ್ನು ಐಚ್ಛಿಕ ವಿಷಯವಾಗಿ ಸ್ವೀಕರಿಸಿದ್ದರು.

ಮೊದಲ 25 ಸ್ಥಾನವನ್ನು ಪಡೆದವರಲ್ಲಿ 11 ಮಹಿಳೆಯರಾದರೆ 14 ಮಂದಿ ಪುರುಷರಾಗಿದ್ದಾರೆ ಎಂದು ಆಯೋಗದ ಪ್ರಕಟಣೆ ತಿಳಿಸಿದೆ.

ಕೇಂದ್ರದ ವಿವಿಧ ನಾಗರಿಕ ಸೇವೆಗಳಿಗೆ ನೇಮಕಾತಿಗಾಗಿ 659 ಪುರುಷರು ಮತ್ತು 299 ಮಹಿಳೆಯರು ಅರ್ಹತೆ ಪಡೆದಿದ್ದಾರೆ ಎಂದು ತಿಳಿಸಿರುವ ಯುಪಿಎಸ್‌ಸಿ, 348 ಅಭ್ಯರ್ಥಿಗಳನ್ನು ತಾತ್ಕಾಲಿಕ ಎಂದು ಶಿಫಾರಸು ಮಾಡಿರುವುದಾಗಿ ತಿಳಿಸಿದೆ.

ನಾಗರಿಕ ಸೇವೆಗಳ ಪರೀಕ್ಷೆ ವರ್ಷದಲ್ಲಿ ಪ್ರಿಲಿಮಿನರಿ, ಮೈನ್ ಮತ್ತು ಇಂಟರ್‌ವ್ಯೂ ಎಂಬ ಮೂರು ಹಂತದಲ್ಲಿ ನಡೆಯುತ್ತದೆ. ಈ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ ಅಂತಿಮ ಆಯ್ಕೆಗೆ ಅರ್ಹತೆ ಪಡೆದವರು ಐಎಎಸ್, ಐಎಫ್‌ಎಸ್ ಮತ್ತು ಇಪಿಎಸ್ ಹಾಗೂ ಇತರ ಹುದ್ದೆಗಳನ್ನು ಪಡೆಯುತ್ತಾರೆ. 2025ರ ಮೇ 25ರಂದು ಪ್ರಿಲಿಮಿನರಿ ಪರೀಕ್ಷೆ ನಡೆದಿದ್ದು ಒಟ್ಟು 9,37,876 ಅಭ್ಯರ್ಥಿಗಳು ಅರ್ಜಿ ಹದ್ದು ಅದರಲ್ಲಿ 5,76,793 ಅಭ್ಯರ್ಥಿಗಳು ಪರೀಕ್ಷೆಗೆ ಬರೆದಿದ್ದರು. ಅವರಲ್ಲಿ 14,161 ಅಭ್ಯರ್ಥಿಗಳು ಲಿಖಿತ (ಮೈನ್) ಪರೀಕ್ಷೆಗೆ ಅರ್ಹತೆ ಪಡೆದಿದ್ದು ಆಗಸ್ಟ್‌ನಲ್ಲಿ ಪರೀಕ್ಷೆ ನಡೆದಿತ್ತು. ಅದರಲ್ಲಿ 2,736 ಅಭ್ಯರ್ಥಿಗಳು ಇಂಟರ್‌ವ್ಯೂ(ಸಂದರ್ಶನ)ಗೆ ಅರ್ಹತೆ ಪಡೆದಿದ್ದರು. ನೇಮಕಾತಿಗಳಿಗೆ ಶಿಫಾರಸು ಮಾಡಲಾದ ಅಭ್ಯರ್ಥಿಗಳಲ್ಲಿ 42 ಜನರು ಬೆಂಚ್ ಮಾರ್ಕ್ ಅಂಗವೈಕಲ್ಯ, 10 ಮಂದಿ ಮೂಳೆ ವೈಕಲ್ಯ, 14 ಮಂದಿ ದೃಷ್ಟಿ ವೈಕಲ್ಯ, 9 ಜನರು ಕಿವುಡು ವೈಕಲ್ಯ ಮತ್ತು 9 ಮಂದಿ ಹಲವು ರೀತಿಯ ಅಂಗ ವೈಕಲ್ಯದಿಂದ ಬಳಲುತ್ತಿರುವವರು ಸೇರಿದ್ದಾರೆಂದು ಯುಪಿಎಸ್‌ಸಿ ಹೇಳಿದೆ. ಇತರ 258 ಅಭ್ಯರ್ಥಿಗಳನ್ನು ಮೀಸಲು ಪಟ್ಟಿಯಲ್ಲಿ ಇಡಲಾಗಿದೆ ಎಂದೂ ಕೇಂದ್ರ ಲೋಕಸೇವಾ ಆಯೋಗ ತಿಳಿಸಿದೆ.

ನೇಮಕಾತಿಗೆ ಆಯ್ಕೆಯಾದ ಒಟ್ಟು ಅಭ್ಯರ್ಥಿಗಳಲ್ಲಿ 317 ಅಭ್ಯರ್ಥಿಗಳು ಸಾಮಾನ್ಯ ವಿಭಾಗಕ್ಕೆ ಸೇರಿದ್ದರೆ 104 ಅಭ್ಯರ್ಥಿಗಳು ಆರ್ಥಿಕ ದುರ್ಬಲ ವಿಭಾಗ, 306 ಅಭ್ಯರ್ಥಿಗಳು ಇತರ ಹಿಂದುಳಿದ ವರ್ಗ, 158 ಮಂದಿ ಪರಿಶಿಷ್ಟ ಜಾತಿ ಮತ್ತು 73 ಜನರು ಪರಿಶಿಷ್ಟ ಪಂಗಡಕ್ಕೆ ಸೇರಿದ್ದಾರೆಂದು ಆಯೋಗ ಹೇಳಿದೆ.


# ರಾಷ್ಟ್ರೀಯ ಸ್ವತಂತ್ರ ಪಕ್ಷ ಭರ್ಜರಿ ಗೆಲುವಿನತ್ತ ದಾಪುಗಾಲು ; ಬಾಲೇಂದ್ರ ಶಾ ನೇಪಾಳದ ಮುಂದಿನ ಪ್ರಧಾನಿಯಾಗುವ ಸಾಧ್ಯತೆ

ಕಾಠ್ಮಂಡು, ಮಾ. 6 - ರ‍್ಯಾಪರ್-ರಾಜಕಾರಣಿ ಬಾಲೇಂದ್ರ ಶಾ ಅವರ ಹೊಸದಾಗಿ ರಚನೆಯಾದ ರಾಷ್ಟ್ರೀಯ ಸ್ವತಂತ್ರ ಪಕ್ಷ (ಆರ್‌ಎಸ್‌ಪಿ) ಶುಕ್ರವಾರ ನೇಪಾಳದ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಭಾರಿ ಗೆಲುವಿನತ್ತ ಸಾಗುತ್ತಿದ್ದು, ಹಿಂಸಾತ್ಮಕ ಜನರಲ್ ಝಡ್ ಪ್ರತಿಭಟನೆಗಳ ನಂತರ ರಾಜಕೀಯವಾಗಿ ದುರ್ಬಲವಾಗಿರುವ ರಾಷ್ಟ್ರದಲ್ಲಿ ಈ ಮೊದಲಿದ್ದ ರಾಜಕೀಯ ಪಕ್ಷಗಳ ಪ್ರಾಬಲ್ಯವನ್ನು ಛಿದ್ರಗೊಳಿಸಿದೆ.

ಚುನಾವಣಾ ಆಯೋಗದ ಒಟ್ಟು 165 ಕ್ಷೇತ್ರಗಳ ಪೈಕಿ 144 ಕ್ಷೇತ್ರಗಳಿಂದ ಲಭ್ಯವಿರುವ ಮಾಹಿತಿಯ ಪ್ರಕಾರ, ಆರ್‌ಎಸ್‌ಪಿ ಮೂರು ಸ್ಥಾನಗಳನ್ನು ಗೆದ್ದಿದೆ ಮತ್ತು 104 ಇತರ ಕ್ಷೇತ್ರಗಳಲ್ಲಿ ಮುಂದಿದೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

ಇತ್ತೀಚಿನವರೆಗೂ ಕಾಠ್ಮಂಡುವಿನ ಮೇಯರ್ ಆಗಿದ್ದ ಬಾಲೇಂದ್ರ ಶಾ, ಝಪಾ-5 ಕ್ಷೇತ್ರದಲ್ಲಿ ನಾಲ್ಕು ಬಾರಿ ಪ್ರಧಾನಿ ಮತ್ತು ಸಿಪಿಎನ್-ಯುಎಂಎಲ್ ಅಧ್ಯಕ್ಷ ಕೆ ಪಿ ಶರ್ಮಾ ಓಲಿ ವಿರುದ್ಧ ಮುನ್ನಡೆಯಲ್ಲಿದ್ದಾರೆ. ಬಾಲೆನ್ ಎಂದೇ ಜನಪ್ರಿಯವಾಗಿ ಕರೆಯಲ್ಪಡುವ ಶಾ 6,551 ಮತಗಳನ್ನು ಪಡೆದರೆ, ಓಲಿ ಕೇವಲ 1,428 ಮತಗಳನ್ನು ಪಡೆದರು.

'ಬಾಲೆನ್' ಎಂದೇ ಜನಪ್ರಿಯರಾಗಿರುವ 35 ವರ್ಷದ ಇಂಜಿನಿಯರ್ ನೇಪಾಳದ ಮುಂದಿನ ಪ್ರಧಾನಿಯಾಗುವ ನಿರೀಕ್ಷೆಯಿದೆ, ಇದು ಈ ಮೊದಲಿನ ಪಕ್ಷಗಳನ್ನು ತಿರಸ್ಕರಿಸುವ ಸಾರ್ವಜನಿಕ ಮನಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ. ನೇಪಾಳವು ಕಳೆದ 18 ವರ್ಷಗಳಲ್ಲಿ 14 ಸರ್ಕಾರಗಳನ್ನು ಹೊಂದಿದೆ.

## ಪುತ್ತೂರು ಗಾಣಿಗ ಯಾನೆ ಸಪಲಿಗರ ಸೇವಾ ಸಂಘದ ಆಶ್ರಯದಲ್ಲಿ ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು ಜಿಲ್ಲೆಗಳ ಸ್ವಜಾತಿ ಬಾಂಧವರ ಗಾಣಿಗ ಸಂಗಮ

# ಸಮಾವೇಶ ಕೇವಲ ಸಮಾರಂಭವಾಗದೆ ಗಾಣಿಗರ ಆತ್ಮಾವಲೋಕನವಾಗಬೇಕಾಗಿದೆ - ಶ್ರೀನಿವಾಸ ಪಿ. ಸಾಫಲ್ಯ


ಗಾಣಿಗ ಸಂಗಮ ಕಾರ್ಯಕ್ರಮವನ್ನು ಉದ್ಘಾಟಿಸುತ್ತಿರುವ ಸಂಸದ ಕ್ಯಾ. ಬ್ರಿಜೇಶ್ ಚೌಟ


ಸಾಫಲ್ಯ ಸೇವಾ ಸಂಘ ಮುಂಬಯಿಯ ಅಧ್ಯಕ್ಷ ಶ್ರೀನಿವಾಸ ಪಿ. ಸಾಫಲ್ಯ ಅವರನ್ನು ಸನ್ಮಾನಿಸಿದಾಗ

ಪುತ್ತೂರು, ಮಾ. 6- ಗೀತೆಯ ಉಪದೇಶದಂತೆ ಮಾತೃಭೂಮಿಗೆ ಗೌರವ, ಸಂಸತ್‌ಗೆ ನಮಸ್ಕಾರ ಸಹಿತ ಭಾರತೀಯ ಸಂಸ್ಕೃತಿಗೆ ಒತ್ತು ಕೊಡುತ್ತಿರುವವರು ನಮ್ಮ ಪ್ರಧಾನಿ ನರೇಂದ್ರ ಮೋದಿಯವರು. ಅವರ ಸಹೋದರ ನಮ್ಮ ಸಮಾಜದ ಏಳ್ಗೆಗಾಗಿ ಪ್ರಯತ್ನ ಮಾಡುತ್ತಿದ್ದಾರೆ. ಇವತ್ತು ಇಚ್ಛಾಶಕ್ತಿಯ ಪ್ರೇರಣೆಯಿಂದಾಗಿ ಸಂಘ ಬೆಳೆದಿದೆ. ಈ ಸಮಾವೇಶ ಕೇವಲ ಸಮಾರಂಭವಾಗದೆ ಗಾಣಿಗರ ಆತ್ಮಾವಲೋಕನವಾಗಬೇಕಾಗಿದೆ. ನಮ್ಮ ಶಕ್ತಿ ನಮ್ಮವರಿಗೆ ಗೊತ್ತಾಗಬೇಕು. ಗಾಣಿಗ ಯಾನೆ ಸಪಲಿಗರ ಸಂಘ ಗಾಣದ ಎಣ್ಣೆ ತೆಗೆಯುವ ಕಾಯಕದಲ್ಲಿದ್ದರೂ ಕಾಲ ಬದಲಾದಂತೆ ಬದಲಾಗಿದೆ. ಇತರ ಸಮುದಾಯವನ್ನು ನೋಡಿದಾಗ ನಾವು ಎಲ್ಲಿ ಕ್ಷೀಣಿಸುತ್ತಿದ್ದೇವೆ ಎಂಬ ಸಂಶಯ ಬರುತ್ತದೆ. ಆದ್ದರಿಂದ ಮಕ್ಕಳಿಗೆ ಉತ್ತಮ ಶಿಕ್ಷಣ, ಸಂಸ್ಕೃತಿ ನೀಡಬೇಕು. ನಮ್ಮ ಆಚಾರ ವಿಚಾರ ಸಂಸ್ಕೃತಿಯನ್ನು ಯುವ ಜನತೆಗೆ ತಿಳಿಸುವ ಕಾರ್ಯಕ್ರಮ ಬಹಳ ಅಗತ್ಯ. ಇಲ್ಲವಾದರೆ ನಮ್ಮ ಸಮಾಜ ದಿಕ್ಕು ತಪ್ಪುತ್ತದೆ. ಸಂಘಟನೆ ಕೇವಲ ಸಂಘಕ್ಕೆ ಮೀಸಲಾಗುವುದಲ್ಲ. ಸಮಾಜದ ಸಾಧನೆಗಳು, ಸಂಪನ್ಮೂಲಗಳನ್ನು ಸಮಾಜದ ವೆಬ್‌ಸೈಟ್ ಮೂಲಕ ಪ್ರಸಾರ ಮಾಡಬೇಕು. ಶಿಕ್ಷಣದಲ್ಲಿ ಉಚಿತ ಸೌಲಭ್ಯ. ಉನ್ನತ ಶಿಕ್ಷಣಕ್ಕೆ ಪ್ರೋತ್ಸಾಹ. ನಿರುದ್ಯೋಗಿಗಳ ಮನೆಯನ್ನು ಸ್ವಾವಲಂಬಿಯನ್ನಾಗಿ ಮಾಡಬೇಕು ಎಂದು ಸಾಫಲ್ಯ ಸೇವಾ ಸಂಘ ಮುಂಬಯಿಯ ಅಧ್ಯಕ್ಷ ಶ್ರೀನಿವಾಸ ಪಿ. ಸಾಫಲ್ಯ ನುಡಿದರು.

ಅವರು ಪುತ್ತೂರಿನಲ್ಲಿ ಪ್ರಥಮ ಬಾರಿಗೆ ಪುತ್ತೂರು ಸಾಲ್ಮರ ಕೊಟೇಚಾ ಹಾಲ್‌ನಲ್ಲಿ ಪುತ್ತೂರು ಗಾಣಿಗ ಯಾನೆ ಸಪಲಿಗರ ಸೇವಾ ಸಂಘದ ಆಶ್ರಯದಲ್ಲಿ ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು ಜಿಲ್ಲೆಗಳ ಸ್ವಜಾತಿ ಬಾಂಧವರ ಗಾಣಿಗ ಸಂಗಮ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದರು.

ವಿಶ್ವ ಗಾಣಿಗ ಸಂಸ್ಥೆಯಾಗಬೇಕೆಂಬ ಕೂಗಿಗೆ ನಾವೆಲ್ಲರೂ ಒಂದಾಗಬೇಕು. ಈ ನಿಟ್ಟಿನಲ್ಲಿ ಯುವಕರ ಪಾಲ್ಗೊಳ್ಳುವಿಕೆ ಆಗಬೇಕು. ಇಲ್ಲವಾದರೆ ಸಂಘ ಕುಂಠಿತವಾಗಬಹುದು. ಪುತ್ತೂರಿನಲ್ಲಿ ಗಾಣಿಗರ ಸಮುದಾಯ ಭವನ ಆಗಬೇಕು. ಇದಕ್ಕಾಗಿ ಶಾಸಕರಿಗೆ ಮನವಿ ನೀಡಬೇಕು. ಅವರ ಸಹಕಾರ ಬಂದಾಗ ಮುಂಬಯಿಯಿಂದ ಗಾಣಿಗ ಸಮುದಾಯವು ಪೂರ್ಣ ಸಹಕಾರ ನೀಡುತ್ತದೆ ಎಂದು ಶ್ರೀನಿವಾಸ ಸಾಫಲ್ಯ ತಿಳಿಸಿದರು.

ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಸಹೋದರರೂ ಆಗಿರುವ ಭಾರತೀಯ ತೈಲಿಕ್ ಸಾಹು ರಾಥೋಡ್ ಮಹಾಸಭಾದ ಮುಖ್ಯ ಸಲಹೆಗಾರ ಪ್ರಹ್ಲಾದ್ ದಾಮೋದರ್‌ದಾಸ್ ಮೋದೀಜಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದು ಸಮಾವೇಶಕ್ಕೆ ವಿಶೇಷ ಮೆರುಗು ನೀಡಿತು. ಸಂಪ್ರದಾಯದಂತೆ ಒಂದು ಸೇರು ಅಕ್ಕಿಯಲ್ಲಿ ತೆಂಗಿನ ಕಾಯಿ, ಅಡಿಕೆ ವೀಳ್ಯದೆಲೆ ಇಟ್ಟು ಗಣಪತಿ ದೇವರಿಗೆ ಪ್ರಾರ್ಥನೆ ಸಲ್ಲಿಸುವ ಮೂಲಕ ಸಭಾ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

**ಗಾಣಿಗರು ನೀಡಿದ ತೈಲದಿಂದಲೇ ಲಂಕೆ ಸುಟ್ಟ ಹನುಮಂತ!**

ರಾಮಾಯಣದಲ್ಲೂ ಗಾಣಿಗರ ಪಾತ್ರವಿದೆ. ಗಾಣಿಗ ಸಮಾಜ ರಾವಣನಿಗೆ ತೈಲ ನೀಡಿದ್ದು, ರಾವಣ ಈ ತೈಲದಲ್ಲಿ ಹನುಮಂತನನ್ನು ಸುಡಲು ಪ್ರಯತ್ನಿಸಿದ್ದು, ಅದೇ ತೈಲ ಬಳಸಿ ಹನುಮಂತ ಲಂಕೆಯನ್ನು ಸುಟ್ಟಿರುವುದರಿಂದ ಯುದ್ಧಕ್ಕೆ ಮೊದಲೇ ರಾವಣನ ಮನೋಬಲ ಕುಸಿಯುವಂತಾಗಿ ರಾವಣನಿಗೆ ಸೋಲಾಗುತ್ತದೆ. ಇದು ಗಾಣಿಗ ಸಮಾಜ ನೀಡಿರುವ ಅತೀ ದೊಡ್ಡ ಕೊಡುಗೆ. ಇದರ ಉಲ್ಲೇಖವೇ 'ರಾಮಚರಿತ ಮಾನಸ' ಕೃತಿಯಲ್ಲಿ ಇಲ್ಲದಿರುವುದು ಗಾಣಿಗ ಸಮಾಜಕ್ಕಾದ ಅತೀ ದೊಡ್ಡ ಅನ್ಯಾಯ. ಗಾಣಿಗ ಸಮಾಜದ ಮಗನೊಬ್ಬ ವಿಶ್ವಕ್ಕೆ ಸಮಾಜದ ಹೆಸರು ಬೆಳಗಿಸಿದ್ದಾನೆ. ಎಲ್ಲೇ ಹೋಗಿ ನಾನು ಮೋದಿ ಎಂದರೆ ಅವರ ಮಾತು ಕೇಳಲು ಜನ ಸಿದ್ಧರಾಗುತ್ತಾರೆ. ಇದು ಗಾಣಿಗ ಸಮಾಜದ ತಾಕತ್ತು. ದೇಶದಲ್ಲಿ ಗಾಣಿಗ ಸಮಾಜದವರು ಸುಮಾರು 14 ಕೋಟಿ ಇದ್ದಾರೆ. ಎಲ್ಲರೂ ಸಂಘಟಿತರಾಗುವ ಅನಿವಾರ್ಯತೆಯಿದೆ ಎಂದರು. ನಿಮಗೆ ಅನಿಸಿರಬಹುದು, ಸರಕಾರಗಳು ಗಾಣಿಗ ಸಮಾಜದ ಮಾತು ಕೇಳುವುದಿಲ್ಲ, ಗಾಣಿಗ ಸಮಾಜಕ್ಕೆ ಯಾವುದೇ ಸವಲತ್ತು ಕೊಡುವುದಿಲ್ಲವೆಂದು. ಆದರೆ ಒಗ್ಗಟ್ಟಾದಾಗ ಎಲ್ಲವೂ ಸಿಗುತ್ತದೆ ಎಂದ ಅವರು ಗಾಣಿಗ ಸಮಾಜ ಗೌರವಯುತ ಸಮಾಜ. ಈ ಸಮಾಜ ರಾಮನಿಗೆ ರಾವಣನ ವಿರುದ್ಧದ ಯುದ್ಧದಲ್ಲಿ ನೆರವಾದ ಸಮಾಜ ಎಂದು ಪ್ರಹ್ಲಾದ್ ದಾಮೋದರ್‌ದಾಸ್ ಮೋದಿ ಹೇಳಿದರು.

ಸಂಸದ ಕ್ಯಾ. ಬ್ರಿಜೇಶ್ ಚೌಟ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಸನಾತನ ಸಂಸ್ಕೃತಿ ಬೆಳೆಯಲು ತಾಯಂದಿರು ಕಾರಣ. ಅವರು ಈ ಸಮಾವೇಶದಲ್ಲಿ ಅತ್ಯಂತ ಹೆಚ್ಚು ಪಾಲು ಪಡೆದಿರುವುದು ಸಂತೋಷ. ಯುವಕರು ಉದ್ಯಮಕ್ಕೆ ಬರಬೇಕೆಂಬ 'ದೃಷ್ಟಿಯಿಂದ ಬೊಳ್ಪು' ಎಂಬ ಕಾರ್ಯಕ್ರಮ ಪ್ರಾರಂಭ ಮಾಡಿದ್ದೇವೆ. ಸಾವಿರಕ್ಕೂ ಹೆಚ್ಚು ಅರ್ಜಿ ಬಂದಿದೆ. ಇದು ಪ್ರಧಾನಿ ನರೇಂದ್ರ ಮೋದಿಯವರ ವಿಕಸಿತ ಭಾರತದ ಕಲ್ಪನೆ. ಅವರೊಂದಿಗೆ ನಾವು ತೊಡಗಿಸಿಕೊಳ್ಳಬೇಕು ಎಂದರು. ಹಿಂದೂ ಸಮಾಜ ಅತ್ಯಂತ ಪ್ರಬಲವಾಗಲು ಇಂತಹ ಹಲವು ಸಮಾಜಗಳು ಕಾರಣ. ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ಕೆಲವರು ಅಸಹನೆಯ ಮಾತನ್ನು ಆಡುತ್ತಾರೆ. ಹಿಂದೂ ಸಮಾಜ ಒಂದಾಗಿ ಒಟ್ಟಾಗಿ ಹೋಗಬೇಕಾದ ಅವಶ್ಯಕತೆ ಬೇಕಾಗಿದೆ. ಅಶಕ್ತರಿಗೆ ಸಹಾಯ, ಅನ್ಯಾಯಕ್ಕೆ ನ್ಯಾಯ ಕೊಡುವ ಕೆಲಸ ಆಗಬೇಕು. ಗಾಣಿಗ ಸಮಾಜ ಧರ್ಮದ ಹಾದಿಯಲ್ಲಿ ನಡೆಯುವ ಸಮಾಜ. ಇಂತಹ ಸಮಾಜದಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ಕನಸಾದ ವಿಕಸಿತ ಭಾರತಕ್ಕಾಗಿ ಒಟ್ಟಾಗಿ ಹೆಜ್ಜೆ ಹಾಕೋಣ ಎಂದರು.

ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಬೊಟ್ಯಾಡಿ ಮಾತನಾಡಿ, ಗಾಣಿಗ ಸಮಾಜ ದೇಶಕ್ಕೆ ನಾಯಕನನ್ನು ಕೊಟ್ಟ ಸಮಾಜ. ಇವತ್ತು ಬೇರೆ ಬೇರೆ ಜಾತಿ ಇದ್ದರೂ ನದಿ ಸಮುದ್ರಕ್ಕೆ ಸೇರಿದಂತೆ ಸನಾತನ ಹಿಂದೂ ಸಮಾಜ ಎಲ್ಲಾ ಜಾತಿ ಸಮುದಾಯದಿಂದ ಶಕ್ತಿಯುತವಾಗಿದೆ. ಗಾಣಿಗ ಸಮಾಜ ಸಮಾಜಕ್ಕೆ ಬೆಳಕು ನೀಡುವ ಸಮಾಜ ಎಂದರು.

ಶಾಸಕ ಅಶೋಕ್ ಕುಮಾರ್ ರೈ ಮಾತನಾಡಿ, ಪುತ್ತೂರಿನವರು ಏನಾದರೂ ಮಾಡಿದರೆ ಅದನ್ನು ವ್ಯವಸ್ಥಿತವಾಗಿ ಮಾಡುತ್ತಾರೆ ಎಂಬುದಕ್ಕೆ ಗಾಣಿಗ ಸಮಾಜದ ಕಾರ್ಯಕ್ರಮ ಸಾಕ್ಷಿಯಾಗಿದೆ. ಇದಕ್ಕಾಗಿ ಪುತ್ತೂರಿನ ಗಾಣಿಗ ಸಮಾಜಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. ಕಷ್ಟದಲ್ಲಿದ್ದವರನ್ನು ಮೇಲೆತ್ತುವ, ವಿದ್ಯಾಭ್ಯಾಸ ಕೊಡುವ ಕೆಲಸ ಮಾಡಬೇಕು. ಆಗ ಮುಂದಿನ ಪೀಳಿಗೆಗೆ ಕೆಲಸ ಮಾಡಲು ಆಗುತ್ತದೆ. ಗಾಣಿಗ ಅಭಿವೃದ್ಧಿ ನಿಗಮ ಕರ್ನಾಟಕದಲ್ಲಿ ಇದೆ. ಅದಕ್ಕೆ ಶಕ್ತಿ ಕೊಡುವ ಕೆಲಸ ಆಗಬೇಕು. ಈ ಸಮಾವೇಶದಿಂದ ಸಮಾಜಕ್ಕೆ ಸಂದೇಶ ಹೋಗಬೇಕು ಎಂದರು. ಸರಿಯಾದ ಆರ್.ಟಿ.ಸಿ., ಸರಕಾರಿ ಜಾಗ ತೋರಿಸಿದಲ್ಲಿ ಮುಖ್ಯಮಂತ್ರಿ ಗಳಿಂದ ಅನುಮೋದನೆ ತರುವ ಕೆಲಸ ಮಾಡುತ್ತೇನೆ. ಈಗಾಗಲೇ ಬಂಟರ, ಕುಲಾಲ, ಭಂಡಾರಿ ಸಮುದಾಯಕ್ಕೆ ಜಾಗ ನೀಡಲಾಗಿದೆ ಎಂದರು.

ಕೆಪಿಸಿಸಿ ಉಪಾಧ್ಯಕ್ಷ, ವಿಧಾನ ಪರಿಷತ್ ಮಾಜಿ ಅಧ್ಯಕ್ಷರೂ ಆದ ವಿ. ಆರ್. ಸುದರ್ಶನ್ ಮಾತನಾಡಿ, ಬ್ಯಾರಿಸ್ಟರ್ ರತ್ನ ಪ್ರಶಸ್ತಿ ಪಡೆದ ಎಲ್ಲಪ್ಪರವರು ಸಾಧನೆ ಮಾಡಿದ ಮಹಾನ್ ವ್ಯಕ್ತಿ. ಅವರ ಕಾಲದಲ್ಲೇ ಮಂಗಳೂರಿನಲ್ಲಿ ರೈಲ್ವೇ ಸ್ಟೇಷನ್ ಜಾಗ ದಾನ ಮಾಡಿದ್ದಾರೆ ಎಂಬುದು ನಮಗೆ ಹೆಮ್ಮೆ. ಪುತ್ತೂರು ಅಂದಾಗ ಮಹಾಲಕ್ಷ್ಮೀ ದೇವಸ್ಥಾನ ನೆನಪಾಗುತ್ತದೆ. ಇಲ್ಲಿಯೂ ಗಾಣಿಗ ಸಮುದಾಯದವರು ಸಮಾಜ ಸೇವೆ ಮಾಡುತ್ತಿದ್ದಾರೆ. ಪುತ್ತೂರು ಪವಿತ್ರ ಧಾರ್ಮಿಕ ಕ್ಷೇತ್ರ. ಬ್ಯಾಂಕ್, ಸಾಹಿತ್ಯ, ಸಾಂಸ್ಕೃತಿಕ ಕ್ಷೇತ್ರಕ್ಕೆ ಹೆಚ್ಚಿನ ಕೊಡುಗೆ ನೀಡಿದ ಕರಾವಳಿ ಪ್ರದೇಶವನ್ನು ಕರ್ನಾಟಕ ಹೆಮ್ಮೆ ಪಡುತ್ತದೆ. ಆದರೆ ಸಾಮಾಜಿಕ ಸಂಘರ್ಷಗಳಿಂದ ಇಲ್ಲಿ ಅಭಿವೃದ್ಧಿ ಕುಂಠಿತ ಆಗುತ್ತಿದೆ. ಕೋಮು ಸೌಹಾರ್ದತೆ, ಭಾಷಾ ಸೌಹಾರ್ದತೆಯಿಂದ ಪ್ರಗತಿ ಸಾಧ್ಯ ಎಂದರು. ಗಾಣಿಗ ಸಮಾಜದಲ್ಲಿ ಜನಸಂಖ್ಯೆಯಲ್ಲಿ ಕಡಿಮೆ ಇದ್ದರೂ ಪ್ರತಿಭೆ ಮತ್ತು ಶ್ರಮದಲ್ಲಿ ಬಹಳ ದೊಡ್ಡ ಸಮುದಾಯವಾಗಿದೆ. ಈ ಸಮಾಜ ಅನೇಕ ಕೊಡುಗೆ ನೀಡಿದೆ. ವಿದ್ಯುತ್, ವಿಜ್ಞಾನ ಬರುವ ಮೊದಲೇ ದೇವಸ್ಥಾನ, ಮನೆಯಲ್ಲಿ ಉಪಯೋಗಿಸುತ್ತಿದ್ದ ದೀಪದ ಎಣ್ಣೆಯನ್ನು ಕೊಡುಗೆಯಾಗಿ ನೀಡಿದೆ. ಅಖಿಲ ಕರ್ನಾಟಕ ಗಾಣಿಗರ ಸಂಘ ಇದೆ. 50ನೇ ವರ್ಷದ ಸಮಾರಂಭಕ್ಕೆ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಸಂಘಕ್ಕೆ ರೂ. 5 ಕೋಟಿ ಘೋಷಣೆ ಮಾಡಿದ್ದರು. ಗಾಣಿಗ ಸಮಾಜಕ್ಕಾಗಿ ದೇವರಾಜ ಅಭಿವೃದ್ಧಿ ನಿಗಮ ಸ್ಥಾಪಿಸಲಾಗಿದೆ. ಗಾಣಿಗ ಸಮಾಜದಲ್ಲಿ ವಿದ್ಯಾವಂತರಿದ್ದಾರೆ. ಸಮುದಾಯದ ನರೇಂದ್ರ ಮೋದಿ ದೇಶದ ಪ್ರಧಾನಿ ಮಂತ್ರಿಯಾಗಿದ್ದಾರೆ. ಗಾಣಿಗ ಉದ್ಯಮವನ್ನು ವಿಶ್ವಕರ್ಮ ಯೋಜನೆ ಅಡಿಯಲ್ಲಿ ತರಬೇಕೆಂದು ನಾವು ಕೇಂದ್ರ ಸರಕಾರಕ್ಕೆ ಮನವಿ ಮಾಡಿದ್ದೇವೆ ಎಂದರು.

ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಈಶ್ವರ ಭಟ್ ಪಂಜಿಗುಡ್ಡೆ ಮಾತನಾಡಿ, ಸಮಾಜದ ವಿವಿಧ ಕ್ಷೇತ್ರಗಳಿಗೆ ಗಾಣಿಗ ಸಮಾಜ ತನ್ನದೇ ಆದ ಕೊಡುಗೆ ನೀಡುತ್ತಿದೆ. ಮಹಾಲಿಂಗೇಶ್ವರ ದೇವಸ್ಥಾನದಲ್ಲೂ ಗಾಣಿಗ ಸಮಾಜದಿಂದಲೇ ಶುದ್ಧ ಎಣ್ಣೆ ಸಮರ್ಪಣೆ ವ್ಯವಸ್ಥೆ ನಡೆದು ಬಂದಿರುವುದು ಪ್ರಶ್ನಾಚಿಂತನೆಯಲ್ಲೇ ಕಂಡು ಬಂದಿತ್ತು. ಅದರಂತೆ ಮೋಹನ್ ಗಾಣಿಗ ಅವರ ಮೂಲಕ ದೇವಸ್ಥಾನಕ್ಕೆ ಶುದ್ಧ ಎಳ್ಳೆಣ್ಣೆ ಪಡೆಯುವ ಅವಕಾಶವಾಗಿದೆ. ಪ್ರತಿ ತಿಂಗಳು ದೇವರಿಗೆ ಎಳ್ಳೆಣ್ಣೆಯ ಅಭಿಷೇಕವೂ ನಡೆಯುತ್ತಿದೆ ಎಂದರು.

ಬಂಟ್ವಾಳ ತಾ. ಪಂ. ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಮಾಧವ ಮಾವೆ ಮಾತನಾಡಿ, ಪುತ್ತೂರಿನ ಈ ಕಾರ್ಯಕ್ರಮ ಮಾದರಿಯಾಗಿದೆ. ಮುಂದಿನ ದಿನ ಪ್ರತಿ ತಾಲೂಕಿನಲ್ಲೂ ಸಮುದಾಯ ಬೆಳೆಯಬೇಕು. ಗಾಣಿಗ ಸಮುದಾಯ ಸಣ್ಣ ಸಮುದಾಯವಲ್ಲ. ಜನಸಂಖ್ಯೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗಾಣಿಗ ಸಮಾಜ 4ನೇ ಸ್ಥಾನದಲ್ಲಿದೆ. ಮುಂದಿನ ದಿನ ಪ್ರತಿ ತಾಲೂಕಿನಲ್ಲೂ ಸಮಾಜದ ಜನಸಂಖ್ಯೆಯ ಸರ್ವೆ ಮಾಡಬೇಕು. ಊರಿನಲ್ಲಿ ನಡೆಯುವ ಧಾರ್ಮಿಕ ಕಾರ್ಯಕ್ರಮಕ್ಕೆ ಊರಿಗೊಂದು ಗಾಣಿಗ ಸಮುದಾಯದ ಮನೆ ಇರಬೇಕಾಗಿದೆ. ದೇವತಾ ಕಾರ್ಯದಲ್ಲಿ ಗಾಣಿಗ ಸಮಾಜ ಮುಂಚೂಣಿಯಲ್ಲಿದೆ. ಇವತ್ತಿಗೂ ಹಿಂದಿನ ಪರಂಪರೆಯನ್ನು, ಸಂಸ್ಕೃತಿಯನ್ನು ಉಳಿಸಿಕೊಂಡು ಬರುತ್ತಿರುವುದು ಗಾಣಿಗರು. ಮುಂದಿನ ದಿನ ಗಾಣಿಗರು ಎಲ್ಲಾ ಕ್ಷೇತ್ರದಲ್ಲಿ ಮುಂದೆ ಬರಬೇಕು. ಆರ್ಥಿಕ, ಶೈಕ್ಷಣಿಕ, ರಾಜಕೀಯವಾಗಿ ಬಲಾಢ್ಯರಾಗಲು ಒಂದಾಗೋಣ ಎಂದರು.

ಗಾಣಿಗ ಯಾನೆ ಸಪಲಿಗರ ಸೇವಾ ಸಂಘದ ಪುತ್ತೂರು ತಾಲೂಕು ಅಧ್ಯಕ್ಷ ಲಕ್ಷ್ಮೀಪ್ರಸಾದ್ ಬೆಟ್ಟ ಪುತ್ತೂರು ಮಾತನಾಡಿ, ಸಂಘಟನೆಯನ್ನು ಬಲಗೊಳಿಸುವ ಉದ್ದೇಶದೊಂದಿಗೆ ಯುವ ಸಮುದಾಯವು ಶೈಕ್ಷಣಿಕ, ಆರ್ಥಿಕವಾಗಿ ಬೆಳೆಯಬೇಕು. ಬಡವರಿಗೆ ಸಹಾಯ ಮಾಡುವ ಉದ್ದೇಶದಿಂದ ಈ ಸಂಘ ಮಾಡಿದ್ದೇವೆ. ಇದು ಕೇವಲ ಒಂದು ಜಾತಿ ಸಂಘವಲ್ಲ. ಎಲ್ಲಾ ಸಮುದಾಯವನ್ನು ಒಗ್ಗೂಡಿಸಿ ಕೆಲಸ ಮಾಡುವ ಉದ್ದೇಶವಿದೆ. ಸಂಘದ ಬೆಳವಣಿಗೆಯಲ್ಲಿ ನನ್ನ ಶ್ರಮಕ್ಕಿಂತ ಸಂಘದ ಸಕ್ರಿಯ ಸದಸ್ಯರ ಶ್ರಮ ಹೆಚ್ಚಿದೆ. ಅವರನ್ನು ಮುಂದಿನ ದಿನ ಅಭಿನಂದಿಸಲಾಗುವುದು ಎಂದು ಹೇಳಿದರು.

ಗಾಣಿಗರ ಯಾನೆ ಸಪಲಿಗರ ಸೇವಾ ಸಂಘದ ಕಾರ್ಯದರ್ಶಿ ಜಯಂತ ಉರ್ಲಾಂಡಿ ಪ್ರಾಸ್ತಾವಿಕವಾಗಿ ಮಾತನಾಡಿ, ನಮ್ಮ ಸಂಘ ನ. 24ಕ್ಕೆ ಪ್ರಾರಂಭಗೊಂಡಿತು. ಕೆಲವೇ ಅವಧಿಯಲ್ಲಿ ದೊಡ್ಡ ಸಮಾವೇಶ ಮಾಡಲು ಒಂದು ಸಂಚಲನ ಸೃಷ್ಟಿಯಾಗಿದೆ. ಈ ಹಿಂದೆಯೂ ಸಂಘಟನೆ ಇತ್ತು. ಆದರೆ ಅದು ಮುಂದುವರಿಯಲಿಲ್ಲ. ಈಗ ಸಂಘಟನೆ ಮತ್ತೊಮ್ಮೆ ಬಲಗೊಂಡಿದೆ. ಸಮುದಾಯದ ತೀರಾ ನಿರ್ಗತಿಕರು, ಬಡವರ ಏಳ್ಗೆಗಾಗಿ ಸಂಘ ಕೆಲಸ ಮಾಡಲಿದೆ. ಸಂಘದ ಮೂಲಕ ಕಟ್ಟಕಡೆಯ ವ್ಯಕ್ತಿಗೂ ಸೌಲಭ್ಯ ಕೊಡಿಸುವ ನಿಟ್ಟಿನಲ್ಲಿ ಕೆಲಸ ಮಾಡಲಾಗುವುದು. ಈ ನಿಟ್ಟಿನಲ್ಲಿ ಸಮಾವೇಶ ಹಮ್ಮಿಕೊಳ್ಳಲು ಪ್ರತಿದಿನ ಸಂಜೆ ಮನೆ ಮನೆಗೆ ಭೇಟಿ ಮಾಡುತ್ತಿದ್ದೇವು. ಪುತ್ತೂರಿನಲ್ಲಿ ಸುಮಾರು 1,800 ಜನರನ್ನು ಸಂಘಟಿತರನ್ನಾಗಿಸಿದ್ದೇವೆ. ನಮ್ಮೊಂದಿಗೆ ಬಲಿಷ್ಠವಾದ ಅಧ್ಯಕ್ಷರಿದ್ದು ಯುವ ಪಡೆಯನ್ನು ಸಂಘಟಿಸಿದ್ದಾರೆ. ಸಮಾವೇಶಕ್ಕೆ ದ. ಕ. ಜಿಲ್ಲೆ, ಉಡುಪಿ, ಕಾಸರಗೋಡಿನಿಂದ ಉತ್ತಮ ಪ್ರತಿಕ್ರಿಯೆ ಸಿಕ್ಕಿದೆ ಎಂದರು.

ಭಾರತೀಯ ತೈಲಿಕ್ ಸಾಹು ರಾಥೋಡ್ ಮಹಾಸಭಾ ಮುಖ್ಯ ಸಲಹೆಗಾರ ಪ್ರಹ್ಲಾದ್ ದಾಮೋದರ್‌ದಾಸ್ ಮೋದೀಜಿ, ಕೆಪಿಸಿಸಿ ಉಪಾಧ್ಯಕ್ಷ ವಿಧಾನ ಪರಿಷತ್ ಮಾಜಿ ಅಧ್ಯಕ್ಷ ವಿ. ಆರ್. ಸುದರ್ಶನ್, ಗಿರಿಜಾ ವೆಲ್ಫೇರ್ ಅಸೋಸಿಯೇಶನ್ ಮುಂಬಯಿಯ ಅಧ್ಯಕ್ಷ ಉದ್ಯಮಿ ವಸಂತ ಜಿ. ಸಾಫಲ್ಯ ಮುಂಬಯಿ, ಅಖಿಲ ಕರ್ನಾಟಕ ಗಾಣಿಗರ ಸಂಘ ಬೆಂಗಳೂರು ಇದರ ಎಂ. ಆರ್. ರಾಜಶೇಖರ ಗಾಣಿಗ, ಸಾಫಲ್ಯ ಸೇವಾ ಸಂಘ ಮುಂಬಯಿಯ ಅಧ್ಯಕ್ಷ ಶ್ರೀನಿವಾಸ ಪಿ. ಸಾಫಲ್ಯ ದಂಪತಿಯನ್ನು ಸನ್ಮಾನಿಸಿ ಗೌರವಿಸಲಾಯಿತು.

ಗಾಣಿಗ ಯಾನೆ ಸಪಲಿಗರ ಸಂಘದ ಸಮುದಾಯದ ಹಿತದೃಷ್ಟಿಯಿಂದ ಸಂಘದ ಚಟುವಟಿಕೆ ನಡೆಸಲು ಕಚೇರಿ ಮತ್ತು ಸಭಾಂಗಣದ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಶಾಶ್ವತ ಕಟ್ಟಡಕ್ಕೆ ಶಾಸಕರಲ್ಲಿ ಮನವಿ ಮಾಡಲಾಯಿತು. ಸಂಘದ ಕಾರ್ಯದರ್ಶಿ ಸಂದೀಪ್ ನೆಲ್ಲಿಕಟ್ಟೆ, ಲಕ್ಷ್ಮೀಪ್ರಸಾದ್ ಬೆಟ್ಟ, ಕಿರಣ್ ಕುಮಾರ್ ಸಾಫಲ್ಯ, ಪ್ರದೀಪ್ ಬೊಳ್ವಾರ್ ಮತ್ತು ರಾಜೇಶ್ ಕಲ್ಲೆಗ ಮನವಿ ಪತ್ರ ಮಂಡಿಸಿದರು.

ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಗಾಣಿಗ ಸಮಾಜದ ಸಾಧಕರನ್ನು ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು. ಮಂಗಳೂರು ಲೇಡಿಗೋಷನ್ ಆಸ್ಪತ್ರೆಯ ವೈದ್ಯಾಧಿಕಾರಿಗಳಾದ ಡಾ। ದುರ್ಗಾಪ್ರಸಾದ್, ಡಾ। ಸತ್ಯಶಂಕರ, ಡಾ। ಇಂದಿರಾ ಶಂಕರ್, ಮಾಜಿ ಸೈನಿಕರಾದ ಕೃಷ್ಣಪ್ಪ ಬೋಲಾರ, ದಾಮೋದರ ನೆಲ್ಯಾಡಿ, ಸುರೇಶ್ ಕೆ. ಉಪ್ಪಿನಂಗಡಿ, ಸಾಮಾಜಿಕ ಸೇವೆಯಲ್ಲಿ ತಿಮ್ಮಪ್ಪ ಸಾಫಲ್ಯ, ಜಯಂತಿ ಎಸ್. ಬಂಗೇರ, ರೋಹಿಣಿ ಕೆ. ಬಂಟ್ವಾಳ, ಶೇಷಪ್ಪ, ಧರ್ಣಪ್ಪ, ಉರಗತಜ್ಞ ತೇಜಸ್ ಗಾಣಿಗ, ಕ್ರೀಡಾ ಸಾಧಕರಾದ ಸಹನ್ ಕೊಲ್ಪೆ, ಆದರ್ಶ ಅತ್ತಾವರ, ಅವನಿ, ಅನ್ವಿ, ಪ್ರವೀಣ್ ಗಾಣಿಗ ಉರ್ಲಾಂಡಿ, ಜಯಶ್ರೀ ಗಾಣಿಗ, ಲಕ್ಷ್ಮೀ ವಿಟ್ಲ, ಅನನ್ಯ, ಲಕ್ಷ್ಮೀಸಾಗರ್ ಅವರನ್ನು ಗೌರವಿಸಲಾಯಿತು.

ಸಮುದಾಯ ಕಲಾವಿದರಾದ 'ಅನಾರ್ಕಲಿ' ಚಿತ್ರದ ನಿರ್ದೇಶಕ ಹರ್ಷಿತ್ ಸೋಮೇಶ್ವರ, 'ಕಟ್ಟೆಮಾರು' ಚಿತ್ರದ ನಟ, ನಿರ್ದೇಶಕ ರಕ್ಷಿತ್ ಗಾಣಿಗ ಅಡ್ಯಾರ್‌ಪದವು, ಕಲರ್ಸ್ ಕನ್ನಡದ ಕಿರುತೆರೆ ನಟ ರಿದ್ವನ್ ಗಾಣಿಗ ಪುತ್ತೂರು ಅವರನ್ನು ಸಂಘದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.

ಕೊಂಬು, ತಾಸೆ ಸೇವೆ ನೀಡಿದ ರವಿರಾಜ್ ಗಾಣದಕೊಟ್ಯ, ಪ್ರವೀಣ್ ಗಾಣದಕೊಟ್ಯ ಕುಂಜಾರು, ಯೋಗೀಶ್ ಕಂಬಳಗದ್ದೆ ಪುತ್ತೂರು, ವಿಶ್ವನಾಥ ಮಿತ್ತೂರು, ಚಂದ್ರ ಮಿತ್ತೂರು, ಜಯರಾಮ ಅನಂತಾಡಿ, ಹೇಮಂತ್, ಈಶ್ವರ, ರಾಜೇಶ್ ಕಂಬಳಬೆಟ್ಟು, ಹರೀಶ್, ಧನಂಜಯ, ಗೋಪಾಲ, ರಕ್ಷಾ ವಿದ್ಯಾಪುರ, ಕೃತಿಕ್, ಚಂದ್ರಪ್ಪ ಮಿತ್ತೂರು, ರಶ್ವಿನ್ ಕುಂಜಾರು ಅವರನ್ನು ಸಂಘದ ವತಿಯಿಂದ ಸನ್ಮಾನಿಸಲಾಯಿತು.

ವಿವಿಧ ಕ್ಷೇತ್ರದ ಸಾಧಕರಾದ ಸೋಮಪ್ಪ ಸಾಫಲ್ಯ, ಸಂದೇಶ್, ಮೋನಪ್ಪ, ತನ್ವಿ, ರಿದನ್ ಶ್ರೀನಿವಾಸ್, ಶ್ರೇಯಾ, ಶ್ರದ್ಧಾ ಕೆಮ್ಮಾಯಿ, ಪ್ರವೀಣ್ ಉರ್ಲಾಂಡಿ, ಕಮಲಾಕ್ಷ ಉಳ್ಳಾಲ, ರವಿ ವಾಮದಪದವು, ಮಹಾಬಲ ಅಡ್ಯಾರು, ರವಿ ಮೂಡಬಿದ್ರೆ, ಮನೀಶ್ ಮಿತ್ತೂರು, ನಾರಾಯಣ ಅವರನ್ನು ಸಂಘದ ವತಿಯಿಂದ ಪುರಸ್ಕರಿಸಲಾಯಿತು.

ಅಖಿಲ ಕರ್ನಾಟಕ ಗಾಣಿಗರ ಸಂಘ ಬೆಂಗಳೂರು ಇದರ ಎಂ. ಆರ್. ರಾಜಶೇಖರ ಗಾಣಿಗ, ಕರ್ನಾಟಕ ಗಾಣಿಗ ಅಭಿವೃದ್ಧಿ ನಿಗಮದ ಅಧ್ಯಕ್ಷ ವಿಶ್ವಾಸ್ ಕುಮಾರ್‌ದಾಸ್, ಅಖಿಲ ಕರ್ನಾಟಕ ಜ್ಯೋತಿ ನಗರ ವೈಶ್ಯ ಗಾಣಿಗ ಸಂಘದ ಅಧ್ಯಕ್ಷ ಪಿ. ಜಿ. ವಿಜಯ್ ಕುಮಾರ್, ಗಿರಿಜಾ ವೆಲ್ಫೇರ್ ಅಸೋಸಿಯೇಶನ್ ಮುಂಬಯಿಯ ಅಧ್ಯಕ್ಷ ಉದ್ಯಮಿ ವಸಂತ ಜಿ. ಸಾಫಲ್ಯ ಮುಂಬಯಿ, ಗಾಣಿಗ ಸಂಘ ಉಪ್ಪಿನಂಗಡಿ ಅಧ್ಯಕ್ಷ ಹರಿರಾಮಚಂದ್ರ, ಉದ್ಯಮಿ ಭುವನೇಶ್, ರಘು ಸಾಫಲ್ಯ ಪಾಣೆಮಂಗಳೂರು, ಮಾತೃ ಮಂಡಳಿಯ ಅಧ್ಯಕ್ಷೆ ರಮಣಿ ಡಿ. ಗಾಣಿಗ ಕುಂಜಾರು, ಪ್ರಹ್ಲಾದ್ ದಾಮೋದರ್ ಮೋದಿ ಅವರ ಪುತ್ರಿ ಸೋನಾಲ್ ಬೆನ್ ಮೋದಿ, ಅಳಿಯ ವಿರಾಜ್, ಮಧ್ಯಪ್ರದೇಶದ ಪ್ರವೀಣ್ ಸಹಿತ ಹಲವು ಮಂದಿ ಪ್ರಮುಖರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಗಾಣಿಗ ಯಾನೆ ಸಫಲಿಗರ ಸಂಘದ ಉಪಾಧ್ಯಕ್ಷ ಪ್ರದೀಪ್ ಬೊಳ್ವಾರು ರಾಜೇಶ್ ಕಲ್ಲೇಗ, ಗೌರವ ಸಲಹೆಗಾರ ಕಿರಣ್ ಸಾಫಲ್ಯ, ಗೋವರ್ಧನ್ ಕಲ್ಲೇಗ, ಪ್ರಧಾನ ಕಾರ್ಯದರ್ಶಿ ಸಂದೀಪ್ ನೆಲ್ಲಿಕಟ್ಟೆ ಅತಿಥಿಗಳನ್ನು ಗೌರವಿಸಿದರು. ಭಾಗ್ಯ, ಶರ್ವಾಣಿ, ತನ್ವಿ ಪ್ರಾರ್ಥಿಸಿದರು. ದೇವಿಪ್ರಸಾದ್ ವಂದೇ ಮಾತರಂ ಹಾಡಿದರು. ಗಾಣಿಗ ಯಾನೆ ಸಪಲಿಗರ ಸಂಘದ ಕಾರ್ಯದರ್ಶಿ ಜಯಂತ ಉರ್ಲಾಂಡಿ ಸ್ವಾಗತಿಸಿ, ವಂದಿಸಿದರು. ದೀಪಕ್ ಅಡ್ಯಾರು ಮತ್ತು ಅಕ್ಷತಾ ಕಾರ್ಯಕ್ರಮ ನಿರೂಪಿಸಿದರು.

ಗಾಣಿಗ ಯಾನೆ ಸಪಲಿಗರ ಸಂಘದ ಉಪಾಧ್ಯಕ್ಷ ಪ್ರದೀಪ್ ಬೊಳ್ವಾರು, ರಾಜೇಶ್ ಕಲ್ಲೇಗ, ವಿನಯ್ ಕಲ್ಲೇಗ, ಸಂಘದ ಪ್ರಧಾನ ಕಾರ್ಯದರ್ಶಿ ಸಂದೀಪ್ ನೆಲ್ಲಿಕಟ್ಟೆ, ಸಂಚಾಲಕರಾದ ಪ್ರಶಾಂತ್ ಮುರ, ವಿಜಯಕುಮಾರ್ ಕೊಪ್ಪಳ, ಜೊತೆ ಕಾರ್ಯದರ್ಶಿಗಳಾದ ಶಶಿಧರ್ ಕಲ್ಲೇಗ, ವಿನೋದ್ ಕುಮಾರ್, ಗೌರವ ಸಲಹೆಗಾರರಾದ ಮೋಹನ್ ನಗರ, ಸುರೇಶ್ ಎಂ., ಗೋವರ್ಧನ ಕಲ್ಲೇಗ, ವಸಂತ ಜಿ. ಸಾಫಲ್ಯ ಕುಂಜಾರು, ಖಜಾಂಜಿ ಹೇಮಚಂದ್ರ ಬೊಳ್ವಾರು, ಕಾರ್ತಿಕ್ ಕಬಕ, ಮಾತೃ ಮಂಡಳಿಯ ಉಪಾಧ್ಯಕ್ಷೆ ವನಿತಾ ಕೆ. ಟಿ. ಉರ್ಲಾಂಡಿ, ರೂಪಾ ಶ್ರೀನಿವಾಸ್, ಕಾರ್ಯದರ್ಶಿ ಸುನೀತಾ ನಗರ, ವಿಜಯಲಕ್ಷ್ಮೀ ನೆಲ್ಲಿಕಟ್ಟೆ, ಜೊತೆ ಕಾರ್ಯದರ್ಶಿ ಗುಲಾಬಿ ಯೋಗೀಶ್, ಶ್ವೇತಾ ನಾಗೇಶ್, ಕೋಶಾಧಿಕಾರಿ ಮಮತಾ ಸಂದೇಶ್, ಜಯಶ್ರೀ ಪರ್ಲಡ್ಕ ಸಹಿತ ಹಲವಾರು ಮಂದಿ ವಿವಿಧ ಕಾರ್ಯಕ್ರಮ ನಿರ್ವಹಿಸಿದರು. ಸಭೆಯಲ್ಲಿ 'ಬ್ಯಾರಿಸ್ಟರ್ ಅತ್ತಾವರ ಎಲ್ಲಪ್ಪ' ಅವರ ಚರಿತ್ರೆಯ ಪುಸ್ತಕ ವಿತರಿಸಲಾಯಿತು.

ಬೆಳಿಗ್ಗೆ ಸಭಾಂಗಣದಲ್ಲಿ ಉಪಸ್ಥಿತರಿದ್ದ 20 ವರ್ಷದಿಂದ ಮೇಲ್ಪಟ್ಟ ಮಹಿಳೆಯರಿಗೆ ಉಚಿತ ಸೀರೆ ವಿತರಣೆ ನಡೆಯಿತು. ಕಾರ್ಯಕ್ರಮದಲ್ಲಿ ವಧು-ವರರ ಅನ್ವೇಷಣೆಯ ನೋಂದಾವಣೆ ಕಾರ್ಯಕ್ರಮ ನಡೆಯಿತು.

**ಡ್ಯಾನ್ಸ್ -ಡ್ಯಾನ್ಸ್ ಗಾಣಿಗ ಟ್ರೋಫಿ- 2026 :** ಮಧ್ಯಾಹ್ನದ ಬಳಿಕ ಡ್ಯಾನ್ಸ್ ಆ್ಯಂಡ್ ಡ್ಯಾನ್ಸ್ ಗಾಣಿಗ ಟ್ರೋಫಿ-2026 ನಡೆಯಿತು. ಸೆಮಿ ಕ್ಲಾಸಿಕಲ್, ಜಾನಪದ ನೃತ್ಯ, ಸಂಸ್ಕಾರಯುತವಾದ ಚಲನಚಿತ್ರ ಗೀತೆಯ ನೃತ್ಯಕ್ಕೆ ಸ್ಪರ್ಧಿಗಳು ಹೆಜ್ಜೆ ಹಾಕಿದರು. ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ವಿಜೇತರಿಗೆ ಬಹುಮಾನ ವಿತರಣೆ ನಡೆಯಿತು. ಬಳಿಕ ದಿನೇಶ್ ಕೊಡಪದವು ಅವರಿಂದ 'ಯಕ್ಷ ತೆಲಿಕೆ' ಹಾಸ್ಯ ಕಾರ್ಯಕ್ರಮ ಪ್ರದರ್ಶನಗೊಂಡಿತು. ವಂದೇಮಾತರಂ ಗೀತೆಯೊಂದಿಗೆ ಪ್ರಾರಂಭಿಸಿ ಕಾರ್ಯಕ್ರಮವು ರಾಷ್ಟ್ರ ಗೀತೆಯೊಂದಿಗೆ ಮುಕ್ತಾಯವಾಯಿತು.

# ಕುಲಾಲ ಸಂಘ ಮುಂಬಯಿ 'ಕುಲಾಲ ಕ್ರೀಡೋತ್ಸವ' : ವಿದ್ಯಾಭ್ಯಾಸದಷ್ಟೇ ದೈಹಿಕ ಆರೋಗ್ಯ , ಕ್ರೀಡೆಯೂ ಅಷ್ಟೇ ಮುಖ್ಯ: ಸಂತೋಷ್ ಜಿ. ಶೆಟ್ಟಿ ಪನ್ವೇಲ್


ಕುಲಾಲ ಕ್ರೀಡೋತ್ಸವ 2026ವನ್ನು ಸಂತೋಷ್ ಜಿ ಶೆಟ್ಟಿ ಮತ್ತು ಭಾಸ್ಕರ್‌ಶೆಟ್ಟಿ (ದಕ್ಷಿಣ) ಅವರು ಉದ್ಘಾಟಿಸಿದಾಗ


ಸಂತೋಷ್ ಜಿ ಶೆಟ್ಟಿ ಅವರನ್ನು ಗೌರವಿಸಿದಾಗ


ಭಾಸ್ಕರ್‌ಶೆಟ್ಟಿ (ದಕ್ಷಿಣ) ಅವರನ್ನು ಗೌರವಿಸಿದಾಗ




ನವಿಮುಂಬಯಿ, ಮಾ.6- ಕುಲಾಲ ಸಂಘ ಮುಂಬಯಿ, ಮಹಾ ನಗರದಲ್ಲಿ ನೆಲೆಸಿರುವ ಸಮಾಜ ಬಾಂಧವರ ಆಶೋತ್ತರಗಳಿಗೆ ಸ್ಪಂದಿಸುತ್ತಾ ಅವಶ್ಯಕತೆ ಇದ್ದ ನಮ್ಮ ಸಮಾಜದ ಜನತೆಗೆ ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ, ಆರ್ಥಿಕ ಧಾರ್ಮಿಕ ಕ್ಷೇತ್ರಗಳಲ್ಲಿ ಉನ್ನತ ಮಟ್ಟದ ಜನ ಪರ ಸೇವೆಯನ್ನು ಸಲ್ಲಿಸಿ ಜನಮೆಚ್ಚುವ ವಿವಿಧ ಯೋಜನೆಗಳನ್ನು ಕಳೆದ 95 ವರ್ಷಗಳಿಂದ ಹಿರಿಯರ ಸಹಕಾರದಿಂದ ಹಿರಿಯರು ಸ್ಥಾಪಿಸಿದ ಪರಂಪರೆಯನ್ನು ಮುಂದುವರಿಸುತ್ತಾ ಇಂದಿನ ಯುವ ಪೀಳಿಗೆಯನ್ನು ಒಗ್ಗಟ್ಟಾಗಿ ಒಂದೇ ವೇದಿಕೆಯಲ್ಲಿ ಒಂದೇ ಕುಟುಂಬದಂತೆ ಒಟ್ಟಾಗಿರಬೇಕು. ಒಬ್ಬರಿಗೊಬ್ಬರು ಸಹಕಾರದಿಂದ ಒಬ್ಬರಿಗೊಬ್ಬರು ಆತ್ಮೀಯ ಭಾವದಿಂದ ಇರಬೇಕೆಂಬ ಉದ್ದೇಶದಿಂದ, ನವೆಂಬರ ತಿಂಗಳಿನಲ್ಲಿ ಮಂಗಳಾದೇವಿ ಹತ್ತಿರದ ಕುಲಾಲ ಭವನ ಲೋಕಾರ್ಪಣೆಯಾದ ಬಹುವೆಚ್ಚದ ಭವನ ಯಶಸ್ವಿಯಾಗಿ ನಡೆದು , ನಂತರ ಕುಲಾಲ ಸಂಘ ಮುಂಬಯಿ 5 ಸ್ಥಳೀಯ ಸಮಿತಿಯವರು ಹಾಗೂ ಯುವ ವಿಭಾಗದವರಿಂದ ಸಂಘದ ಅಧ್ಯಕ್ಷರಾದ ರಘು ಮೂಲ್ಯ ಇವರ ಅಧ್ಯಕ್ಷತೆಯಲ್ಲಿ ಹಾಗೂ ಗೌರವಾಧ್ಯಕ್ಷರಾದ ದೇವದಾಸ್ ಕುಲಾಲ್ ಇವರ ಉಪಸ್ಥಿತಿಯಲ್ಲಿ ಕುಲಾಲ ಕ್ರೀಡೋತ್ಸವ 2026 ಮಾರ್ಚ್ 1 ರಂದು ಆದಿತ್ಯವಾರ ಪನ್ವೇಲ್ ಕರ್ನಾಲ ಸ್ಪೋರ್ಟ್ಸ್ ಅಕಾಡೆಮಿ ಕಾಲ್ಸೇಖರ್ ಕಾಲೇಜ್ ಹತ್ತಿರ ಇಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು.

ಕ್ರೀಡೋತ್ಸವದ ಮುಖ್ಯ ಅತಿಥಿಗಳಾಗಿ ಸಂತೋಷ್ ಜಿ ಶೆಟ್ಟಿ (ಪನ್ವೇಲ್ ನಗರ ಪಾಲಿಕೆಯ ಕಾರ್ಪೊರೇಟರ್ ಹಾಗೂ ಮಾಜಿ ಸಭಾಪತಿ) ಮತ್ತು ಬಂಟರ ಸಂಘ ನವಿ ಮುಂಬಯಿ ಪ್ರಾದೇಶಿಕ ಸಮಿತಿಯ ಕಾರ್ಯಾಧ್ಯಕ್ಷರಾದ ಭಾಸ್ಕರ್‌ಶೆಟ್ಟಿ (ದಕ್ಷಿಣ) ಅವರು ಆಗಮಿಸಿ ಕ್ರೀಡೋತ್ಸವವನ್ನು ಉದ್ಘಾಟಿಸಿದರು.

ಮುಖ್ಯ ಅತಿಥಿ ನಗರಸೇವಕ್ ಸಂತೋಷ್ ಜಿ ಶೆಟ್ಟಿ ಮಾತನಾಡುತ್ತಾ, ಪನ್ವೇಲ್ ಗ್ಲೋಬಲ್ ಸಿಟಿಯಾಗಿ ಏಷ್ಯಾದಲ್ಲೇ ಮುಂದುವರಿಯುತ್ತಿರುವ ನಗರ. ಇಲ್ಲಿ ವೆಂಗಸರ್ಕಾರ್ ಅಕಾಡೆಮಿ ಸ್ಥಾಪನೆಯಾಗಲಿದೆ. ಉತ್ತಮ ಕ್ರೀಡಾಪಟುಗಳಿಗೆ



ಅವಕಾಶಗಳು ಲಭ್ಯವಾಗುವಂತೆ ನಾನು ಎಲ್ಲ ರೀತಿಯ ಸಹಕಾರ ನೀಡಲು ಶ್ರಮಿಸುತ್ತೇನೆ. ವಿದ್ಯಾಭ್ಯಾಸ ಎಷ್ಟು ಮುಖ್ಯವೋ ದೈಹಿಕ ಆರೋಗ್ಯ ಮತ್ತು ಶಕ್ತಿಗಾಗಿ ಕ್ರೀಡೆಯೂ ಅಷ್ಟೇ ಮುಖ್ಯವೆಂದು ಅವರು ಅಭಿಪ್ರಾಯಪಟ್ಟರು. ಕ್ರೀಡೆಯಲ್ಲಿ ಭಾಗವಹಿಸುವವರು ಗೆಲುವು-ಸೋಲನ್ನು ಸಮಾನವಾಗಿ ಸ್ವೀಕರಿಸಿ, ಇಂತಹ ಕ್ರೀಡೋತ್ಸವಗಳು ನಿರಂತರವಾಗಿ ನಡೆಯಬೇಕೆಂದು ಹಾರೈಸಿದರು.

ಭಾಸ್ಕರ್‌ಶೆಟ್ಟಿ (ದಕ್ಷಿಣ) ಮಾತಾಡುತ್ತಾ , ಇಲ್ಲಿ ಇಷ್ಟು ಕ್ರೀಡಾ ಪಟುಗಳನ್ನು ನೋಡಿದಾಗ ಅತೀವ ಗೌರವವಾಗುತ್ತದೆ . ಕ್ರೀಡೆಗೆ ಶಕ್ತಿ ಕೊಡಬೇಕು. ಕ್ರೀಡೆಯ ಬಗ್ಗೆ ಇಲ್ಲಿ ಎಲ್ಲಾ ತರಹದ ಸಹಕಾರ ಕೊಡಲು ನಾನು ಸದಾ ಸಿದ್ಧ. ಆಗಸ್ಟ್ 29ರಂದು ಭಾರತದಾದ್ಯಂತ ರಾಷ್ಟ್ರೀಯ ಕ್ರೀಡಾ ದಿನವನ್ನು ಆಚರಿಸಲಾಗುತ್ತದೆ. ಈ ದಿನವು ಭಾರತೀಯ ಹಾಕಿ ದಿಗ್ಗಜರಾದ ಮೇಜರ್ ಧ್ಯಾನ್ ಚಂದ್ ಅವರ ಜನ್ಮ ದಿನಾಚರಣೆಯ ಅಂಗವಾಗಿ ಆಚರಿಸಲಾಗುತ್ತದೆ. ಅವರು ಭಾರತದ ಹೆಮ್ಮೆಯ ಕ್ರೀಡಾಪಟುವಾಗಿದ್ದು, ತಮ್ಮ ಅದ್ಭುತ ಕೌಶಲ್ಯದಿಂದ ಭಾರತಕ್ಕೆ ಅನೇಕ ಅಂತಾರಾಷ್ಟ್ರೀಯ ಗೌರವಗಳನ್ನು ತಂದಿದ್ದರು.ಯುವಜನರಲ್ಲಿ ಕ್ರೀಡೆಗಳ ಬಗ್ಗೆ ಆಸಕ್ತಿ ಮತ್ತು ಪ್ರೇರಣೆಯನ್ನು ದೈಹಿಕ ಆರೋಗ್ಯ, ಶಿಸ್ತಿನ ಜೀವನ ಹಾಗೂ ತಂಡ ಭಾವನೆಯ ಮಹತ್ವವನ್ನು ಒತ್ತಿ ಹೇಳುವುದು. ಅದಕ್ಕೆ ಎಲ್ಲರೂ ಭಾಗವಹಿಸಬೇಕು. ವಿದ್ಯಾಭ್ಯಾಸ ಎಷ್ಟು ಮುಖ್ಯವೋ, ದೈಹಿಕ ಆರೋಗ್ಯಕ್ಕೂ ಕ್ರೀಡೆ ಅಷ್ಟೇ ಮುಖ್ಯ ಎಂಬ ಸಂದೇಶವನ್ನು ಈ ದಿನ ಸಾರುತ್ತದೆ . ಕ್ರೀಡೆಗೆ ಹೆಚ್ಚಿನ ಮಹತ್ವವನ್ನು ಕೊಡಬೇಕು ಎಂದು ಕ್ರೀಡಾ ಪಟುಗಳಿಗೆ ಹಿತ ವಚನ ಹೇಳಿದರು.

ಸಂಘದ ಅಧ್ಯಕ್ಷರಾದ ರಘು ಮೂಲ್ಯರವರು ಮಾತಾಡುತ್ತಾ, ಇಂದಿನ ಮುಖ್ಯ ಅತಿಥಿಯವರಿಗೆ ಧನ್ಯವಾದ ಅರ್ಪಿಸುತ್ತಾ ಯುವ ವಿಭಾಗದವರು ಮುಂದೆ ಬಂದು ಪ್ರತಿಯೊಂದು ಕಾರ್ಯಕ್ರಮದಲ್ಲಿ ಭಾಗವಹಿಸಬೇಕು. ಕ್ರೀಡೆಯಲ್ಲಿ ಅಥವಾ ಯಾವುದೇ ಕಾರ್ಯಕ್ರಮದಲ್ಲಿ ಬಿನ್ನಾಭಿಪ್ರಾಯ ಬರುತ್ತದೆ, ಅದರಲ್ಲಿ ಮನಸ್ತಾಪ ಪಡದೆ ನಾವೆಲ್ಲರೂ ಒಂದೇ ಕುಟುಂಬಿಕರಂತೆ ಸೇರಬೇಕು. ಯಾವುದೇ ಕಾರ್ಯಕ್ರಮವನ್ನು ಮುಂದಾಲೋಚನೆಯಿಂದ ಮಾಡಬೇಕು. ಭಾಸ್ಕರ್ ಶೆಟ್ಟಿಯವರ ಸಹಕಾರದಿಂದ ಈ ಸ್ಪೋರ್ಟ್ಸ್ ಅಕಾಡೆಮಿ ಸಿಕ್ಕಿದೆ. ಯುವಕರು ಮಕ್ಕಳು ಕ್ರೀಡೆಯಲ್ಲಿ ವಂಚಿತರಾಗದೇ ಪ್ರತಿಯೊಬ್ಬರು ಭಾಗವಹಿಸಬೇಕು . ಕ್ರೀಡೆ ಮತ್ತು ಯುವಕರನ್ನು ಬಲಪಡಿಸಲು ಸಂಘದ ಆಡಳಿತ ಮಂಡಳಿ ಎಲ್ಲಾ ವಿಧದಲ್ಲಿ ಸಹಕಾರ ನೀಡುತ್ತದೆ ಎಂದು ವಿನಂತಿಸಿದರು.

ಗೌ. ಅಧ್ಯಕ್ಷರಾದ ದೇವದಾಸ್ ಕುಲಾಲ್, ಮಹಿಳಾ ವಿಭಾಗದ ಕಾರ್ಯಾಧ್ಯಕ್ಷೆ ಸುಚಿತಾ ಬಂಜನ್ ಇವರು ತನ್ನ ಅನಿಸಿಕೆಗಳನ್ನು ವ್ಯಕ್ತ ಪಡಿಸಿದರು.

ಸಂಘದ ಕಿರು ಪರಿಚಯವನ್ನು ಗೌರವ ಅಧ್ಯಕ್ಷರಾದ ದೇವದಾಸ್ ಕುಲಾಲ್ ಮಾಡಿದರೆ, ಕ್ರೀಡೋತ್ಸವದ ನಿರೂಪಣೆಯನ್ನು ಗೌರವ ಪ್ರ . ಕಾರ್ಯದರ್ಶಿ ಕರುಣಾಕರ್‌ಸಾಲಿಯಾನ್ ಮಾಡಿದರು.

ವಂದನಾರ್ಪಣೆಯನ್ನು ಜೊತೆ ಕಾರ್ಯದರ್ಶಿ ಲಕ್ಷ್ಮಣ್ ಸಿ ಮೂಲ್ಯ ಮಾಡಿದರು.

ಯುವ ವಿಭಾಗದ ಕಾರ್ಯಾಧ್ಯಕ್ಷರಾ ವೇಣುಗೋಪಾಲ್ ಕರ್ಕೇರ ಸಂಘದ ಪದಾಧಿಕಾರಿಗಳು ಕ್ರೀಡೋತ್ಸವದಲ್ಲಿ ಪಾಲ್ಗೊಂಡ ಅತಿಥಿಗಳನ್ನು ಗೌರವಿಸಿದರು.

ನಡೆದ ಕ್ರೀಡೋತ್ಸವದಲ್ಲಿ ಯುವಕರು, ಮಹಿಳೆಯರು ಹಾಗೂ ಹಿರಿಯರ ವಿಭಾಗಗಳಲ್ಲಿ ಕ್ರಿಕೆಟ್ ಪಂದ್ಯಾವಳಿಗಳು ಯಶಸ್ವಿಯಾಗಿ ನೆರವೇರಿದವು. ವಿವಿಧ ಪ್ರದೇಶಗಳಿಂದ ಭಾಗವಹಿಸಿದ ತಂಡಗಳು ಉತ್ಸಾಹಭರಿತ ಸ್ಪರ್ಧೆ ನೀಡಿ ಕ್ರೀಡಾಭಿಮಾನಿಗಳನ್ನು ರಂಜಿಸಿದವು.

ಕ್ರೀಡೋತ್ಸವಕ್ಕೆ ಕೋಶಾಧಿಕಾರಿ ಜಯ ಅಂಚನ್,ಕೋಶಾಧಿಕಾರಿ ರೇಣುಕಾ ಸಾಲಿಯಾನ್. ಆಡಳಿತ ಮಂಡಳಿಯ ಸಂಜೀವ ಎನ್ ಬಂಗೇರ, ಉಮೇಶ್ ಬಂಗೇರ,ಜೊತೆ, ಹಾಗೂ ವಿವಿಧ ಸ್ಥಳೀಯ ಸಮಿತಿಯ ಕಾರ್ಯಾಧ್ಯಕ್ಷರಾದ ಸದಾನಂದ್ ಕುಲಾಲ್, ಆನಂದ್ ಕುಲಾಲ್, ಶಂಕರ್ ವೈ ಮೂಲ್ಯ,

ಉದಯ್ ಅತ್ತಾವರ, ಹರಿಯಪ್ಪ ಮೂಲ್ಯ, , ಕುಶ ಕುಲಾಲ್ , ನ್ಯಾ . ಉಮಾನಾಥ್ ಮೂಲ್ಯ ,ಕೃಪೇಶ್ ಕುಲಾಲ್, ಸುಕುಮಾರ್ ಸಾಲಿಯಾನ್, ನಟೇಶ್ ಬಂಗೇರ ,ಮಹಿಳಾ ವಿಭಾಗದ ರತ್ನಾ ಡಿ ಕುಲಾಲ್, ಆರತಿ ಕೆ ಸಾಲಿಯಾನ್,ರಸಿಕ ಸಿ ಮೂಲ್ಯ, ಜಯಂತಿ ಬಂಗೇರ ,ಬೇಬಿ ವಿ ಬಂಗೇರ, ಉಷಾ ಆರ್‌ಮೂಲ್ಯ , ಕುಶಲ ಜಿ ಬಂಗೇರ, ಗೀತಾ ಡಿ ಮೂಲ್ಯ, ಇಂದಿರಾ ಆರ್‌ಮೂಲ್ಯ, ಹರಿಣಾಕ್ಷಿ ಬಂಗೇರ , ನವಿ ಮುಂಬಯಿ ಯುವ ವಿಭಾಗದ ಪ್ರಸಾದ್ ಮೂಲ್ಯ, ಸೂರಜ್ ಕುಲಾಲ್ , ಅಕ್ಷತ್ ಮೂಲ್ಯ ಯಶಸ್ಸಿಗೆ ಸಹಕರಿಸಿದರು.

Printed & Published by Mr. Pravin Murlidhar Shingote on behalf of Shree Ambika Printers & Publications and Printed at Shree Ambika Printers & Publications, Plot No. D-222/1/B, T T C Industrial Area, MIDC, Shiravane, Opp. D. Y. Patil Stadium, Near Mumbai-Pune Highway, Nerul (E), Navi Mumbai, Thane-400706. Published from 215, 2nd Flr, Narayan Udyog Bhavan, Industrial Estate, Lalbaug, Mumbai - 400012. Tel. : 24715208 To 2 471 5224. Founder : Late Murlidhar Ananta Shingote. Editor : Chandrashekhar Palethady (*Responsible for selection of News under the PRB Act) Regd.No.MH/by South 296 RNI No.: 56957/92 E-mail : shrirammalla@gmail.com

# ಭಕ್ತಿ ಭಾವದ ಬಾಷ್ಪಾಂಜಲಿ



## SHRI ANAND S. SHETTY

***Ulepady Dejappa Shetty Mane***

***Kannamvar Nagar, Vikhroli (E), Mumbai***

**Death:**
**23-02-2026**

*ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ ಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಸದಾ ಮುಗುಳ್ನಗೆಯೊಂದಿಗೆ ಎಲ್ಲರ ಸುಖದುಃಖಗಳಲ್ಲಿ ಪಾಲ್ಗೊಂಡು ನಮ್ಮೆಲ್ಲರ ಪ್ರೀತಿ ವಿಶ್ವಾಸ ಗೌರವಕ್ಕೆ ಪಾತ್ರರಾದ ನಿಮ್ಮ ಅಗಲುವಿಕೆ ನಮಗೆ ಅತೀವ ದುಃಖವನ್ನುಂಟು ಮಾಡಿದ್ದು, ನಮ್ಮನ್ನಗಲಿದ ನಿಮ್ಮ ದಿವ್ಯಾತ್ಮಕ್ಕೆ ಭಗವಂತ ಚಿರ ಸದ್ಗತಿಯನ್ನು ಕರುಣಿಸಲಿ, ನಿಮ್ಮನ್ನಗಲಿದ ದುಃಖವನ್ನು ಸಹಿಸುವ ಶಕ್ತಿಯನ್ನು ನಿಮ್ಮ ಪತ್ನಿ, ಬಂಧು ಬಳಗ ಮತ್ತು ಕುಟುಂಬಸ್ಥರಿಗೆ ಕರುಣಿಸಲಿ ಎಂದು ಪ್ರಾರ್ಥಿಸುತ್ತಿದ್ದೇವೆ.*

**ಬಾಬು ಶೀನ ಶೆಟ್ಟಿ ಮತ್ತು ಮಕ್ಕಳು ಕುಡುಪುಲಾಜೆ ತೆಳ್ಳಾರ್**

**ಶ್ರೀಮತಿ ಸರೋಜಿನಿ ಸದಾನಂದ ಶೆಟ್ಟಿ**
**ಕುಡುಪುಲಾಜೆ ತೆಳ್ಳಾರ್**

**ಶ್ರೀಮತಿ ಶಶಿಕಲಾ ಮನೋಹರ್ ಶೆಟ್ಟಿ**
**ಶಮಾ ಮನೋಹರ್ ಶೆಟ್ಟಿ**
**ಸಾತ್ವಿಕ್ ಮನೋಹರ್ ಶೆಟ್ಟಿ**

**ಶ್ರೀಮತಿ ಶಿಲ್ಪಾ ರಮೇಶ್ ಶೆಟ್ಟಿ**
**ರಿತ್ವಿಕ್ ರಮೇಶ್ ಶೆಟ್ಟಿ**
**ರಿಯಾಂಶಿ ರಮೇಶ್ ಶೆಟ್ಟಿ**

**ಶ್ರೀಮತಿ ವಿದ್ಯಾ ಭಾಸ್ಕರ್ ಶೆಟ್ಟಿ**
**ಪಂಚಮಿ ಭಾಸ್ಕರ್ ಶೆಟ್ಟಿ**
**ಪರಿಣಿತಿ ಭಾಸ್ಕರ್ ಶೆಟ್ಟಿ**

**ಶ್ರೀಮತಿ ಅಂಬಾ ರಮೇಶ್ ಶೆಟ್ಟಿ**
**ಕುಡುಪುಲಾಜೆ ತೆಳ್ಳಾರ್**

**ಮಹೇಶ್ ಆರ್. ಶೆಟ್ಟಿ**
**ಕುಡುಪುಲಾಜೆ ತೆಳ್ಳಾರ್**

**ಶ್ರೀಮತಿ ಜಯಶ್ರೀ ಮಹೇಶ್ ಶೆಟ್ಟಿ**
**ನಿಶ್ಚಯ್ ಮಹೇಶ್ ಶೆಟ್ಟಿ**

**ಯೋಗೀಶ್ ಆರ್. ಶೆಟ್ಟಿ, ತೆಳ್ಳಾರ್**
**ಮತ್ತು ಮಕ್ಕಳು**

**ಗಿರೀಶ್ ಆರ್. ಶೆಟ್ಟಿ, ತೆಳ್ಳಾರ್**
**ಶ್ರೀಮತಿ ಪೂಜಾ ಗಿರೀಶ್ ಶೆಟ್ಟಿ**
**ಯಕ್ಷಿತ್ ಗಿರೀಶ್ ಶೆಟ್ಟಿ**

**ಮನೋಹರ್ ಶೆಟ್ಟಿ, ಉಡುಪಿ**
**ಶ್ರೀಮತಿ ಆಶಾಲತಾ ಮನೋಹರ್ ಶೆಟ್ಟಿ**
**ಮಯೂರ್ ಮನೋಹರ್ ಶೆಟ್ಟಿ**
**ತುಷಾರ್ ಮನೋಹರ್ ಶೆಟ್ಟಿ**

**ಶ್ರೀಮತಿ ಸುಗುಣ ವಿಶ್ವನಾಥ್ ಶೆಟ್ಟಿ**
**ಕುಡುಪುಲಾಜೆ ತೆಳ್ಳಾರ್**

**ಸುದೇಶ್ ವಿ. ಶೆಟ್ಟಿ ತೆಳ್ಳಾರ್**
**ಶ್ರೀಮತಿ ಸಂಧ್ಯಾ ಸುದೇಶ್ ಶೆಟ್ಟಿ**
**ಛವಿ ಸುದೇಶ್ ಶೆಟ್ಟಿ**
**ರಿಶಾನ್ ಸುದೇಶ್ ಶೆಟ್ಟಿ**

**ರಾಜೇಶ್ ವಿ. ಶೆಟ್ಟಿ ತೆಳ್ಳಾರ್**

**ರತ್ನಾಕರ್ ಶೆಟ್ಟಿ, ನಾಸಿಕ್**
**ಶ್ರೀಮತಿ ಸುಜಯಾ ರತ್ನಾಕರ ಶೆಟ್ಟಿ**
**ಆಶಿತ್ ರತ್ನಾಕರ ಶೆಟ್ಟಿ**
**ಅಯಿಷಿ ರತ್ನಾಕರ ಶೆಟ್ಟಿ**

**ಶಿವರಾಮ್ ಶೀನ ಶೆಟ್ಟಿ**
**ಕುಡುಪುಲಾಜೆ ತೆಳ್ಳಾರ್**

**ಶ್ರೀಮತಿ ಇಂದಿರಾ ಶಿವರಾಮ್ ಶೆಟ್ಟಿ**
**ಶ್ರೀಮತಿ ಶಿಲ್ಪಾ ಪುಷ್ಪರಾಜ್ ಶೆಟ್ಟಿ**
**ಮತ್ತು ಮಕ್ಕಳು**

**ಶ್ರೀಮತಿ ಶಾಂತಿ ಸುಧಾಕರ ಶೆಟ್ಟಿ**
**ಮತ್ತು ಮಕ್ಕಳು**

**ದಿಲೀಪ್ ಶಿವರಾಮ್ ಶೆಟ್ಟಿ**

**ಶ್ರೀಮತಿ ಸಂಪಾ ಕೃಷ್ಣ ಶೆಟ್ಟಿ**
**ಕುಡುಪುಲಾಜೆ ತೆಳ್ಳಾರ್**

**ಪ್ರಸಾದ್ ಕೃಷ್ಣ ಶೆಟ್ಟಿ**
**ಮತ್ತು ಮಕ್ಕಳು**

**ಪ್ರಸನ್ನ ಕೃಷ್ಣ ಶೆಟ್ಟಿ**
**ಮತ್ತು ಮಕ್ಕಳು**

**ಶ್ರೀಮತಿ ಪೂರ್ಣಿಮಾ ಬಿ. ಶೆಟ್ಟಿ**
**ಮತ್ತು ಮಕ್ಕಳು**

**ಪ್ರಶಾಂತ್ ಕೃಷ್ಣ ಶೆಟ್ಟಿ**

**ತೆಳ್ಳಾರ್ ಕುಡುಪುಲಾಜೆ ಕುಟುಂಬಸ್ಥರು**